ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 37 | ಸೆಪ್ಟೆಂಬರ್ 9–15, 2019 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com



ಇನ್ನೊಂದು ರಾಜಕೀಯ ಸೇಡಿನ ಕ್ರಮವೆ?



ಮಹಾರಾಜ ಹರಿಸಿಂಗ್‌ಗೆ ಬೆಂಬಲ ಕೊಟ್ಟಿದ್ದ ಶಕ್ತಿಗಳು ಯಾವುವು?



ಅಮೇರಿಕ: ಕಪ್ಪು ಬಿಳಿಯರ ನಡುವೆ ಮುಂದುವರೆದ ಅಸಮಾನತೆ



ರಾಷ್ಟ್ರೀಕೃತ ಜೀವ ವಿಮೆಯನ್ನು ಉಳಿಸೋಣ

ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಕಳಚಿ ಹಾಕುವ ವಿಲೀನ ಪ್ರಕ್ರಿಯೆ

ಕೋಟ್ಯಂತರ ಭಾರತೀಯರನ್ನು ಹಣಕಾಸು ವ್ಯವಸ್ಥೆಯಿಂದ ಹೊರಗಿಡುವ ಸರಕಾರದ ನಡೆಯನ್ನು ಒಟ್ಟಾಗಿ ಪ್ರತಿರೋಧಿಸಬೇಕು–ಸಿಪಿಐ(ಎಂ) ಪೊಲಿಟ್ ಬ್ಯುರೊ

ಹತ್ತು ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ವಿಲೀನಗೊಳಿಸಿ ನಾಲ್ಕು ಬ್ಯಾಂಕ್‌ಗಳಾಗಿ ಮಾಡುವ ಸರಕಾರದ ನಿರ್ಧಾರಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾದ ವಿರೋಧವನ್ನು ವ್ಯಕ್ತಪಡಿಸಿದೆ. ಈ ಮೂಲಕ ಸಾರ್ವಜನಿಕ ವಲಯದ ಬ್ಯಾಂಕುಗಳ ಸಂಖ್ಯೆಯನ್ನು 27 ರಿಂದ 12ಕ್ಕೆ ಇಳಿಸಲಾಗುತ್ತಿದೆ ದು ಅದು ಹೇಳಿದೆ.

ಸಾರ್ವತ್ರಿಕ ಹಣಕಾಸು ಒಳಗೊಳ್ಳುವಿಕೆ ತರಲಿಕ್ಕಾಗಿ ಎಂಬ ಪ್ರಚಾರಕ್ಕೆ ತದ್ವಿರುದ್ಧವಾಗಿ ಇದು ಕೋಟ್ಯಂತರ ಭಾರತೀಯರನ್ನು ಮತ್ತಷ್ಟು ಪ್ರಮಾಣದಲ್ಲಿ ಹೊರಗಿಡುತ್ತದೆ. ಈಗಾಗಲೇ ಜಗತ್ತಿನಲ್ಲಿ ಬ್ಯಾಂಕಿಂಗ್ ಅನುಕೂಲ ಅತ್ಯಂತ ಕಡಿಮೆ ಇರುವ ದೇಶಗಳಲ್ಲಿ ಭಾರತವೂ ಒಂದು. ಸರಕಾರದ ನಡೆ ಗ್ರಾಮೀಣ ಭಾರತದ ಸಣ್ಣ ಉಳಿತಾಯಗಳನ್ನು ನೀಚ ಚಿಟ್ ಫಂಡ್‌ವಾಲಾಗಳು ಮತ್ತು ಹಣದಾಹದ ಪಿಶಾಚಿಗಳ ತೆಕ್ಕೆಗೆ ಇನ್ನಷ್ಟು ತಳ್ಳುತ್ತದೆ.

ರಾಷ್ಟ್ರೀಕೃತ ಬ್ಯಾಂಕಿಂಗ್ ವಲಯವನ್ನು ಖಾಸಗೀಕರಿಸಲಿಕ್ಕಾಗಿಯೇ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ದುರ್ಬಲಗೊಳಿಸಲಾಗುತ್ತಿದೆ. ಈ ವಿಲೀನಗಳು ಬ್ಯಾಂಕ್ ಶಾಖೆಗಳ ಜಾಲವನ್ನು ಕುಂಠಿತಗೊಳಿಸುತ್ತವೆ, ಈ ಮೂಲಕ ಈ ಸೌಲಭ್ಯ ಸಿಗದಂತೆ, ವಿಶೇಷವಾಗಿ ಗ್ರಾಮೀಣ ಭಾರತದಲ್ಲಿ, ವಂಚಿಸಲಾಗುತ್ತದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ಅವುಗಳ ಐದು ಸಹವರ್ತಿ ಬ್ಯಾಂಕುಗಳನ್ನು ವಿಲೀನಗೊಳಿಸಿದ ನಂತರ ಸುಮಾರು 1000 ಶಾಖೆಗಳನ್ನು ಮುಚ್ಚಲಾಯಿತು. ಇತ್ತೀಚೆಗೆ ದೇನಾ ಬ್ಯಾಂಕ್ ಮತ್ತು ವಿಜಯಾ ಬ್ಯಾಂಕನ್ನು ಬ್ಯಾಂಕ್ ಆಫ್ ಬರೋಡದೊಂದಿಗೆ ವಿಲೀನ ಮಾಡಿದ್ದರ ಫಲಿತಾಂಶವಾಗಿ 800 ಶಾಖೆಗಳು ಮುಚ್ಚುತ್ತವೆ ಎಂದು ವರದಿಯಾಗಿದೆ.

ಬ್ಯಾಂಕುಗಳ ವಿಲೀನದಿಂದ ಅವುಗಳ ಬಲ ಹೆಚ್ಚುತ್ತದೆ, ದೊಡ್ಡ ಬ್ಯಾಂಕುಗಳು ಮೂಡಿ ಬರುತ್ತವೆ ಎಂದು ಈ ವಿಲೀನವನ್ನು ಸರಕಾರ ಸಮರ್ಥಿಸಿಕೊಳ್ಳುತ್ತಿದೆ. ಆದರೆ ಸಾರ್ವಜನಿಕ ವಲಯದ ಬ್ಯಾಂಕುಗಳ ಶೇರು ಹಿಂಪಡೆತ ಮತ್ತು ಅವುಗಳಲ್ಲಿ ಸರಕಾರದ ಪಾಲನ್ನು ಇಳಿಸಿ 50ಶೇ.ಕ್ಕಿಂತ ಕೆಳಗಿಳಿಸುವುದೇ ಸರಕಾರದ ಧೋರಣೆಯಾಗಿದೆ. ದೊಡ್ಡ ಬ್ಯಾಂಕುಗಳನ್ನು ರಚಿಸಿದ ಮೇಲೆ ಈ ಖಾಸಗೀಕರಣದ ಪ್ರಕ್ರಿಯೆಯನ್ನು ಆರಂಭಿಸುವ ಯೋಜನೆ ಈ ಸರಕಾರದ್ದು.

ಈ ನಡೆಯ ಮೂಲಕ ಸರಕಾರ ಸಾರ್ವಜನಿಕ ವಲಯದ ಬ್ಯಾಂಕುಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಕಾರಣಗಳನ್ನು ಕೂಡ ಸರಕಾರ ಮರೆಮಾಚುತ್ತಿದೆ. ದೊಡ್ಡ ಕಾರ್ಪೊರೇಟ್ ಗುಂಪುಗಳು ತಾವು ಪಡೆದ ಸಾಲಗಳನ್ನು ಮರುಪಾವತಿ ಮಾಡದೆ ವ್ಯಾಪಕ ಪ್ರಮಾಣದಲ್ಲಿ ಸುಸ್ತಿ ಮಾಡಿಕೊಂಡಿರುವುದರಿಂದಾಗಿ ಮತ್ತು ಸರಕಾರ ಈ ಅಪಾರ ಸಾಲಗಳ ವಸೂಲಿಯಾಗುವಂತೆ ಖಾತ್ರಿಪಡಿಸಿಕೊಳ್ಳುವಲ್ಲಿ ವಿಫಲವಾಗಿರುವುದರಿಂದಾಗಿ ಅಪಾರ ಪ್ರಮಾಣದಲ್ಲಿ ಬ್ಯಾಂಕುಗಳ ಎನ್.ಪಿ.ಎ.ಗಳು(ಕಾರ್ಯ ನಿರ್ವಹಿಸದ ಆಸ್ತಿಗಳು) ರಾಶಿ ಬೀಳುತ್ತಿವೆ. ಎನ್.ಪಿ.ಎ. ಗಳು ಕಳೆದ ಐದು ವರ್ಷಗಳಲ್ಲಿ ನಾಲ್ಕು ಪಟ್ಟು ಹೆಚ್ಚಿವೆ. ಮತ್ತು ಕನಿಷ್ಟ 5.5ಲಕ್ಷ ಕೋಟಿ ರೂ.ಗಳಷ್ಟು ಕಾರ್ಪೊರೇಟ್ ಬಂಟರುಗಳ ಸಾಲಗಳನ್ನು ಬಿಟ್ಟು ಕೊಡಲಾಗಿದೆ. ಸಾರ್ವಜನಿಕ ವಲಯದ ಬ್ಯಾಂಕುಗಳು ಐ.ಬಿ.ಸಿ.(ಪಾಪರು ಮತ್ತು ದಿವಾಳಿ ಸಂಹಿತೆ) ಪ್ರಕ್ರಿಯೆಯ ಮೂಲಕ ತಾವು ನೀಡಿದ ಸಾಲಗಳ ಒಂದು ಗಮನಾರ್ಹ ಭಾಗವನ್ನು ಬಿಟ್ಟು ಬಿಡುವಂತೆ ಬಲವಂತ ಮಾಡಲಾಗುತ್ತಿದೆ. ಬ್ಯಾಂಕುಗಳ ವಿಲೀನ ಸಾಲಮೊತ್ತಗಳ ವಸೂಲಿಯ ಸಮಸ್ಯೆಯನ್ನೇನನ್ನೂ ಪರಿಹರಿಸುವುದಿಲ್ಲ.

ಇದು ಬ್ಯಾಂಕ್ ರಾಷ್ಟ್ರೀಕರಣದ 50ನೇ ವಾರ್ಷಿಕೋತ್ಸವದ ವರ್ಷ. ಆದರೆ ಮೋದಿ ಸರಕಾರ, ಸಾರ್ವಜನಿಕ ವಲಯದ ಬ್ಯಾಂಕಿಂಗ್ ವ್ಯವಸ್ಥೆಯನ್ನು ಜನತೆಯ ಹಿತದೃಷ್ಟಿಯಿಂದ ಬಲಪಡಿಸುವ ಬದಲು ಅದನ್ನು ಕಳಚಿ ಹಾಕಲು ಉದ್ಯುಕ್ತವಾಗಿದೆ. ಇದನ್ನು ಬ್ಯಾಂಕ್ ನೌಕರರು, ಕಾರ್ಮಿಕ ಸಂಘಗಳು ಮತ್ತು ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಟ್ಟಾಗಿ ಕಾರ್ಯಾಚರಣೆಗಳನ್ನು ನಡೆಸಿ ಪ್ರತಿರೋಧಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಅಸ್ಸಾಂ ಎನ್.ಆರ್.ಸಿ.: ಹೆಸರು ಕೈಬಿಟ್ಟವರಿಗೆ ನ್ಯಾಯವನ್ನು ಖಾತರಿಪಡಿಸಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

"ಕೋಮುವಾದಿ ಅಜೆಂಡಾಕ್ಕಾಗಿ ದೇಶದ ಇತರೆಡೆಗಳಲ್ಲೂ ಎನ್. ಆರ್. ಸಿ,ಗೆ ನಮ್ಮ ವಿರೋಧವಿದೆ"

ಅಸ್ಸಾಂನ "ರಾಷ್ಟ್ರೀಯ ನಾಗರಿಕರ ದಾಖಲೆ" (ಎನ್.ಆರ್.ಸಿ.)ಯ ಅಂತಿಮ ಪಟ್ಟಿಯ ಪ್ರಕಟಣೆಯ ಫಲಿತಾಂಶವಾಗಿ 10.06 ಲಕ್ಷ ಮಂದಿ ಪಟ್ಟಿಯಲ್ಲಿ ಹೆಸರು ಕಾಣದೆ ಅತಂತ್ರರಾಗಿದ್ದಾರೆ. ಇಷ್ಟೊಂದು ದೊಡ್ಡ ಸಂಖ್ಯೆ ಬಹಳಷ್ಟು ಭಾರತೀಯ ನಾಗರಿಕರನ್ನು ಈ ಪಟ್ಟಿಯಿಂದ ಕೈಬಿಡಲಾಗಿದೆಯೇ ಎಂಬ ಭೀತಿಗಳನ್ನು ಬಡಿದೆಬ್ಬಿಸಿರುವುದು ಉಚಿತವೇ ಆಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಅಭಿಪ್ರಾಯ ಪಟ್ಟಿದೆ.

ಈಗ ಈ ಪಟ್ಟಿಯಲ್ಲಿ ಸ್ಥಾನ ಪಡೆಯದಿರುವ ಎಲ್ಲ ಭಾರತೀಯ ನಾಗರಿಕರನ್ನು ಇದರಲ್ಲಿ ಸೇರಿಸುವಂತೆ ಖಾತ್ರಪಡಿಸುವುದು ಮಹತ್ವದ ಕೆಲಸವಾಗಿದೆ ಎಂದಿರುವ ಪೊಲಿಟ್ ಬ್ಯುರೊ ಅದಕ್ಕಾಗಿ ಸೂಚಿಸಿರುವ ಕ್ರಮಗಳು ಹೀಗಿವೆ:

ಮೊದಲನೆಯದಾಗಿ, ಈ ಪಟ್ಟಿಯಿಂದ ಹೊರಗಿಟ್ಟಿರುವವರ ಸ್ಥಾನಮಾನ ಮತ್ತು ಹಕ್ಕುಗಳು ಏನು ಎಂದು ಸರಕಾರ ವಿವರಿಸಬೇಕು. ಅವರ ಮನವಿಗಳ ವಿಚಾರಣೆ ನಡೆಸುವಾಗ ಮತ್ತು ಈ ಪ್ರಕ್ರಿಯೆ ಮುಗಿಯುವ ವರೆಗೆ ಅವರಿಗೆ ಈಗಿರುವ ಹಕ್ಕುಗಳು ಮತ್ತು ಸೌಲಭ್ಯಗಳು ಮುಂದುವರೆಯಬೇಕು. ಈ ವಿಷಯವನ್ನು ಚರ್ಚಿಸಲು ಅಸ್ಸಾಂ ನಲ್ಲಿ ಒಂದು ಸರ್ವಪಕ್ಷ ಸಭೆಯನ್ನು ಕರೆಯಬೇಕು.

ಎರಡನೆಯದಾಗಿ, ಈಗ ಹೇಳಿರುವ ವಿಧಾನವೆಂದರೆ, ಪಟ್ಟಿಯಲ್ಲಿ ಸೇರ್ಪಡೆಯಾಗದವರು 120 ದಿನಗಳೊಳಗೆ ಇದಕ್ಕಾಗಿ ನೇಮಿತ ವಿದೇಶೀಯರ ನ್ಯಾಯಮಂಡಳಿಗೆ ವಿಚಾರಣೆಗೆ ಸಲ್ಲಿಸಬಹುದು. ವಿದೇಶೀಯರ ನ್ಯಾಯಮಂಡಳಿ ಒಂದು ನ್ಯಾಯಾಂಗ ಸಂಸ್ಥೆಯಲ್ಲ. ಅವುಗಳ ಕಾರ್ಯನಿರ್ವಹಣೆ ಒಂದು ಕಾರ್ಯಾಂಗದಂತೆಯೇ ಇದೆ. ಅಲ್ಲದೆ, ನಿಯಮಗಳಂತೆ, ಅದು ಅರ್ಜಿಯನ್ನು ವಿಚಾರಣೆಗೆ ತಗೊಳ್ಳಲು ನಿರ್ಧರಿಸುವ ಮೊದಲು ಅದರ ವಿಚಾರಾರ್ಹತೆಯನ್ನು ಪರಿಶೀಲಿಸುತ್ತದೆ. ಮನವಿಯ ಹಕ್ಕನ್ನು ಒಂದು ನ್ಯಾಯಾಂಗದ ವ್ಯವಸ್ಥೆಯ ಮೂಲಕವೇ ಜರುಗಿಸಬೇಕು ಎಂದು ಸಿಪಿಐ(ಎಂ) ಬಯಸುತ್ತದೆ. ಈ ಉದ್ದೇಶಕ್ಕೆ ವಿದೇಶೀಯರ ನ್ಯಾಯಮಂಡಳಿಗಳು ಸಾಕಾಗುವುದಿಲ್ಲ.

ಮೂರನೆಯದಾಗಿ, ನ್ಯಾಯಮಂಡಳಿಗಳು ವಿದೇಶೀಯರು ಎಂದು ಘೋಷಿಸಿರುವವರನ್ನು ಸ್ಥಾನಬದ್ಧತೆಯ ಶಿಬಿರಗಳಿಗೆ ಕಳಿಸುವುದನ್ನು ನಿಲ್ಲಿಸಬೇಕು, ಏಕೆಂದರೆ, ಇದು ಮೂಲಭೂತ ಮಾನವ ಹಕ್ಕಿನ ಉಲ್ಲಂಘನೆಯಾಗುತ್ತದೆ.

ಎನ್.ಆರ್.ಸಿ. ಪಟ್ಟಿಯಲ್ಲಿ ಸೇರಿಸದೇ ಇರುವವರಿಗೆ ನ್ಯಾಯ ದೊರಕಿಸಲು ಸಿಪಿಐ(ಎಂ) ವಿವಿಧ ವೇದಿಕೆಗಳ ಮೂಲಕ ಎಲ್ಲ ಅಗತ್ಯ ನೆರವುಗಳನ್ನು ಒದಗಿಸುತ್ತದೆ, ಕಾನೂನಿನ ನೆರವು ಪಡೆಯಲು ನೆರವಾಗುತ್ತದೆ ಎಂದು ಪೊಲಿಟ್ ಬ್ಯುರೊ ಹೇಳಿದೆ.

ಅಸ್ಸಾಂ ನಲ್ಲಿ ಎನ್.ಆರ್.ಸಿ. ಯನ್ನು ಸಮಕಾಲಿಕಗೊಳಿಸಬೇಕಾಗಿ ಬರಲು ನಿರ್ದಿಷ್ಟ ಚಾರಿತ್ರಿಕ ಮತ್ತು ರಾಜಕೀಯ ಸಂದರ್ಭಗಳಿದ್ದವು. ಆದರೆ ಕೇಂದ್ರದಲ್ಲಿರುವ ಬಿಜೆಪಿ ಸರಕಾರ ಆಶಿಸುವಂತೆ ಇದನ್ನು ದೇಶದ ಇತರೆಡೆಗಳಲ್ಲಿಯೂ ಆರಂಭಿಸುವುದಕ್ಕೆ ಸಿಪಿಐ(ಎಂ)ನ ವಿರೋಧವಿದೆ, ಏಕಂದರೆ ಬಿಜೆಪಿ ಈ ಪ್ರಕ್ರಿಯೆಯನ್ನು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ತನ್ನ ವಿಭಜನಕಾರೀ ಕೋಮುವಾದಿ ಅಜೆಂಡಾಕ್ಕೆ ಬಳಸಿಕೊಳ್ಳ ಬಯಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಎಚ್ಚರಿಸಿದೆ.

ಯುಸುಫ್ ತರಿಗಾಮಿ ದಿಲ್ಲಿಯ ಏಮ್ಸ್‌ಗೆ
– ಸುಪ್ರಿಂ ಕೋರ್ಟ್ ಆದೇಶಕ್ಕೆ ಸಿಪಿಐ(ಎಂ) ಸ್ವಾಗತ



ತರಿಗಾಮಿ ಬಿಡುಗಡೆ ಅರ್ಜಿಯನ್ನು ಮುಂದುವರೆಸಲು ಮತ್ತು ಕಂಡಿರುವ ಸಂಗತಿಗಳನ್ನು ದಾಖಲಿಸಲು ಅವಕಾಶ
– ಯೆಚುರಿ ಅಫಿಡವಿಟ್‌ನಲ್ಲಿ ಕೋರಿಕೆ

ಪುಟ 12 ನೋಡಿ

ಪೋಲೀಸರ ಆಕ್ರಮಣಕೋರ ಕಾನೂನುಹೀನತೆಯ ಪ್ರದರ್ಶನ ತಕ್ಷಣ ಕ್ರಮ ಕೈಗೊಳ್ಳುವಂತೆ ರಾಜಸ್ಥಾನ ಮುಖ್ಯಮಂತ್ರಿಗೆ ಯೆಚುರಿ ಪತ್ರ


ಆಗಸ್ಟ್ 28 ರಂದು ರಾಜಸ್ಥಾನದ ಸಿಕಾರ್‌ನಲ್ಲಿ ಸಮವಸ್ತ್ರದಲ್ಲಿದ್ದ ಪೋಲೀಸರು ಸಿಪಿಐ(ಎಂ) ಕಚೇರಿಯೊಳಗೆ ಯಾವುದೇ ವಾರಂಟ್ ಇಲ್ಲದೆ ಕಾನೂನುಬಾಹಿರವಾಗಿ ನುಗ್ಗಿ ಮಾಜಿ ಶಾಸಕರೂ ಆಗಿರುವ ರಾಜ್ಯದ ಹಿರಿಯ ಸಿಪಿಐ(ಎಂ) ಮುಖಂಡರಾದ ಆಮ್ರ ರಾಮ್ ಮತ್ತು ಪೇಮ ರಾಮ್ ರವರನ್ನು ಬಂಧಿಸಿ ಕರೆದೊಯ್ದರು, ಇತರ ಹಲವರನ್ನು ಎಳೆದುಕೊಂಡು ಹೋದರು. ಇದನ್ನು ಬಲವಾಗಿ ಖಂಡಿಸುತ್ತ ಮತ್ತು ಪ್ರತಿಭಟಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ರಾಜಸ್ಥಾನದ ಮುಖ್ಯಮಂತ್ರಿ ಅಶೋಕ ಗೆಹ್ಲೋಟ್ ಅವರಿಗೆ ಪತ್ರ ಬರೆದಿದ್ದಾರೆ.

ಇದೊಂದು ಅಭೂತಪೂರ್ವ ಕಾರ್ಯಾಚರಣೆ. ಪೋಲೀಸರು ಸಿಪಿಐ(ಎಂ) ಕಚೇರಿಯೊಳಕ್ಕೆ ಯಾವುದೇ ವಾರಂಟ್ ಇಲ್ಲದೆ ನುಗ್ಗಿ

ಅಕ್ರಮಣಕೋರ ಕಾನೂನುಹೀನತೆಯ ಪ್ರದರ್ಶನ ನೀಡಿದ್ದಾರೆ. ಆಮ್ರ ರಾಮ್ ಅವರನ್ನು ಬಿಡುಗಡೆ ಮಾಡಲಾಯಿತು. ಆದರೆ ಪೇಮ ರಾಮ್ ಮರುದಿನವಷ್ಟೇ ಕೋರ್ಟಿನಿಂದ ಜಾಮೀನು ಪಡೆದೇ ಹೊರಬಂದರು.

ರಾಜಸ್ಥಾನ ಸರಕಾರ ಈ ಕಾನೂನುಹೀನತೆಯ ಪ್ರದರ್ಶನಕ್ಕೆ ಹೊಣೆಯಾದವರ ಮೇಲೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಯೆಚುರಿ ಮುಖ್ಯಮಂತ್ರಿಗಳನ್ನು ಆಗ್ರಹಿಸಿದ್ದಾರೆ.

ಇದಕ್ಕೆ ಮೊದಲು ಪೋಲೀಸರು ಯುವಜನರು ಮತ್ತು ವಿದ್ಯಾರ್ಥಿನಿಯರ ವಿರುದ್ಧ ಅಮಾನುಷವಾಗಿ ವರ್ತಿಸಿದರು ಎಂದೂ ತಿಳಿದುಬಂದಿದೆ. ಅವರು ಒಂದು ಮಹಿಳಾ ಕಾಲೇಜಿನ ಚುನಾವಣೆಗಳಲ್ಲಿ ಫಲಿತಾಂಶಗಳಲ್ಲಿ ಮೋಸ ನಡೆಸಲಾಗಿದೆ ಎಂದು ಅದರ ವಿರುದ್ಧ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದರು. ಯುವತಿಯರ ಮೇಲೆ ಪುರುಷ ಪೋಲೀಸರು ಕೈಮಾಡಿದ್ದಾರೆ. ಪತ್ರಿಕಾ ಫೊಟೋಗಳು ಮತ್ತು ವೀಡಿಯೋಗಳು ಪೋಲೀಸರ ಅಮಾನುಷ ವರ್ತನೆ ಎಷ್ಟಿತ್ತು ಎಂಬುದನ್ನು ತೋರಿಸುತ್ತವೆ, ಹಲವರಿಗೆ ಎಲುಬುಗಳು ಮುರಿಯುವಂತೆ ಹೊಡೆಯಲಾಗಿದೆ. ಇವೆಲ್ಲದಕ್ಕೆ ಹೊಣೆಯಾದವರ ಮೇಲೆ ತಕ್ಷಣವೇ ಸರಕಾರ ಕ್ರಮ ಕೈಗೊಳ್ಳುತ್ತದೆ ಎಂದು ಯೆಚುರಿ ಮುಖ್ಯಮಂತ್ರಿಗಳಿಗೆ ಬರೆದ ಈ ಪತ್ರದಲ್ಲಿ ಆಶಿಸಿದ್ದಾರೆ.



ಸಂಪಾದಕೀಯ

ಇದು ಇನ್ನೊಂದು ರಾಜಕೀಯ ಸೇಡಿನ ಕ್ರಮವೇ?

ದೆಹಲಿಯಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ.) ಬಂಧನದಲ್ಲಿರುವ ಕರ್ನಾಟಕದ ಕಾಂಗ್ರೆಸ್ ಮುಖಂಡ, ಮಾಜಿ ಸಚಿವ, ಕನಕಪುರ ಕ್ಷೇತ್ರದ ಹಾಲಿ ಶಾಸಕ ಡಿ.ಕೆ. ಶಿವಕುಮಾರ್ ತನ್ನ ಆಸ್ತಿ ಮತ್ತು ಹಣಕಾಸು ವ್ಯವಹಾರಗಳ ಬಗ್ಗೆ ಅನೇಕ ಕಠಿಣವಾದ ಪ್ರಶ್ನೆಗಳನ್ನು ಉತ್ತರಿಸಬೇಕಾಗಿದೆ. ಆದಾಯ ತೆರಿಗೆ ಇಲಾಖೆ (ಐ.ಡಿ)ಮತ್ತು ಜಾರಿ ನಿರ್ದೇಶನಾಲಯಕ್ಕೆ ಸರಿಯಾದ ಉತ್ತರ ದೊರಕುವವರೆಗೆ ಈ ಪ್ರಶ್ನೆಗಳನ್ನು ಕೇಳುವ ಅಧಿಕಾರವು ಜವಾಬ್ದಾರಿಯೂ ಅವರಿಗೆ ಇದೆ. ಇನ್ನೊಬ್ಬ ಹಿರಿಯ ಕಾಂಗ್ರೆಸ್ ನಾಯಕ, ಕೇಂದ್ರದ ಮಾಜಿ ಮಂತ್ರಿ ಆಗಿದ್ದ ಪಿ. ಚಿದಂಬರಂ ಅವರ ಪ್ರಕರಣದಂತೆಯೇ ಡಿ.ಕೆ.ಶಿವಕುಮಾರ್‌ರನ್ನು ದೆಹಲಿಗೆ ಕರೆಯಿಸಿಕೊಂಡ ಜಾರಿ ನಿರ್ದೇಶನಾಲಯ ನಾಲ್ಕು ದಿನಗಳ ಕಾಲ ತೀವ್ರ ವಿಚಾರಣೆ ನಡೆಸಿ ಬಂಧಿಸಿದ್ದು ಹಲವಾರು ಅನುಮಾನಗಳಿಗೆ ಹಾಗೂ ತರ್ಕಗಳಿಗೆ ಎಡೆಮಾಡಿಕೊಟ್ಟಿದೆ. ಈ ಪ್ರಶ್ನೆಗಳು ಮುಖ್ಯವಾಗಿ ಶಿವಕುಮಾರ್ ವಿರುದ್ಧ ಕೈಗೊಳ್ಳಲಾದ ಕ್ರಮಗಳ ಹಿಂದಿನ ಉದ್ದೇಶ ಹಾಗೂ ಅವುಗಳನ್ನು ಜಾರಿಮಾಡಿದ ವಿಧಾನಕ್ಕೆ ಸಂಬಂಧಪಡುತ್ತವೆ. ಶಿವಕುಮಾರ್ ವಿರುದ್ಧ ಹಾಡೇಹಗಲಲ್ಲೇ ಅಂದರೆ ಬಹಿರಂಗವಾಗಿ, ಎಲ್ಲರೂ ನೋಡುವ ಹಾಗೆ ಕ್ರಮ ಕೈಗೊಳ್ಳಲಾಯಿತು. ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ದೊರಕುವಂತೆ ನೋಡಿಕೊಳ್ಳಲಾಯಿತು. ಇದೆಲ್ಲವು ಕೈಗೊಳ್ಳಲಾದ ಕ್ರಮಗಳ ಹಿಂದಿನ ಉದ್ದೇಶದ ಮೇಲೆ ಕರಿನೆರಳು ಬೀಳಲು ಕಾರಣವಾಗಿದೆ. ಇದು, ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಸಹಜ ತನಿಖಾ ವಿಧಾನ ಎಂದು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಹೇಳಿದ್ದಾರೆ.

ಕಾನೂನಾತ್ಮಕವಾಗಿ ವಿಶ್ಲೇಷಿಸುವುದಾದರೆ, ಶಿವಕುಮಾರ್ ಮಾಡಿರಬಹುದಾದ ಯಾವುದೇ ಕಾನೂನು ಉಲ್ಲಂಘನೆಗೆ ಅವರೇ ಹೊಣೆಗಾರರು. ಅವರೊಬ್ಬ 'ಸಂತ' ಎಂದು ಯಾರೂ ಹೇಳುತ್ತಿಲ್ಲ. ಲಭ್ಯವಿರುವ ಮಾಹಿತಿಗಳ ಪ್ರಕಾರ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲೇಬೇಕೆಂಬ ಇ.ಡಿ. ಅಧಿಕಾರಿಗಳ ಹಠ ಅನುಮಾನಸ್ಪದವಾಗಿದೆ. ಆರೋಪಿ ವಿಚಾರಣೆಯಿಂದ ತಪ್ಪಿಸಿಕೊಳ್ಳಬಹುದೆಂಬ ರಿಸ್ಕ್ ಇಲ್ಲದಿರುವಾಗ, ಪ್ರಕರಣ ದಾಖಲೆಗಳ ಆಧಾರಿತವಾಗಿದ್ದು, ಬಹುತೇಕ ಎಲ್ಲ ದಾಖಲೆಗಳು ವಿಚಾರಣಾ ಅಧಿಕಾರಿಗಳ ವಶದಲ್ಲಿರುವಾಗ, ಸಾಕ್ಷಿಗಳನ್ನು ನಾಶಮಾಡುವ ಸಾಧ್ಯತೆ ಇಲ್ಲದಿರುವಾಗ ಬಂಧನಕ್ಕೆ ಒಳಪಡಿಸಿ ತನಿಖೆ ಮಾಡಬೇಕೆಂಬ ಇ.ಡಿ. ಅಧಿಕಾರಗಳ ದೋರಣೆಯನ್ನು ಒಪ್ಪಲಾಗದು.

ವಿಚಾರಣೆಗೆ ಸಹಕರಿಸುವುದೆಂದರೆ ವಿಚಾರಣಾಧಿಕಾರಿಗಳು ಬಯಸುವುದನ್ನೇ ಹೇಳುವುದು ಎಂದು ಅರ್ಥವಲ್ಲ. ಪ್ರತಿಯೊಬ್ಬ ಆರೋಪಿಗೂ ತನ್ನನ್ನು ಸಮರ್ಥಿಸಿಕೊಳ್ಳುವ ಹಕ್ಕಿದೆ. ವಿಚಾರಣಾ ಅಧಿಕಾರಿಗಳು ಪುರಾವೆಗಳನ್ನು ಸಂಗ್ರಹಿಸಿ ತರಬೇಕು. ಅದು ಅವರ ಕರ್ತವ್ಯ. ತಮಗೆ ಬೇಕಾದ ಉತ್ತರವನ್ನು, ಪುರಾವೆಯನ್ನು ಪಡೆಯಲು ಆರೋಪಿಯನ್ನು ವಶಕ್ಕೆ ತೆಗೆದುಕೊಂಡು, ಮಾನಸಿಕವಾಗಿ ಕುಗ್ಗಿಸಿ, ಚಿತ್ರಹಿಂಸೆ ನೀಡುವುದು ಕಾನೂನುಬಾಹಿರ, ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ.

ದ್ವೇಷ ಸಾಧನೆಗಾಗಿ ವ್ಯಕ್ತಿಯನ್ನು ಆಯ್ಕೆಮಾಡಿ ಟಾರ್ಗೆಟ್ ಮಾಡಿ ಕಾನೂನು ಕ್ರಮಕ್ಕೆ ಒಳಪಡಿಸುವುದು ಇಲ್ಲಿ ಎದ್ದು ಕಾಣುವ ಇನ್ನೊಂದು ಆಕ್ಷೇಪಾರ್ಹ ಬೆಳವಣಿಗೆ. ಇಲ್ಲಿ ಕೇವಲ ವಿರೋಧ ಪಕ್ಷದವರನ್ನು ಮುಖ್ಯವಾಗಿ ಕಾಂಗ್ರೇಸ್ ಪಕ್ಷದವರನ್ನು ಟಾರ್ಗೆಟ್ ಮಾಡಲಾಗಿದೆ. ಆಳುವ ಪಕ್ಷದ ಕಡೆ ಇರುವವರು, ಆಪರೇಷನ್ ಕಮಲ ಮೂಲಕ ಆಳುವ ಪಕ್ಷಕ್ಕೆ ಹಾರುವವರು, ಗಂಭೀರ ಸ್ವರೂಪದ ಆರೋಪಗಳಿಗೆ ಒಳಗಾಗಿದ್ದರೂ ಆಳುವ ಪಕ್ಷಕ್ಕೆ ನಿಷ್ಠೆಯನ್ನು ಸಾರುವವರು ಯಾವುದೇ ವಿಚಾರಣೆ, ಯಾವುದೇ ತನಿಖೆ, ಯಾವುದೇ ಕಾನೂನು ಕ್ರಮದ ಭಯವಿಲ್ಲದೆ ಸುರಕ್ಷಿತವಾಗಿರುವಂತೆ ಕಾಣುತ್ತಿದ್ದಾರೆ.

ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಾರೆ ಎಂದರೆ ಯಾರೂ ನಂಬಲಾರರು. ಕೇಂದ್ರ ಮಟ್ಟದ ವಿವಿಧ ತನಿಖಾ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ದುರ್ಬಳಕೆ ಮಾಡುತ್ತಿರುತ್ತದೆ ಎಂಬುದು ಬಹಳ ಹಳೆಯ ಆರೋಪ. ಪ್ರಸಕ್ತ ಪ್ರಕರಣದಲ್ಲಿ ಬಿಜೆಪಿ ನಾಯಕರು ನೀಡಿದ ಹೇಳಿಕೆಗಳನ್ನು ಗಮನಿಸಿದರೆ, ಪ್ರಕರಣಕ್ಕೆ ರಾಜಕೀಯ ಬಣ್ಣ ಅಂಟಿಕೊಂಡಿರುವುದು ಸ್ಪಷ್ಟವಾಗುತ್ತದೆ. ಅದು ಗುಜರಾತ್ ಶಾಸಕರ ಪ್ರಸ್ತಾಪವೇ ಆಗಲಿ, ಅಮಿತ್ ಶಾ ರನ್ನು ಬಂಧಿಸಿ ಜೈಲಿನಲ್ಲಿ ಇಟ್ಟ ವಿಷಯವೇ ಆಗಲಿ, ಬಿಜೆಪಿಯವರ ಸೇಡಿನ ರಾಜಕಾರಣದತ್ತ ಬೆರಳು ತೋರಿಸುತ್ತದೆ. ಸ್ವತಂತ್ರವಾಗಿ ಮತ್ತು ಪಾರದರ್ಶಕವಾಗಿ ಕೆಲಸ ಮಾಡಬೇಕಾದ ತನಿಖಾ ಸಂಸ್ಥೆಗಳು ಆಳುವ ಪಕ್ಷದ ಒತ್ತಡಕ್ಕೆ ಮಣಿದು ಆಯ್ದ ಪ್ರಕರಣಗಳ ವಿಚಾರಣೆ ನಡೆಸುವುದು ಅವುಗಳ ವಿಶ್ವಾಸಾರ್ಹತೆಗೆ ಧಕ್ಕೆ ತರದೆ ಇರಲಾರದು.

●



ಪ್ರಾಂತ ರೈತ ಮತ್ತು ಕೂಲಿಕಾರರ ಸಂಘದ ಹಾಗೂ ಸಿಐಟಿಯೂ ಪದಾಧಿಕಾರಿಗಳ ಆಗ್ರಹ

ಷರತ್ತು ವಿಧಿಸದೆ ಸಾಲಮನ್ನಾ ಮಾಡಿ

ಯಾದಗಿರಿ: ನೆರೆ ಮತ್ತು ಬರದಿಂದ ಕಂಗೆಟ್ಟಿರುವ ರೈತರ ನೆರವಿಗೆ ಬರಲು ರಾಜ್ಯ ಸರ್ಕಾರ 2 ಲಕ್ಷದವರೆಗಿನ ಸಾಲವನ್ನು ಯಾವುದೇ ಷರತ್ತುಗಳನ್ನು ಹಾಕದೇ ಮನ್ನಾ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳು ಈಡೇರಿಸುವಂತೆ ಆಗ್ರಹಿಸಿ ಸಿಐಟಿಯು ಕರ್ನಾಟಕ ಪ್ರಾಂತ ರೈತ ಹಾಗೂ ಕೂಲಿಕಾರರ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿ ಕಚೇರಿ ಎದುರು ಸೆ. 5 ರಂದು ಪ್ರತಿಭಟನೆ ನಡೆಸಿದರು.

ಜಿಲ್ಲೆಯಲ್ಲಿ ಬರಗಾಲದಿಂದ ರೈತರು ತೊಂದರೆಯಲ್ಲಿದ್ದಾರೆ. ಸಾಲ ಮಾಡಿ ಬೀಜ, ರಸಗೊಬ್ಬರ ತಂದು ಈ ವರ್ಷ ಬಿತ್ತನೆ ಮಾಡಿದ್ದರು. ಆದರೆ, ಪ್ರವಾಹ ಬಂದು ಬೆಳೆದು ನಿಂತ ಬೆಳೆ ಎಲ್ಲ ನೀರಲ್ಲಿ ಕೊಚ್ಚಿ ಹೋಗಿದ್ದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಹೀಗಾಗಿ ರಾಜ್ಯ ಸರ್ಕಾರ ಕೂಡಲೇ ರೈತರ ನೆರವಿಗೆ ಧಾವಿಸಬೇಕು ಎಂದು ಆಗ್ರಹಿಸಿದರು.

ನೆರೆ ಹಾವಳಿಯಿಂದ ಮನೆ ಕಳೆದುಕೊಂಡ ಬಡವರಿಗೆ 5 ಲಕ್ಷ ಪರಿಹಾರ ನೀಡಬೇಕು. ಬಗರ್ ಹುಕುಂ ಸಾಗುವಳಿದಾರ ರೈತರು, ಕೃಷಿ ಕೂಲಿಕಾರರನ್ನು ಒಕ್ಕಲೆಬ್ಬಿಸದೆ ಸಾಗುವಳಿ ಚೀಟಿ ಮತ್ತು ಪಹಣಿ ನೀಡಬೇಕು. ನೆರೆ ಹಾವಳಿಗೆ ತುತ್ತಾದ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಿ, ತಿಂಗಳಿಗೆ ಬೇಕಾದ ಆಹಾರ ಧಾನ್ಯ ನೀಡಬೇಕು. ಸುರಪುರ ತಾಲ್ಲೂಕಿನ ನೀಲಕಂಠರಾಯನ ಗಡ್ಡಿ ಗ್ರಾಮಸ್ಥರಿಗೆ ಪ್ರವಾಹದಿಂದ ಹಾನಿಯಾದ ಸೇತುವೆ ದುರಸ್ತಿಗೊಳಿಸಬೇಕು. ಫಸಲ್ ಬೀಮಾ ಯೋಜನೆಯಲ್ಲಿನ ಲೋಪಗಳನ್ನು ಸರಿಪಡಿಸಿ ಸಮರ್ಪಕವಾಗಿ ಜಾರಿ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು ಎಂದು ಆಗ್ರಹಿಸಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್. ಎಂ.ಸಾಗರ್, ರೈತ ಮುಖಂಡ ಚನ್ನಪ್ಪ ಆನೆಗುಂದಿ, ಗಣೇಶ ಅನವಾರ, ಸಿದ್ದಲಿಂಗಯ್ಯ ಹಿರೇಮಠ, ಮುದಕಪ್ಪ ಚಾಮನಳ್ಳಿ ಇದ್ದರು.

ಬ್ಯಾಂಕುಗಳ ವಿಲೀನ: ಸಮಾನ ಮನಸ್ಕ ಸಂಘಟನೆಗಳಿಂದ ಪ್ರತಿಭಟನೆ

ವರದಿ: ವಾ.ಉ.



ಬ್ಯಾಂಕುಗಳ ವಿಲೀನ ಪ್ರಕ್ರಿಯೆಗೆ ಚಾಲನೆ ನೀಡಿದ ಕೇಂದ್ರ ಸರಕಾರದ ಕ್ರಮವನ್ನು ಖಂಡಿಸಿ ಸಿಐಟಿಯು, ಬಿಇಎಫ್‌ಐ, ಡಿವೈಎಫ್‌ಐ, ಎಐಕೆಎಸ್ ಸಂಘಟನೆಗಳ ಜಂಟಿ ನೇತೃತ್ವದಲ್ಲಿ ಸಮಾನ ಮನಸ್ಕ ಸಂಘಟನೆಗಳ ಸಹಕಾರದೊಂದಿಗೆ ಮಂಗಳೂರಿನಲ್ಲಿ ದ.ಕ.ಜಿಲ್ಲಾಧಿಕಾರಿಗಳ ಕಚೇರಿ ಎದುರು ಸಪ್ಟೆಂಬರ್ 3 ರಂದು ಪ್ರತಿಭಟನಾ ಪ್ರದರ್ಶನ ಜರಗಿತು.

ಪ್ರತಿಭಟನಾ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಬ್ಯಾಂಕು ನೌಕರರ ಸಂಘಟನೆ (ಬಿಇಎಫ್‌ಐ)ಯ ಅಖಿಲ ಭಾರತ ನಾಯಕ ಬಿ.ಎಂ. ಮಾಧವ, 10 ರಾಷ್ಟ್ರೀಕೃತ ಬ್ಯಾಂಕುಗಳನ್ನು ವಿಲೀನಗೊಳಿಸಿ ನಾಲ್ಕು ಬ್ಯಾಂಕುಗಳನ್ನಾಗಿ ಮಾಡುವ ಕ್ರಮವನ್ನು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಘೋಷಿಸಿರುವುದರಿಂದ ಬ್ಯಾಂಕಿಂಗ್ ಕ್ಷೇತ್ರದ ತೊಟ್ಟಿಲು ಎಂದು ಹೆಸರಾಗಿರುವ ಅವಿಭಜಿತ ದ.ಕ.ಜಿಲ್ಲೆಯ ಪ್ರಮುಖ ಬ್ಯಾಂಕುಗಳೇ ತಮ್ಮ ಹೆಸರನ್ನು ಕಳೆದುಕೊಳ್ಳಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

1969ರಲ್ಲಿ ನಡೆದ ಬ್ಯಾಂಕ್ ರಾಷ್ಟ್ರೀಕರಣದಿಂದಾಗಿ ಬ್ಯಾಂಕುಗಳು ಭಾರತದ ಗ್ರಾಮೀಣ ಪ್ರದೇಶಗಳಿಗೂ ನಗರದ ಬೀದಿಗಳಿಗೂ ವಿಸ್ತರಿಸಿದ್ದವು. ಸಾಮಾನ್ಯ ಜನರೂ ಬ್ಯಾಂಕಿಗೆ ಸಂಪರ್ಕ ಹೊಂದುವಂತಾಯಿತು. 2008 ರಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನಲ್ಲಿ ಪಶ್ಚಿಮ ರಾಷ್ಟ್ರಗಳ ಬ್ಯಾಂಕುಗಳು ದಿವಾಳಿ ಹೊಂದಿದ್ದರೂ, ಭಾರತದ ಆರ್ಥಿಕತೆ ಮಾತ್ರ ಭದ್ರವಾಗಿ ಉಳಿಯಿತು. ಇದಕ್ಕೆ ಭಾರತದ ಬ್ಯಾಂಕುಗಳು ರಾಷ್ಟ್ರೀಕರಣವೇ ಕಾರಣ ಎಂದರು.

ಸಿಐಟಿಯು ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿ ಮಾತನಾಡಿ, ಬ್ಯಾಂಕುಗಳು ಎಲ್‌ಐಸಿ ಸೇರಿದಂತೆ ಸಾರ್ವಜನಿಕ ಆರ್ಥಿಕ ಸಂಸ್ಥೆಗಳು ರಾಷ್ಟ್ರದ ಆರ್ಥಿಕತೆಗೆ ಬುನಾದಿಯಾಗಿದ್ದು, ಖಾಸಗಿ ರಂಗದ ಕ್ರಿಯಾಶೀಲತೆಗೆ ದಾರಿ ಮಾಡಿಕೊಟ್ಟಿವೆ. ಈಗ ಅದೇ ಖಾಸಗಿ ರಂಗ ಬೃಹದಾಕಾರವಾಗಿ ಬೆಳೆದು ಸಾರ್ವಜನಿಕ ರಂಗವನ್ನೇ ಬಲಿ ತೆಗೆದುಕೊಳ್ಳಲು ಹೊರಟಿದೆ. ಸಾರ್ವಜನಿಕ ರಂಗದ ಆರ್ಥಿಕ ಸಂಸ್ಥೆಗಳು ದೇಶದ ಅಭಿವೃದ್ಧಿಗೆ ಕಾರಣವಾಗಿದ್ದಲ್ಲದೆ, ಬಡತನ ನಿರ್ಮೂಲನೆಗೂ ಪ್ರಮುಖ ಪಾತ್ರ ವಹಿಸಿವೆ ಎಂದು ಹೇಳಿದರು.

ಪ್ರತಿಭಟನೆಯನ್ನುದ್ದೇಶಿಸಿ ಬ್ಯಾಂಕ್ ನೌಕರರ ಸಂಘಟನೆಯ ಹಿರಿಯ ಮುಖಂಡರಾದ ಟಿ.ಆರ್.ಭಟ್, ಎ.ಆರ್.ಕಾರಂತ, ಡಿವೈಎಫ್‌ಐ ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಪ್ರಾಂತ ರೈತ ಸಂಘದ ಜಿಲ್ಲಾ ನಾಯಕ ಕೆ.ಯಾದವ ಶೆಟ್ಟಿ ಮಾತನಾಡಿದರು.

ಕರಾವಳಿ ಜಿಲ್ಲೆಯ ಬ್ಯಾಂಕುಗಳಿಗೆ ಒದಗಿದ ಸಂಕಷ್ಟಗಳ ಬಗ್ಗೆ ಕಲಾವಿದ ಹುಸೈನ್ ಕಾಟಿಪಳ್ಳ ಸ್ವತ: ರಚಿಸಿದ ಗೀತೆಯನ್ನು ಹಾಡಿದರು.

ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾ ನಾಯಕರಾದ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಯು.ಬಿ.ಲೋಕಯ್ಯ, ಶಿವಕುಮಾರ್, ರಮಣಿ, ಬ್ಯಾಂಕ್ ನೌಕರರ ಸಂಯುಕ್ತ ಸಮಿತಿಯ ಮುಖಂಡರಾದ ವಿನ್ಸೆಂಟ್ ಡಿಸೋಜ, ಕೆ.ರಾಘವ, ಬಿಎಎಫ್‌ಐ ಮುಖಂಡರಾದ ಪುರುಷೋತ್ತಮ ಪೂಜಾರಿ, ಸುನಿಲ್ ರಾಜ್, ಡಿವೈಎಫ್‌ಐ ನಾಯಕರಾದ ಸಂತೋಷ್ ಬಜಾಲ್, ನವೀನ್ ಕೊಂಚಾಡಿ, ಸಾದಿಕ್ ಕಣ್ಣೂರು, ರೈತ ಸಂಘದ ಮುಖಂಡರಾದ ಸದಾಶಿವ ದಾಸ್, ವಾಸುದೇವ ಉಚ್ಚಿಲ್, ವಿಮಾ ನೌಕರರ ಸಂಘದ ಮುಖಂಡರಾದ ರಾಘವೇಂದ್ರ ರಾವ್, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ಜಯಂತಿ ಶೆಟ್ಟಿ, ಸಮುದಾಯ ಸಾಂಸ್ಕೃತಿಕ ಸಂಘಟನೆಯ ಮನೋಜ್ ವಾಮಂಜೂರು, ಎಸ್‌ಎಫ್‌ಐ ಜಿಲ್ಲಾ ನಾಯಕ ಸಿನಾನ್ ಬೆಂಗ್ರೆ, ದಲಿತ ಹಕ್ಕುಗಳ ಸಮಿತಿಯ ಜಿಲ್ಲಾದ್ಯಕ್ಷ ತಿಮ್ಮಯ್ಯ ಕೊಂಚಾಡಿ, ನಿವೃತ್ತ ಪೊಲೀಸ್ ಅಧಿಕಾರಿ ಟಿಸಿಎಂ ಶರೀಫ್, ನ್ಯಾಯವಾದಿ ದಿನೇಶ್ ಹೆಗ್ಡೆ ಉಳಿಪ್ಪಾಡಿ, ಪ್ರಾಧ್ಯಾಪಕರಾದ ಪಟ್ಟಾಭಿರಾಮ ಸೋಮಯಾಜಿ, ಪ್ರಗತಿಪರ ಚಿಂತಕ ಡಾ.ಕೃಷ್ಣಪ್ಪ ಕೊಂಚಾಡಿ, ಮಾಜಿ ಕಾರ್ಪೊರೇಟರ್ ದಯಾನಂದ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ರೈತ ಸಮಸ್ಯೆಗಳನ್ನು ನಿವಾರಿಸಲು ಆಗ್ರಹಿಸಿ ರೈತ ಕಾರ್ಮಿಕರ ಸಂಯುಕ್ತ ಪ್ರತಿಭಟನೆ



ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರಕಾರವು ಅನುಸರಿಸುತ್ತಿರುವ ಆಕ್ರಮಣಕಾರಿ ಆರ್ಥಿಕ ನೀತಿಗಳಿಂದಾಗಿ ರೈತರ, ಕಾರ್ಮಿಕರ ಮತ್ತು ಕೃಷಿ ಕೂಲಿಕಾರರ ಪರಿಸ್ಥಿತಿ ಅತ್ಯಂತ ದಾರುಣವಾಗುತ್ತಿದೆ. ಇದನ್ನು ಪ್ರತಿಭಟಿಸಿ ರಾಷ್ಟ್ರಾದ್ಯಂತ ಎಐಕೆಎಸ್ ಮತ್ತು ಸಿಐಟಿಯು ನೇತೃತ್ವದಲ್ಲಿ ಸಪ್ಟೆಂಬರ್ 5 ರಂದು ನಡೆಸಲಾಗುತ್ತಿರುವ ಪ್ರತಿಭಟನೆಗಳ ಭಾಗವಾಗಿ ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ದ.ಕ.ಜಿಲ್ಲಾ ಪ್ರಾಂತ ರೈತ ಸಂಘ ಮತ್ತು ಸಿಐಟಿಯು ದ.ಕ.ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಯಿತು.

ಪ್ರತಿಭಟನೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಯಾದವ ಶೆಟ್ಟಿ ಮಾತನಾಡಿ, ದೇಶದ ಅನೇಕ ಭಾಗಗಳಲ್ಲಿ ಭೀಕರ ಮಳೆ ಮತ್ತು ಪ್ರವಾಹದಿಂದಾಗಿ ರೈತರ ಬೆಳೆ, ಭೂಮಿ ನಾಶವಾಗಿದೆ, ಅದಕ್ಕೆ ಶೀಘ್ರ ಪರಿಹಾರ ನೀಡಬೇಕಾಗಿದೆ. 5 ವರ್ಷಗಳಿಗೂ ಹಿಂದೆ ರೈತರ ಬೆಳೆಗಳಿಗೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಬೆಂಬಲ ಬೆಲೆ ನೀಡಲಾಗುವುದೆಂದು ಪ್ರಧಾನಿಯಾಗುವ ಮೊದಲು ಹಲವಾರು ಚುನಾವಣಾ ಪ್ರಚಾರ ಸಭೆಗಳಲ್ಲಿ ನರೇಂದ್ರ ಮೋದಿಯವರು ಹೇಳಿದ್ದರು. ಅದನ್ನು ಇನ್ನೂ ಅವರು ಜಾರಿ ಮಾಡಿಲ್ಲ. ರೈತರ ಆತ್ಮಹತ್ಯೆಗಳು ಮುಂದುವರಿಯುತ್ತಾ ಇವೆ. ಕೇಂದ್ರ ಸರಕಾರವು ಅನುಸರಿಸುತ್ತಿರುವ ನೀತಿಗಳಿಂದ ಶ್ರೀಮಂತ ಉದ್ಯಮಿಗಳಿಗೆ ಪ್ರಯೋಜನವಾಗುತ್ತಿದೆಯೇ ಹೊರತು, ರೈತರಿಗೂ ಕಾರ್ಮಿಕರಿಗೂ ಅಲ್ಲ ಎಂದವರು ಟೀಕಿಸಿದರು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು.

ಪ್ರತಿಭಟನೆಯಲ್ಲಿ ಪ್ರಾಂತ ರೈತ ಸಂಘದ ಮುಖಂಡರಾದ ವಾಸುದೇವ ಉಚ್ಚಿಲ, ಜಯಂತ ಅಂಬ್ಲಮೊಗರು, ಸಿಐಟಿಯು ಜಿಲ್ಲಾ ಮುಖಂಡರಾದ ಯು.ಬಿ.ಲೋಕಯ್ಯ, ಪದ್ಮಾವತಿ ಶೆಟ್ಟಿ, ರಾಮಣ್ಣ ವಿಟ್ಲ, ಗಂಗಯ್ಯ ಅಮೀನ್, ಜಯಂತ ನಾಯಕ್ ಭಾಗವಹಿಸಿದ್ದರು. ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿದರು. ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್ ವಂದಿಸಿದರು.

ಬೆಳ್ತಂಗಡಿಯಲ್ಲಿ ಜಂಟಿ ಪ್ರತಿಭಟನೆ:

ಬೆಳ್ತಂಗಡಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿಐಟಿಯು ತಾಲೂಕು ಸಮಿತಿಗಳ ನೇತೃತ್ವದಲ್ಲಿ ಅಲ್ಲಿನ ಮಿನಿ ವಿಧಾನಸೌಧದ ಎದುರು ಸಪ್ಟೆಂಬರ್ 5 ರಂದು ನಡೆದ ಪ್ರತಿಭಟನೆಯನ್ನು ಸಿಐಟಿಯು ತಾಲೂಕು ಅಧ್ಯಕ್ಷ ನ್ಯಾಯವಾದಿ ಶಿವಕುಮಾರ್ ಎಸ್.ಎಂ.ಉದ್ಘಾಟಿಸಿದರು. ಬೆಳ್ತಂಗಡಿ ತಾಲೂಕು ಈ ಬಾರಿಯ ಮಳೆ ಹಾಗೂ ಪ್ರವಾಹದಿಂದಾಗಿ ಭಾರೀ ಅನಾಹುತಕ್ಕೊಳಗಾಗಿದ್ದು, ಸರಕಾರದ ಪರಿಹಾರಗಳು ಜನರಿಗೆ ಬೇಗನೇ ತಲುಪಬೇಕೆಂದು ಅವರು ಆಗ್ರಹಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಆದಿವಾಸಿ ಹಕ್ಕುಗಳ ಸಮಿತಿಯ ಶೇಖರ ಲಾಯಿಲ ಮಾತನಾಡಿದರು. ಪ್ರಾಂತ ರೈತ ಸಂಘದ ತಾಲೂಕು ಕಾರ್ಯದರ್ಶಿ ಸೆಲಿಮೋನು, ಸಿಐಟಿಯುವಿನ ವಸಂತ ನಡ, ಜನವಾದಿ ಮಹಿಳಾ ಸಂಘಟನೆಯ ಸುಕನ್ಯಾ ಹರಿದಾಸ್ ಪ್ರತಿಭಟನೆಯಲ್ಲಿ ಭಾಗವಹಿಸಿದರು.

ಬೈಂದೂರು: ಅಪಘಾತ ಜೀವ ರಕ್ಷಕ–ಪ್ರಥಮ ಚಿಕಿತ್ಸೆ ತರಬೇತಿ



ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಅಂಬೇಡ್ಕರ್ ಕಾರ್ಮಿಕ ಯೋಜನೆಯಡಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಉಡುಪಿ ಜಿಲ್ಲಾ ಘಟಕ,ರೋಟರಿ ಕ್ಲಬ್ ಬೈಂದೂರು ಹಾಗೂ ಸಿಐಟಿಯು ಬೈಂದೂರು ತಾಲೂಕು ಇವರ ಸಹಯೋಗದಲ್ಲಿ ದಿನಾಂಕ 31, ಅಗಸ್ಟ್ 2019 ಶನಿವಾರ ಬೈಂದೂರು ಅಂಬೇಡ್ಕರ್ ಭವನದ ಸಭಾಂಗಣದಲ್ಲಿ ಬೈಂದೂರು ಆಟೋರಿಕ್ಷಾ ಮತ್ತು ವಾಹನ ಚಾಲಕರಿಗೆ ಅಪಘಾತ ಜೀವ ರಕ್ಷಕ ಯೋಜನೆಯಡಿ ಪ್ರಥಮ ಚಿಕಿತ್ಸೆ ತರಬೇತಿ ಕಾರ್ಯಾಗಾರ ಯಶಸ್ವಿಯಾಗಿ ಜರುಗಿತು.

ತರಬೇತಿ ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕುಂದಾಪುರ ತಾಲೂಕು ಘಟಕದ ಸಭಾಪತಿ ಎಸ್. ಜಯಕರ ಶೆಟ್ಟಿ ಇವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡುತ್ತಾ ಆಟೋರಿಕ್ಷಾ ಮತ್ತು ಖಾಸಗಿ ವಾಣಿಜ್ಯ ವಾಹನ ಚಾಲಕರು ಕರ್ನಾಟಕ ರಾಜ್ಯ ಅಸಂಘಟಿತ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಅಪಘಾತ ಪರಿಹಾರದ ವಿವಿಧ ಯೋಜನೆಯ ಸೌಲಭ್ಯಗಳನ್ನು ಪಡೆಯಲು ಸಂಘಟಿತ ಪ್ರಯತ್ನ ಮಾಡಬೇಕು. ರಸ್ತೆ ಸಂಚಾರದಲ್ಲಿ ವಾಹನ ಅಪಘಾತವಾದ ಸಂದರ್ಭ ಆಟೋರಿಕ್ಷಾ ಮತ್ತು ವಾಹನಚಾಲಕರು ತುರ್ತು ನೆರವಿಗೆ ದಾವಿಸಿ ಪ್ರಥಮ ಚಿಕಿತ್ಸೆ ನೀಡುವ ಮೂಲಕ ಜೀವಹಾನಿ ಯಾಗುವುದನ್ನು ತಪ್ಪಿಸುವ ಮಹತ್ತರ ಸಮಾಜ ಸೇವೆ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಉಡುಪಿ ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ. ➔

ಪ್ರಧಾನ ಮಂತ್ರಿಗೆ ರೈತ, ಕಾರ್ಮಿಕ ಕೂಲಿಕಾರರಿಂದ ಮನವಿ

ಹುಬ್ಬಳ್ಳಿ: ದೇಶದ ಸಂಪತ್ತನ್ನು ಸೃಷ್ಟಿ ಮಾಡುವ ರೈತ–ಕಾರ್ಮಿಕ ವರ್ಗಗಳನ್ನು ಸಂಕಷ್ಟಕ್ಕೆ ದೂಡುವ ಯಾವುದೇ ಸರ್ಕಾರವು ದೇಶದ ಪ್ರಗತಿಗೆ ಪೂರಕವಾಗಿರಲು ಸಾಧ್ಯವಿಲ್ಲ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಆಕ್ರಮಣಕಾರಿ ನವ ಉದಾರೀಕರಣ ಆರ್ಥಿಕ ನೀತಿಗಳಿಂದಾಗಿ ದೇಶದ ಆರ್ಥಿಕ ಸ್ಥಿತಿ ಕುಸಿಯುತ್ತಿದೆ. ದೇಶದ ದುಡಿಯುವ ಜನರನ್ನು ಕಡೆಗಣಿಸಿ, ವಿದೇಶಿ ಹಾಗು ಸ್ವದೇಶಿ ಕಾರ್ಪೋರೇಟ್ ಬಂಡವಾಳದ ಹಿತ ಕಾಪಾಡುವ ಈ ನೀತಿಗಳ ವಿರುದ್ಧ ಸಂಘಟಿತ ಹಾಗು ಅಸಂಘಟಿತ ಕಾರ್ಮಿಕರು, ರೈತಾಪಿ ವರ್ಗ ಹಾಗು ಕೃಷಿಕೂಲಿಕಾರರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಈ ಹಿನ್ನಲೆಯಲ್ಲಿ ಸೆ. 5 ರಂದು ದೇಶಾದ್ಯಂತ ಪ್ರತಿಭಟನೆ ನಡೆಸಿ ಕಾರ್ಮಿಕರು, ರೈತಾಪಿ ವರ್ಗ ಹಾಗು ಕೃಷಿಕೂಲಿಕಾರರ ಈ ಕೆಳಕಂಡ ಬೇಡಿಕೆಗಳಿಗಾಗಿ ಒತ್ತಾಯಿಸಿ ಈ ಮನವಿಯನ್ನು ಪ್ರಧಾನಿಗೆ ಸಲ್ಲಿಸಲಾಯಿತು. ರೈತ ಕಾರ್ಮಿಕರ ಈ ಬೇಡಿಕೆಗಳನ್ನು ಈಡೇರಿಸಲು ಸರಕಾರ ಗಮನಹರಿಸದೇ ಇದ್ದಲ್ಲಿ ವ್ಯಾಪಕವಾದ ಐಕ್ಯ ಚಳುವಳಿಗಳನ್ನು ನಡೆಸುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಲಾಯಿತು.

ಕಾರ್ಮಿಕರ ಪ್ರಮುಖ ಬೇಡಿಕೆಗಳು:

1. ಅಸಂಘಟಿತ, ಸಂಘಟಿತ ಹಾಗು ಯೋಜನಾ ಕಾರ್ಮಿಕರಿಗೆ ಮಾಸಿಕ ಕನಿಷ್ಟ ವೇತನವನ್ನು ರೂ. 18000/–(2016ರ ಬೆಲೆ ಸೂಚ್ಯಾಂಕದ ಆಧಾರದಲ್ಲಿ) ಬೆಲೆ ಏರಿಕೆಗೆ ತಕ್ಕಂತ ರೀತಿಯಲ್ಲಿ ತುಟ್ಟಿ ಭತ್ಯೆಯನ್ನು ಒಳಗೊಂಡು ನಿಗಧಿ ಪಡಿಸಬೇಕು.
2. ಖಾಯಂ ಉದ್ಯೋಗಿಗಳ ಬದಲಾಗಿ, ಯಾವುದೇ ಕಾನೂನು ರಕ್ಷಣೆ, ಕನಿಷ್ಟ ವೇತನ, ಸಾಮಾಜಿಕ ರಕ್ಷಣಾ ಯೋಜನೆಗಳ ಸವಲತ್ತುಗಳಿಲ್ಲದೆ ದುಡಿಯುವ ಗುತ್ತಿಗೆ ಹಾಗು ತರಬೇತಿ ಕಾರ್ಮಿಕರನ್ನು ನೇಮಕ ಮಾಡುವ ಗುಲಾಮ ಪದ್ಧತಿಯನ್ನು ರದ್ದುಗೊಳಿಸಬೇಕು.
3. ಈ ದೇಶದ ರಕ್ಷಣೆಗೆ, ಕೈಗಾರಿಕಾ ಅಭಿವೃದ್ಧಿಗೆ, ಸಾಮಾಜಿಕ ನ್ಯಾಯಕ್ಕೆ ಕಾರಣವಾಗಿರುವ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಕರಣ ಮಾಡುವ ದೇಶದ್ರೋಹಿ ನೀತಿಗಳನ್ನು ಕೈಬಿಡಬೇಕು. ಸೇವಾ ವಲಯ, ವಿಮೆ–ಬ್ಯಾಂಕ್–ಶಿಕ್ಷಣ–ಆರೋಗ್ಯ ವಲಯಗಳಲ್ಲಿ ಸರಕಾರದ ಬಂಡವಾಳದ ಎಲ್ಲಾ ರೀತಿಯ ಹಿಂಬಡಿಕೆಯನ್ನು ಕೈಬಿಡಬೇಕು.
4. ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದ ಸರ್ಕಾರಿ ಯೋಜನೆಗಳಲ್ಲಿ ಕೆಲಸ ಮಾಡುವವವರನ್ನು ಭಾರತ ಕಾರ್ಮಿಕ ಸಮ್ಮೇಳದ ತೀರ್ಮಾನದಂತೆ ಕಾರ್ಮಿಕರೆಂದು ಪರಿಗಣಿಸಬೇಕು. ಮಕ್ಕಳಿಗೆ, ಗರ್ಭಿಣಿ ಬಾಣಂತಿಯರಿಗೆ ಪೌಷ್ಟಿಕ ಆಹಾರ ಒದಗಿಸುವ ಐಸಿಡಿಎಸ್ ಯೋಜನೆಯನ್ನು ಬಲಪಡಿಸ ಬೇಕು.
5. ಹಮಾಲಿ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ಅಟೋ ಚಾಲಕರು, ಕಟ್ಟಡ ಕಾರ್ಮಿಕರು ಸೇರಿದಂತೆ ಇತರೆ ಅಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಕಲ್ಯಾಣ ಯೋಜನೆಗಳನ್ನು ಜಾರಿಮಾಡಬೇಕು ಮತ್ತು ವಸತಿ ರಹಿತ ಅಸಂಘಟಿತ ಕಾರ್ಮಿಕರಿಗೆ ಯೋಗ್ಯ ವಸತಿ ಯೋಜನೆಯನ್ನು ಜಾರಿಮಾಡಬೇಕು.
6. ಅವೈಜ್ಞಾನಿಕ ದುಬಾರಿ ದಂಡ ಹಾಗೂ ಕೇಂದ್ರ ಮೋಟಾರ್ ವಾಹನ ಕಾಯ್ದೆ 2019 ಅನ್ನು ವಾಪಸ್ಸಪಡೆಯಬೇಕು.



ರೈತರು ಮತ್ತು ಕೃಷಿ ಕೂಲಿಕಾರರ ಪ್ರಮುಖ ಬೇಡಿಕೆಗಳು

7. ನೆರೆ ಸಂತ್ರಸ್ಥರ ಮನೆ, ಹೊಲ, ಗದ್ದೆ, ಬದುಕನ್ನು ಕಟ್ಟಿಕೊಡಲು ಕೇಂದ್ರ, ರಾಜ್ಯ ಸರ್ಕಾರಗಳು ಕೂಡಲೇ ಮುಂದಾಗಬೇಕು: ಭೀಕರ ನೆರೆ ರಾಜ್ಯದ ಬಹು ಭಾಗದ ರೈತರು, ಕೂಲಿಕಾರರು ಇತರರ ಬದುಕನ್ನು ಧ್ವಂಸ ಮಾಡಿದೆ. ಅಪಾರ ಆಸ್ತಿ ಪಾಸ್ತಿಗಳು, ಪ್ರಾಣ ಹಾನಿಯು ಉಂಟಾಗಿದೆ. ತಮ್ಮ ಮನೆ, ಹೊಲ, ಗದ್ದೆಗಳು ಜೊತೆಗೆ ಇಡೀ ಬದುಕು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ. "ರಾಷ್ಟ್ರೀಯ ವಿಪತ್ತು" ಎಂದು ಘೋಷಿಸಿ, ಕೂಡಲೇ ಪ್ರಧಾನಮಂತ್ರಿಗಳು ರಾಜ್ಯಕ್ಕೆ ಭೇಟಿ ನೀಡಬೇಕು. ಮೊದಲ ಕಂತಾಗಿ ಕನಿಷ್ಠ 10,000 ಕೋಟಿ ರೂ. ಬಿಡುಗಡೆ ಮಾಡಬೇಕು. ಪ್ರಾಣವನ್ನು ಕಳೆದು ಕೊಂಡ ಕುಟುಂಬಗಳಿಗೆ ಪರಿಹಾರ, ಸತ್ತ ಜಾನುವಾರಗಳಿಗೆ ಪರಿಹಾರ, ಮನೆ ನಿರ್ಮಾಣ, ಹೊಲ, ಗದ್ದೆಗಳನ್ನು ಮೊದಲಿನ ಸ್ಥಿತಿಗೆ ತರಲು ಹಣಕಾಸಿನ ಪೂರ್ಣ ಸಹಾಯ. ಬೆಳೆ ವಿಮೆ, ಬೆಳೆ ನಷ್ಟ ಪರಿಹಾರ, ಸಾಲ ಮನ್ನಾ ಇತ್ಯಾದಿ ಪರಿಹಾರ ಕಾರ್ಯಕ್ರಮಗಳ ಜೊತೆಗೆ ಮುಂದೆ ಇಂತಹ ಸಂದರ್ಭಗಳನ್ನು ಎದುರಿಸಲು ಅಗತ್ಯವಿರುವ ದೀರ್ಘಕಾಲಿಕ ಯೋಜನೆಗಳನ್ನು ರೂಪಿಸಬೇಕು.
8. **ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಕಾನೂನು:** ಉತ್ಪಾದನಾ ವೆಚ್ಚದ ಮೇಲೆ ಶೇ. 50 ರಷ್ಟು ಲಾಭವನ್ನು ಸೇರಿಸಿ, ಎಲ್ಲಾ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡಬೇಕೆನ್ನುವ ಡಾ॥ ಎಂ.ಎಸ್. ಸ್ವಾಮಿನಾಥನ್ ವರದಿಯನ್ವಯ "ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಖಾತರಿ ಮಾಡುವ ಕಾನೂನ"ನ್ನು ರೂಪಿಸಲೇಬೇಕು.
9. **'ಋಣ ಮುಕ್ತ ಕಾಯ್ದೆ'ಗಾಗಿ:** ರಾಜ್ಯದಲ್ಲಿ ಶೇ. 85 ಕ್ಕಿಂತ ಹೆಚ್ಚಿನ ರೈತರು, ಸಣ್ಣ, ಅತಿ ಸಣ್ಣ ರೈತರು ಮತ್ತು ಒಂದು ಕೋಟಿಯಷ್ಟಿರುವ ಕೃಷಿ ಕೂಲಿಕಾರರಿಗೆ ಬಹುತೇಕ ಬ್ಯಾಂಕ್ ಸಾಲಗಳು ಸಿಗುತ್ತಿಲ್ಲ ಇವರೆಲ್ಲ ಖಾಸಗಿ ಸಾಲದ ಮೇಲೆ ಅವಲಂಬನೆಯಾಗಿರುವ ಸನ್ನಿವೇಶವಿದೆ.

   ಈ ಹಿನ್ನೆಲೆಯಲ್ಲಿ ಎಲ್ಲಾ ಕೃಷಿ ಕೂಲಿಕಾರರು ಮತ್ತು ರೈತರಿಗೆ ಅಗತ್ಯವಿರುವಷ್ಟು ಬ್ಯಾಂಕ್ ಸಾಲ ನೀಡಿಕೆ, ವಿಶೇಷ ಸಂದರ್ಭಗಳಲ್ಲಿ ಬಡ್ಡಿ ಮನ್ನಾ, ಸಾಲ ಮನ್ನಾ ಮಾಡುವ ಶಾಶ್ವತ ವ್ಯವಸ್ಥೆಯಾಗಿ 'ಋಣ ಮುಕ್ತ ಕಾಯ್ದೆ' ಯನ್ನು ಜಾರಿ ಮಾಡಬೇಕು. ಒಂದು ಬಾರಿ ಪರಿಹಾರವಾಗಿ "ಎಲ್ಲಾ ಕೃಷಿ ಕೂಲಿಕಾರರು ಮತ್ತು ರೈತರ ಸಂಪೂರ್ಣ ಸಾಲ ಮನ್ನಾ" ಮಾಡಬೇಕೆಂದು ಆಗ್ರಹಿಸುತ್ತದೆ.
10. **'ಪ್ರವಾಹ' ಮತ್ತು 'ಬರ' ಗಾಲದ ಹಿನ್ನೆಲೆಯಲ್ಲಿ ಉದ್ಯೋಗ ಖಾತರಿಯ ವ್ಯಾಪಕ ಜಾರಿಗೆ ಆಗ್ರಹ:** ಹಿಂದೆಂದೂ ಕಂಡರಿಯದ ಪ್ರವಾಹ ರಾಜ್ಯದ ಸುಮಾರು 100 ತಾಲ್ಲೂಕಗಳಲ್ಲಿ ಜನರ ಬದುಕನ್ನು ಧ್ವಂಸ ಮಾಡಿದೆ. ಇನ್ನುಳಿದ ಸುಮಾರು 40 ತಾಲ್ಲೂಕಗಳಲ್ಲಿ 'ಬರಗಾಲ'ದ ಛಾಯೆ ಗಟ್ಟಿಯಾಗಿದೆ. ಪ್ರವಾಹದಿಂದ ಕೊಚ್ಚಿಕೊಂಡು ಹೋಗಿರುವ ಮನೆ, ಹೊಲ, ಗದ್ದೆ ಇತ್ಯಾದಿಗಳನ್ನು ಪುನರ್ ನಿರ್ಮಾಣ ಮಾಡಲು ಹಾಗು ಬರ ಪರಿಹಾರ ಕಾರ್ಯಕ್ರಮಗಳನ್ನು ರೂಪಿಸುವ ಹಿನ್ನೆಲೆಯಲ್ಲಿ 'ಉದ್ಯೋಗ ಖಾತರಿ ಯೋಜನೆ'ಗೆ ಇರುವ ಕೆಲಸದ ದಿನಗಳ ಮಿತಿಯನ್ನು ತೆಗೆದು ಹಾಕಿ, ಕೂಲಿಯನ್ನು 600–00 ರೂ. ಗಳಿಗೆ ಏರಿಸಬೇಕು ಹಾಗೂ ಇದಕ್ಕೆ ವಿಶೇಷವಾಗಿ ಹೆಚ್ಚಿನ ಅನುದಾನವನ್ನು ನೀಡಿ ವ್ಯಾಪಕವಾಗಿ ಜಾರಿ ಮಾಡಬೇಕೆಂದು ನಾವು ಒತ್ತಾಯಿಸುತ್ತೇವೆ.

ಹುಬ್ಬಳ್ಳಿ ತಹಶೀಲ್ದಾರ ಅವರ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಸಿಐಟಿಯು ಜಿಲ್ಲಾ ಅಧ್ಯಕ್ಷರು ಬಿ.ಐ. ಈಳಿಗೇರ, ಪ್ರಧಾನ ಕಾರ್ಯದರ್ಶಿ ಮಹೇಶ್ ಪತ್ತಾರ್ ಮತ್ತು ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ಬಿ.ಎಸ್. ಸೊಪ್ಪಿನ್ ಸಹಿ ಮಾಡಿರುವ ಮನವಿಯನ್ನು, ಪ್ರಧಾನ ಮಂತ್ರಿಗಳಿಗೆ ಸಲ್ಲಿಸಲಾಯಿತು. ಅಮೃತ ಇಜಾರಿ, ಶಿವಣ್ಣ ಹುಬ್ಬಳ್ಳಿ, ಸುರೇಶಗೌಡ ಪಾಟೀಲ, ಅಪ್ಪಣ್ಣ ಶಿರೋಳ, ನಾಗಭೂಷಣ ಕಾಳೆ, ಗುರುಸಿದ್ದಪ್ಪ ಅಂಬಿಗೇರ, ಬಸವಣ್ಣೆಪ್ಪ ನೀರಲಗಿ, ಕತಾಲಸಾಬ ಮುಲ್ಲಾ, ಹುಸೇನಸಾಬ ನದಾಫ್, ಅಯೂಬಖಾನ ಕಲೆಗಾರ, ಮುತ್ತು ಚಲವಾದಿ, ಗಂಗಾಧರ ಗಾಡದ ಮುಂತಾದವರಿದ್ದರು.

ಬಾಲಕೃಷ್ಣ ಇವರು ಅಧ್ಯಕ್ಷೀಯ ಭಾಷಣದಲ್ಲಿ, ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯು ಚಾಲನಾ ಪರವಾನಿಗೆ ಪಡೆದ 20 ರಿಂದ 70 ವರ್ಷಗಳ ವಯೋಮಿತಿಯ ಖಾಸಗಿ ಅಟೋ, ಟ್ಯಾಕ್ಸಿ, ಮ್ಯಾಕ್ಸಿ ಕ್ಯಾಬ್, ಲಾರಿ ಮತ್ತು ಖಾಸಗಿ ಬಸ್ಸ್ ವಾಹನ ಚಾಲಕರಿಗೆ ಮಾತ್ರ ಅನ್ವಯಿಸುತ್ತದೆ. ಯೋಜನೆಯಡಿ ಪಲಾನುಭವಿಯು ಪ್ರೀಮಿಯಂ ಪಾವತಿಸಬೇಕಾಗಿಲ್ಲ. ಯೋಜನೆಯು ಸಂಪೂರ್ಣ ಉಚಿತವಾಗಿದ್ದು, ಸರಕಾರವೇ ಪೂರ್ಣವಾಗಿ ಪ್ರೀಮಿಯಂ ಮೊತ್ತವನ್ನು ಪಾವತಿಸಲಿದೆ ಎಂದು ಹೇಳಿದರು.

ಅಪಘಾತದಿಂದ ಚಾಲಕನು ಪ್ರಾಣಾಪಾಯಕ್ಕೆ ತುತ್ತಾದಾಗ, ಶಾಶ್ವತ ಅಂಗವಿಕಲತೆ ಅಥವಾ ಭಾಗಶಃ ಹೊಂದಿದಾಗ, ಅಂಗಾಂಗಗಳು ಹಾನಿಗೊಳಗಾದಾಗ, ಚಾಲಕರು ಕರ್ತವ್ಯದಲ್ಲಿರುವಾಗ ಹಾಗೂ ಇಲ್ಲದಿರುವಾಗಲೂ ಸಹ ಅಪಘಾತಕ್ಕೀಡಾಗಿ ಮರಣ ಹೊಂದಿದಲ್ಲಿ ಅಥವಾ ಶಾಶ್ವತ/ತಾತ್ಕಾಲಿಕ ಅಂಗವಿಕಲತೆ ಹೊಂದಿದಾಗ ಯೋಜನೆಯ ಸೌಲಭ್ಯ ಲಭ್ಯವಾಗುತ್ತದೆ. ವಿಮಾ ಮೊತ್ತ ಗರಿಷ್ಟ ರೂಪಾಯಿ 2 ಲಕ್ಷಗಳ ವರೆಗೆ ಲಭ್ಯವಾಗುತ್ತದೆ. ಈ ಸೌಲಭ್ಯಗಳನ್ನು ಪಡೆಯಲು ಚಾಲಕ ಬಂಧುಗಳು ಮುಂದಾಗಬೇಕು ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ. ಬಾಲಕೃಷ್ಣ ಕರೆ ನೀಡಿದರು. ಪ್ರಥಮ ಚಿಕಿತ್ಸೆ ಜಿಲ್ಲಾ ತರಬೇತುದಾರರಾದ ಬೈಂದೂರು ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ/ಪ್ರೇಮಾನಂದ ಮತ್ತುಡಾ/ ಕೀರ್ತಿ ಪಾಲನ್ ಸಂಪನ್ಮೂಲ ವ್ಯಕ್ತಿ ಗಳಾಗಿ ಚಾಲಕರಿಗೆ ಪ್ರಥಮ ಚಿಕಿತ್ಸೆಯ ಪ್ರಾತ್ಯಕ್ಷತೆ ತರಬೇತಿ ಕಾರ್ಯಾಗಾರ ನಡೆಸಿಕೊಟ್ಟರು. ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಉಡುಪಿ ಗೌರವ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ರೋಟರಿ ಕ್ಲಬ್ ಅಧ್ಯಕ್ಷ ಪ್ರಕಾಶ ಭಟ್ ಉಪ್ಪುಂದ, ಕಾರ್ಯದರ್ಶಿ ಮಂಜುನಾಥ ಮಹಾಲೆ, ಕಾರ್ಮಿಕ ಸಂಘಗಳ ಒಕ್ಕೂಟ ಸಿಐಟಿಯು ಬೈಂದೂರು ತಾಲೂಕು ಸಂಚಾಲಕ ಉದಯ ಗಾಣಿಗ ಮೊಗೇರಿ,ರಾಜೀವ ಪಡುಕೋಣೆ, ಗಣೇಶ ತೊಂಡೆಮಕ್ಕಿ ಸಮಾರಂಭಕ್ಕೆ ಶುಭ ಕೋರಿ ಮಾತನಾಡಿದರು. ಕುಂದಾಪುರ ವೃತ್ತ ಕಾರ್ಮಿಕ ನಿರೀಕ್ಷಕ ಡಿ. ಎಸ್. ಸತ್ಯನಾರಾಯಣ, ಉಡುಪಿ ವೃತ್ತ ಕಾರ್ಮಿಕ ನಿರೀಕ್ಷಕ ಜೀವನ್ ಕುಮಾರ್, ಪ್ರವೀಣ ಕುಮಾರ್ ವೇದಿಕೆಯಲ್ಲಿದ್ದರು. ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ(ಸಿಐಟಿಯು) ಮುಖಂಡರಾದ ಮಂಜುನಾಥ ಪಡುವರಿ, ಸಂತೋಷ ನಾಯ್ಕನಕಟ್ಟೆ, ಅಮ್ಮಯ್ಯ ಪೂಜಾರಿ ಬಿಜೂರು, ನಾಗರತ್ನ ನಾಡ, ಜಟ್ಟ ಪೂಜಾರಿ ಯಡ್ತರೆ, ವಿಜಯ ಕೋಯಾನಗರ, ಸರಸ್ವತಿ, ಕಾರ್ಮಿಕ ಇಲಾಖೆಯ ಶಿವಪ್ರಸಾದ್, ಸ್ಟೇನಿ ಸಹನಾ ಮೊದಲಾದವರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ್ದರು. ಗೋಪಾಲ ಪಡುವರಿ ಸ್ವಾಗತ ಗೀತೆ ಹಾಡಿದರು ಕೋಣಿ ವೆಂಕಟೇಶ್ ನಾಯಕ್ ಕಾರ್ಯಕ್ರಮ ನಿರೂಪಿಸಿದರು

ವರದಿ: ಕೋಣಿ ವೆಂಕಟೇಶ್ ನಾಯಕ್

ಕೇಂದ್ರ ಸರ್ಕಾರವು ಕೇಂದ್ರೀಯ ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್ (ಸಿಬಿಐಸಿ)ಪ್ರಾಧಿಕಾರದ ಕಮಿಷನರ್ ಮತ್ತು ಸೂಪರಿಂಟೆಂಡೆಂಟ್ ಸ್ಥಾಯಿಯ 37 ಅಧಿಕಾರಿಗಳನ್ನು ಭ್ರಷ್ಟಾಚಾರ ಸಂಬಂಧೀ ಆರೋಪಗಳ ಮೇಲೆ ಕಡ್ಡಾಯವಾಗಿ ನಿವೃತ್ತಿಗೊಳಿಸಿದೆ. ಜಿಎಸ್‌ಟಿ ವ್ಯವಸ್ಥೆಯ ನಿರಾಶಾದಾಯಕ ಫಲಿತಾಂಶಗಳ ಬಗ್ಗೆ ನೀಡಿದ ಸಿಎಜಿ ವರದಿಯನ್ನು ಆಧರಿಸಿ ಈ ಕ್ರಮ ಕೈಗೊಳ್ಳಲಾಗಿತ್ತು. ನಿರೀಕ್ಷಿತ ಮಟ್ಟದಲ್ಲಿ ಜಿಎಸ್‌ಟಿ ತೆರಿಗೆ ಸಂಗ್ರಹ ಆಗುತ್ತಿಲ್ಲ. ತೆರಿಗೆ ಕಟ್ಟುವವರು ಸಲ್ಲಿಸಬೇಕಾದ ಒಟ್ಟು ವಹಿವಾಟಿನ ಸಾರೀಕೃತ ಲೆಕ್ಕಪತ್ರ (ಜಿಎಸ್‌ಟಿಆರ್3ಇ) ಗಳ ಸಂಖ್ಯೆ 2018ರ ಏಪ್ರಿಲ್‌ನಲ್ಲಿ ಶೇ.87ರಷ್ಟಿದ್ದದ್ದು 2018ರ ಡಿಸೆಂಬರ್ ವೇಳೆಗೆ ಶೇ.79ರಷ್ಟಕ್ಕೆ ಇಳಿದಿರುವುದರಲ್ಲೂ ಇದು ಸ್ಪಷ್ಟವಾಗಿ ಪ್ರತಿಫಲಿತವಾಗಿದೆ. ಅಂತರರಾಜ್ಯ ಸರಕು ಸಾಗಾಣಿಕೆ ಮತ್ತು ಆಮದುಗಳ ವ್ಯವಹಾರದಿಂದಾಗಿ ಕಟ್ಟುವ ಐಜಿಎಸ್‌ಟಿಯು 2017-18ರಲ್ಲಿ 1,76,688 ಕೋಟಿ ರೂ.ಗಳಷ್ಟಿದ್ದದ್ದು 2018-19ರಲ್ಲಿ 28,947 ಕೋಟಿ ರೂ.ಗಳಿಗಿಳಿದಿತ್ತು. ಅದೇ ರೀತಿ ಪೆಟ್ರೋಲಿಯಂ ಮತ್ತು ತಂಬಾಕುಗಳ ಮೇಲಿನ ಕೇಂದ್ರೀಯ ತೆರಿಗೆಗಳನ್ನು ಹೊರತುಪಡಿಸಿ ಜಿಎಸ್‌ಟಿ ಮೂಲದ ಕೇಂದ್ರದ ತೆರಿಗೆ ಆದಾಯ 2016-17ರ ಹೋಲಿಕೆಯಲ್ಲಿ 2017-18ರ ಸಾಲಿನಲ್ಲಿ ಶೇ.10ರಷ್ಟು ಇಳಿತವನ್ನು ಕಂಡಿತ್ತು. ಈ ಇಲಾಖೆಯ ಭ್ರಷ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡ ಮಾತ್ರಕ್ಕೆ ಅದು ತನ್ನಂತೆ ತಾನೇ ಜಿಎಸ್‌ಟಿ ವ್ಯವಸ್ಥೆಯಲ್ಲಿ ಆಗುತ್ತಿರುವ ವ್ಯವಸ್ಥಾತ್ಮಕ ಸೋರಿಕೆಯನ್ನೇನೂ ನಿಲ್ಲಿಸುವುದಿಲ್ಲ.

ಜಿಎಸ್‌ಟಿ ವ್ಯವಸ್ಥೆಯ ಸಂಕಷ್ಟಗಳು

(ಕೃಪೆ: Economic and Political Weekly Aug 31, 2019. Vol. 54. ಅನು: ಶಿವಸುಂದರ್)

ಕಳೆದ ಮೂರು ತಿಂಗಳಲ್ಲಿ ಕೇಂದ್ರ ಸರ್ಕಾರವು ಕೇಂದ್ರೀಯ ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್ (ಸಿಬಿಐಸಿ)ಪ್ರಾಧಿಕಾರದ ಕಮಿಷನರ್ ಮತ್ತು ಸೂಪರಿಂಟೆಂಡೆಂಟ್ ಸ್ಥಾಯಿಯ 37 ಅಧಿಕಾರಿಗಳನ್ನು ಭ್ರಷ್ಟಾಚಾರ ಸಂಬಂಧೀ ಆರೋಪಗಳ ಮೇಲೆ ಕಡ್ಡಾಯವಾಗಿ ನಿವೃತ್ತಿಗೊಳಿಸಿದೆ. ಇದರಲ್ಲಿ ಶೇ.60 ರಷ್ಟು ಪ್ರಕರಣಗಳನ್ನು ಭಾರತದ ಮಹಾ ಲೇಖಪಾಲರು (ಸಿಎಜಿ) 2017-18ರಲ್ಲಿ ಪರೋಕ್ಷ ತೆರಿಗೆ ವಸೂಲಿ ಮಾಡಲು ಹೊಸದಾಗಿ ಜಾರಿ ಮಾಡಲಾಗಿದ್ದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ನಿರಾಶಾದಾಯಕ ಫಲಿತಾಂಶಗಳ ಬಗ್ಗೆ ನೀಡಿದ ವರದಿಯನ್ನು ಆಧರಿಸಿ ಮಾಡಲಾಗಿತ್ತು. ಆದರೆ "ಆಡಳಿತವನ್ನು ಶುದ್ಧೀಕರಿಸುವ" ಸರ್ಕಾರದ ಈ ಕ್ರಮಗಳು ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆಯುವ ಉದ್ದೇಶದಿಂದ ಕೂಡಿವೆಯೇ?

ಕೇಂದ್ರ ಸರ್ಕಾರವು ಭ್ರಷ್ಟ ಮತ್ತು ಅಸಮರ್ಥ ಅಧಿಕಾರಿಗಳ ಮೇಲೆ 1972ರ ಕೇಂದ್ರೀಯ ನಾಗರಿಕ ಸೇವಾ ಮತ್ತು ಪೆನ್ಷನ್ ನಿಯಮಾವಳಿಗಳ ಮೂಲಭೂತ ನಿಯಮ 56 (ಜೆ) ಮತ್ತು 48ನೇ ಅಧಿನಿಯಮದ ಪ್ರಕಾರ ಅಥವಾ ತಿದ್ದುಪಡಿಯಾದ ಅಖಿಲ ಭಾರತ ನಿಧನ ಮತ್ತು ನಿವೃತ್ತಿ ವೇತನ ಸೌಲಭ್ಯಗಳ ನಿಯಮ 16 (3)ರ ಪ್ರಕಾರ ತೆಗೆದುಕೊಳ್ಳುತ್ತಿರುವ ಕ್ರಮಗಳು ಆಡಳಿತ ವ್ಯವಸ್ಥೆಯಲ್ಲಿ ದಕ್ಷತೆಯನ್ನು ತರುವೆಡೆ ಒಂದು ಉತ್ತಮ ಹೆಜ್ಜೆಯಾಗಿದೆ. ಇನ್ನು ತೆರಿಗೆ ವ್ಯವಸ್ಥೆ ಸಂಬಂಧೀ ವಿಷಯಗಳಿಗೆ ಸಂಬಂಧಪಟ್ಟಂತೆ ಈ ಕ್ರಮಗಳು ನರೇಂದ್ರ ಮೋದಿಯವರು ತಮ್ಮ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಉಲ್ಲೇಖಿಸಿದಂತೆ "ತೆರಿಗೆ ವ್ಯವಸ್ಥೆಯ ಆಡಳಿತದಲ್ಲಿ ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಪ್ರಾಮಾಣಿಕ ತೆರಿಗೆದಾರರನ್ನು ದುರುದ್ದೇಶಪೂರ್ವಕವಾಗಿ ಗುರಿಯಾಗಿರಿಸಿಕೊಂಡಿರುವ ಅಥವಾ ಸಣ್ಣಪುಟ್ಟ ತಪ್ಪುಗಳಿಗೆ ಅಥವಾ ವಿಧಿವಿಧಾನಗಳನ್ನು ಅನುಸರಿಸದಂಥ ತಪ್ಪುಗಳಿಗೆ ಅಗತ್ಯಕ್ಕಿಂತ ಹೆಚ್ಚಿನ ದಂಡನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವ ಕಳಂಕಿತ ಅಧಿಕಾರಿಗಳನ್ನು" ಉದ್ದೇಶಿಸಿದೆ. ಆದರೆ ಇಂಥಾ ಮನೆಮುರುಕರ ಮೇಲೆ ಕ್ರಮತೆಗೆದುಕೊಳ್ಳುವ ಅತ್ಯುತ್ಸಾಹದಲ್ಲಿ ಸರ್ಕಾರವು ಮನೆಯ ಅಡಿಪಾಯದಲ್ಲೇ ಬಿರುಕಿರುವುದನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲವೇ? ಮತ್ತು ಆ ಮೂಲಕ ಗಂಭೀರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾದ ಅವಕಾಶವನ್ನು ವ್ಯರ್ಥ ಮಾಡುತ್ತಿದೆಯೇ?



ಕೃಪೆ: ಪಿ. ಮಹಮ್ಮದ್

ಸರ್ಕಾರದ ತೆರಿಗೆ ವಸೂಲಿ ವ್ಯವಸ್ಥೆಯಲ್ಲಿ ಇಂಥಾ ಭ್ರಷ್ಟ ಅಧಿಕಾರಿಗಳಿರುವುದು ಗಮನಕ್ಕೆ ಬಂದಮೇಲೆ ತೆರಿಗೆ ಅಧಿಕಾರಿ ಮತ್ತು ತೆರಿಗೆ ಕಟ್ಟುವವರು ಪರಸ್ಪರ ಎದುರಾಗುವ ಅವಕಾಶವನ್ನು ಕಲ್ಪಿಸುವ "ಇನ್ವಾಯ್ಸ್ ಹೊಂದಾಣಿಕೆ" ಪದ್ಧತಿಗಳನ್ನು, ತೆಗೆದುಹಾಕುವುದು ಬದಿಗಿರಲಿ, ಏಕೆ ಕಡಿಮೆಗೊಳಿಸಿಲ್ಲ? ವಾಸ್ತವವಾಗಿ ಇನ್ವಾಯ್ಸ್ ಹೊಂದಾಣಿಕೆಯ ಪದ್ಧತಿಯು ತೆರಿಗೆ ತಪ್ಪಿಸುವುದನ್ನು ನಿವಾರಿಸುತ್ತದೆಂದು ನಿರೀಕ್ಷಿಸಲಾಗಿತ್ತು. ಜಿಎಸ್‌ಟಿ ವ್ಯವಸ್ಥೆಯಲ್ಲಿ ಅದರಲ್ಲೂ ಅಂತರರಾಜ್ಯ ಜಿಎಸ್‌ಟಿ ಪಾವತಿ ವ್ಯವಸ್ಥೆಯಾದ ಇಂಟಿಗ್ರೇಟೆಡ್ ಜಿಎಸ್ಟಿ (ಐಜಿಎಸ್‌ಟಿ) ವ್ಯವಸ್ಥೆಯು ನೂರಕ್ಕೆ ನೂರು ಇನ್ವಾಯ್ಸ್ ಹೊಂದಾಣಿಕೆಯನ್ನು ಆಧರಿಸಿದೆ. ಆದರೆ ಇನ್ವಾಯ್ಸ್ ಹೊಂದಾಣಿಕೆ ವ್ಯವಸ್ಥೆಯು ಇನ್ನೂ ಸಾಕಾರಗೊಳ್ಳದಿರುವುದರಿಂದ ಈ ಉದ್ದೇಶಗಳು ಈಡೇರಿಲ್ಲ. ಅಷ್ಟು ಮಾತ್ರವಲ್ಲದೆ ಸಿಎಜಿಯೇ ಗುರುತಿಸಿರುವಂತೆ ಸೂಕ್ತವಾದ ಇನ್ವಾಯ್ಸ್ ಹೊಂದಾಣಿಕೆ ವ್ಯವಸ್ಥೆ ಇಲ್ಲದಿರದಿರುವುದರಿಂದ ಜಿಎಸ್‌ಟಿ ವ್ಯವಸ್ಥೆಯು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ವ್ಯವಸ್ಥೆಯಲ್ಲಿ ಸಾಕಷ್ಟು ಮೋಸಗಳಾಗುತ್ತಿವೆ. ಅದರಿಂದಾಗಿ ತೆರಿಗೆ ಸಂಗ್ರಹವು ಸೋರಿಹೋಗುತ್ತಿದೆ. ಹಾಗೂ ಇನ್ವಾಯ್ಸ್ ಹೊಂದಾಣಿಕೆಯಲ್ಲಿನ ಸಮಸ್ಯೆಯಿಂದ ಮತ್ತು ಸ್ವಯಂಚಾಲಿತವಾಗಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮರುಪಾವತಿಗಳು ಆಗದಿರದಿರುವುದರಿಂದ ನಿರೀಕ್ಷಿತ ಮಟ್ಟದಲ್ಲಿ ಜಿಎಸ್‌ಟಿ ತೆರಿಗೆ ಸಂಗ್ರಹವೂ ಆಗುತ್ತಿಲ್ಲ. ಇದು, ತೆರಿಗೆ ಕಟ್ಟುವವರು ಸಲ್ಲಿಸಬೇಕಾದ ಒಟ್ಟು ವಹಿವಾಟಿನ ಸಾರೀಕೃತ ಲೆಕ್ಕಪತ್ರ (ಜಿಎಸ್‌ಟಿಆರ್3ಇ) ಗಳ ಸಂಖ್ಯೆ 2018ರ ಏಪ್ರಿಲ್‌ನಲ್ಲಿ ಶೇ.87ರಷ್ಟಿದ್ದದ್ದು 2018ರ ಡಿಸೆಂಬರ್ ವೇಳೆಗೆ ಶೇ.79ರಷ್ಟಕ್ಕೆ ಇಳಿದಿರುವುದರಲ್ಲೂ ಇದು ಸ್ಪಷ್ಟವಾಗಿ ಪ್ರತಿಫಲಿತವಾಗಿದೆ. ಅಂತರರಾಜ್ಯ ಸರಕು ಸಾಗಾಣಿಕೆ ಮತ್ತು ಆಮದುಗಳ ವ್ಯವಹಾರದಿಂದಾಗಿ ಕಟ್ಟುವ ಐಜಿಎಸ್‌ಟಿಯು 2017-18ರಲ್ಲಿ 1,76,688 ಕೋಟಿ ರೂ.ಗಳಷ್ಟಿದ್ದದ್ದು 2018-19ರಲ್ಲಿ 28,947 ಕೋಟಿ ರೂ.ಗಳಿಗಿಳಿದಿತ್ತು. ಅದೇ ರೀತಿ ಪೆಟ್ರೋಲಿಯಂ ಮತ್ತು ತಂಬಾಕುಗಳ ಮೇಲಿನ ಕೇಂದ್ರೀಯ ತೆರಿಗೆಗಳನ್ನು ಹೊರತುಪಡಿಸಿ ಜಿಎಸ್‌ಟಿ ಮೂಲದ ಕೇಂದ್ರದ ತೆರಿಗೆ ಆದಾಯ 2016-17ರ ಹೋಲಿಕೆಯಲ್ಲಿ 2017-18ರ ಸಾಲಿನಲ್ಲಿ ಶೇ.10ರಷ್ಟು ಇಳಿತವನ್ನು ಕಂಡಿತ್ತು.

ಈಗ ಈ ಸಂಪಾದಕೀಯ ಪ್ರಾರಂಭದಲ್ಲಿ ಎತ್ತಿರುವ ಆ ಎರಡು ಪ್ರಶ್ನೆಗಳಿಗೆ ವಾಪಸಾಗೋಣ. ಜಿಎಸ್‌ಟಿ ವ್ಯವಸ್ಥೆಯಲ್ಲೇ ಅಡಕವಾಗಿರುವ ಬಿಕ್ಕಟ್ಟನ್ನು ಸರ್ಕಾರ ಮರೆಮಾಚಲು ಯತ್ನಿಸುತ್ತಿದೆಯೇ ಎಂಬ ಪ್ರಶ್ನೆಗೆ ಸಹಜ ಮತ್ತು ನಿರೀಕ್ಷಿತ ಉತ್ತರ "ಇಲ್ಲ" ಎಂದೇ ಆಗಿರುತ್ತದೆ. ಉದಾಹರಣೆಗೆ ಜಿಎಸ್‌ಟಿಯ ವಿನ್ಯಾಸದ ಅತಿ ಕೇಂದ್ರ ಸ್ಥಾನದಲ್ಲಿರುವ ಇನ್ವಾಯ್ಸ್ ಹೊಂದಾಣಿಕೆಯ ಬಾಬತ್ತನ್ನೇ ಗಮನಿಸೋಣ. ಈ ವ್ಯವಸ್ಥೆಯು ಹೊಸದಾಗಿದ್ದು ತೆರಿಗೆದಾತ ಮತ್ತು ತೆರಿಗೆ ವಸೂಲಿ ಅಧಿಕಾರಿಗಳಿಬ್ಬರೂ ಈ ವ್ಯವಸ್ಥೆಗೆ ಹೊಂದಿಕೊಳ್ಳಲು ಸಮಯವು ಬೇಕಿರುವುದರಿಂದ ಪ್ರಾರಭದಲ್ಲಿ ಈ ಸಮಸ್ಯೆಗಳು ಉದ್ಭವವಾಗುವುದು ಸಹಜವೇ ಆಗಿದೆ. ಆದ್ದರಿಂದ ನಿಧಾನಕ್ಕೆ ಇವೆಲ್ಲಕ್ಕೂ ಪರಿಹಾರ ಕಂಡುಕೊಳ್ಳಲಾಗುವುದೆಂದು ಜಿಎಸ್‌ಟಿ ಕೌನ್ಸಿಲ್‌ನ ಸದಸ್ಯರಿಂದ ಹಿಡಿದು ಇತರ ಎಲ್ಲಾ ಜಿಎಸ್‌ಟಿ ಪ್ರತಿಪಾದಕರೂ ಉಸಿರುಗಟ್ಟಿ ಸಮರ್ಥನೆಗೆ ಇಳಿಯುತ್ತಾರೆ. ಹಾಗೂ ಅದಕ್ಕೆ ಪೂರಕವಾಗಿ 2017ರಿಂದ ನವಂಬರ್‌ನಿಂದಾಚೆಗೆ ಜಿಎಸ್‌ಟಿ ದರಗಳಲ್ಲಿ ಮಾಡಿರುವ ಇಳಿಕೆಗಳತ್ತ ಮತ್ತು ಅದರಿಂದ ತೆರಿಗೆ ಸಂಗ್ರಹದಲ್ಲಿ ಆಗಿರುವ ಪರಿಣಾಮಗಳತ್ತ ಗಮನವನ್ನು ಸೆಳೆಯಲಾಗುತ್ತದೆ. ಜೊತೆಗೆ 2017ರ ಜುಲೈ ನಂತರದ ಎಂಟು ತಿಂಗಳಲ್ಲಿ ಒಟ್ಟಾರೆ ನೋಂದಾಯಿತ ತೆರಿಗೆದಾರರ ಸಂಖ್ಯೆ 65 ಲಕ್ಷದಿಂದ 1.2 ಕೋಟಿಗೆ ಅಂದರೆ ಶೇ.84ರಷ್ಟು ಏರಿಕೆಯಾಗಿರುವುದರತ್ತಲೂ ಗಮನ ಸೆಳೆಯಲಾಗುತ್ತದೆ. ಆದರೆ ನೋಂದಾಯಿತ ತೆರಿಗೆದಾರರ ಸಂಖ್ಯೆ ಇಷ್ಟೆಲ್ಲಾ ಹೆಚ್ಚಳ ಕಂಡಿದ್ದರೂ ಈಗಲೂ ಶೇ.95ರಷ್ಟು ತೆರಿಗೆಯನ್ನು ಕಟ್ಟುತ್ತಿರುವವರು ಶೇ.5ರಷ್ಟು ತೆರಿಗೆದಾರರು ಮಾತ್ರ ಎಂಬ ಸತ್ಯವು ಮಾತ್ರ ಈ ಎಲ್ಲಾ ಜೋರುಗಂಟಲಿನ ಪ್ರತಿಪಾದನೆಗಳ ನಡುವೆ ಮರೆಯಾಗಿ ಹೋಗುತ್ತಿದೆ.

ಒಂದು ವೇಳೆ ತಾಂತ್ರಿಕ ತೊಡಕುಗಳು ನಿವಾರಣೆಯಾದರೂ ತೆರಿಗೆ ಕಟ್ಟುವವರ ಸಂಖ್ಯೆ ಹೆಚ್ಚಾಗುವುದು ದುಸ್ತರ. ಏಕೆಂದರೆ ದೇಶದ ಒಟ್ಟಾರೆ ಉತ್ಪನ್ನದ ಶೇ.40ರಷ್ಟನ್ನು ಮತ್ತು ಶೇ.90ರಷ್ಟು ಉದ್ಯೋಗವನ್ನು ನೀಡುವ ಅಸಂಘಟಿತ ಕ್ಷೇತ್ರವನ್ನು ಇದು ಒಳಗೊಳ್ಳುವುದಿಲ್ಲ ಅಥವಾ ಜಿಎಸ್‌ಟಿಯಿಂದ ಆ ಕ್ಷೇತ್ರಕ್ಕೆ ಲಾಭವಿಲ್ಲ. ಅಸಂಘಟಿತ ಕ್ಷೇತ್ರದ ಬಹಳಷ್ಟು ಭಾಗವು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆದುಕೊಳ್ಳಲು ಅರ್ಹವಾಗುವುದಿಲ್ಲ. ಆ ತೆರಿಗೆಯನ್ನು ಕೊಳ್ಳುವವರೇ ಭರಿಸುವ ರಿವರ್ಸ್ ಚಾರ್ಜ್ ವ್ಯವಸ್ಥೆಯು ಸಂಘಟಿತ ವಲಯದ ಬೆಲೆ ಸ್ವರೂಪದ ಮೇಲೆ ಪರಿಣಾಮ ಬೀರುವುದರಿಂದ ಅದೂ ಕೂಡಾ ತೆರಿಗೆದಾರರನ್ನು ಆಕರ್ಷಿಸುತ್ತಿಲ್ಲ. ಹೀಗಾಗಿ ನಾವು ಪ್ರಾರಂಭದಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರವೇನೆಂದರೆ ಈ ಇಲಾಖೆಯ ಭ್ರಷ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡ ಮಾತ್ರಕ್ಕೆ ಅದು ತನ್ನಂತೆ ತಾನೇ ಜಿಎಸ್‌ಟಿ ವ್ಯವಸ್ಥೆಯಲ್ಲಿ ಆಗುತ್ತಿರುವ ವ್ಯವಸ್ಥಾತ್ಮಕ ಸೋರಿಕೆಯನ್ನೇನೂ ನಿಲ್ಲಿಸುವುದಿಲ್ಲ.

ಜಿಎಸ್‌ಟಿ ವ್ಯವಸ್ಥೆಯಲ್ಲೇ ಇರುವ ಈ ಬಿಕ್ಕಟ್ಟುಗಳನ್ನು ಪ್ರಶ್ನಿಸುವ ಯಾವುದೇ ರಾಜಕೀಯ ಪ್ರತಿರೋಧ ಇಲ್ಲದಿರುವುದರಿಂದ ಸರ್ಕಾರವೇ ಆ ಪಾತ್ರವನ್ನು ನಿಭಾಯಿಸುತ್ತಿದೆ. ಮತ್ತು ಅದು ಯಾವುದೇ ವ್ಯಾವಹಾರಿಕ ಪರಿಹಾರ ಕ್ರಮಗಳನ್ನು ಆಧರಿಸಿರದೆ ಕೇವಲ ನೈತಿಕ ಪ್ರತಿಕ್ರಿಯೆ/ಕ್ರಮಗಳಿಗೆ ಸೀಮಿತವಾಗುತ್ತಿದೆ. ಹಾಗೂ ತಮ್ಮದು ಆತ್ಮಾವಲೋಕವನ್ನು ಆಧರಿಸಿದ ಮಧ್ಯಪ್ರವೇಶವೆಂಬ ಉತ್ಪ್ರೇಕ್ಷಿತ ಪ್ರಚಾರವನ್ನು ಮಾತ್ರ ಪಡೆದುಕೊಳ್ಳುವುದರಲ್ಲಿ ಯಶಸ್ವಿಯಾಗುತ್ತಿವೆ.

(EPW ಅನುವಾದ ಯೋಜನೆಯ ಹೆಚ್ಚಿನ ಮಾಹಿತಿಗಾಗಿ: http://www.epw.in/translation)

ಬಗರ್ ಹುಕುಂ ಸಾಗುವಳಿ ಅರ್ಜಿ ಸ್ವೀಕರಿಸಲು ಕೂಲಿಕಾರರ ಸಂಘದ ಆಗ್ರಹ

ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಮುಖ್ಯ ಮಂತ್ರಿಯಾಗಿದ್ದ ಕುಮಾರಸ್ವಾಮಿಯವರು ಭೂರಹಿತ ಬಡವರ ಒತ್ತಾಯಕ್ಕೆ ಸ್ಪಂದಿಸಿ, ಬಗರ್ ಹುಕುಂ ಸಾಗುವಳಿ ಸಕ್ರಮೀಕರಣಕ್ಕೆ ಅರ್ಜಿ ಕರೆದಿದ್ದರು. ಸಕ್ರಮೀಕರಣ ಕೋರಿ ಇದುವರೆಗೆ ಅರ್ಜಿ ಸಲ್ಲಿಸದ ಅನಧಿಕೃತ ಸಾಗುವಳಿದಾರರು ಕಳೆದ ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಫಾರಂ 57ರಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಬಗರ್ ಹುಕುಂ ಸಾಗುವಳಿದಾರರಿಗೆ ಈ ಕಾಲಾವಕಾಶ ಸಾಲದ್ದರಿಂದ ಅಂದಿನ ಕಂದಾಯ ಮಂತ್ರಿ ದೇಶಪಾಂಡೆಯವರು ಅರ್ಜಿ ಸ್ವೀಕರಿಸುವ ಅವಧಿಯನ್ನು ಮಾರ್ಚ್ 31 ರವರೆಗೆ ವಿಸ್ತರಿಸಿದ್ದರು.

ಆದರೆ, ಇದೇ ಅವಧಿಯಲ್ಲಿ ಮಾರ್ಚ್ 11ಕ್ಕೆ ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಾದ ಕಾರಣ ತಾಲೂಕು ಕಚೇರಿಗಳಲ್ಲಿ ಅರ್ಜಿ ಸ್ವೀಕರಿಸುವುದನ್ನು ನಿಲ್ಲಿಸಿದರು. ಇದರಿಂದಾಗಿ ಅರ್ಜಿ ಸಲ್ಲಿಸಬೇಕೆಂದವರಿಗೆ ಅನ್ಯಾಯವಾಗಿದೆ. ಲೋಕಸಭೆ ಚುನಾವಣೆ ನಡೆದು, ನೀತಿ ಸಂಹಿತೆ ಮುಕ್ತಾಯಗೊಂಡು, ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು ನಾಲ್ಕೈದು ತಿಂಗಳು ಕಳೆದರೂ ರಾಜ್ಯ ಸರ್ಕಾರ ಬಗರ್ ಹುಕುಂ ಸಾಗುವಳಿದಾರರ ಅರ್ಜಿಗಳನ್ನು ಸ್ವೀಕರಿಸುವ ಕೆಲಸವನ್ನು ಪುನರಾರಂಭಿಸಿಲ್ಲ. ಡಿಸಿಎಂ ಹುದ್ದೆಯ ನಿರೀಕ್ಷೆಯಲ್ಲಿದ್ದ ಆರ್. ಅಶೋಕ್ ಅವರಿಗೆ ಕಂದಾಯ ಇಲಾಖೆ ಕೊಟ್ಟದ್ದೂ ಆಯಿತು. ಕಂದಾಯ ಸಚಿವರಿಗೆ ಬಗರ್ ಹುಕುಂ ಸಾಗುವಳಿದಾರರ ಬಗ್ಗೆ ಆಸಕ್ತಿ, ಅನುಕಂಪ ಯಾವುದೂ ಇದ್ದಂತೆ ಕಾಣುತ್ತಿಲ್ಲ. ಕಂದಾಯ ಅಧಿಕಾರಿಗಳು ಸಹ ಅದೊಂದು ಮುಗಿದ ಅಧ್ಯಾಯ ಎಂಬಂತೆ ವರ್ತಿಸುತ್ತಿದ್ದಾರೆ. ಭೂರಹಿತ ಬಡವರನ್ನು, ಸರ್ಕಾರಿ ಭೂಮಿ ಅನಧಿಕೃತ ಸಾಗುವಳಿ ಮಾಡುತ್ತಿರುವವರನ್ನು ಸಂಘಟಿಸುತ್ತಿರುವ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಈಗಿನ ಕಂದಾಯ ಮಂತ್ರಿಗಳಿಗೆ ಪತ್ರವನ್ನು ಬರೆದು ಫಾರಂ 57 ರಲ್ಲಿ ಅರ್ಜಿ ಸ್ವೀಕರಿಸುವ ಕೆಲಸವನ್ನು ಕೂಡಲೇ ಆರಂಭಿಸಿ ಸಾಗುವಳಿದಾರರಿಗೆ, ಸಾಗುವಳಿ ಚೀಟಿ ವಿತರಣೆ ಮಾಡಬೇಕೆಂದು ಆಗ್ರಹಿಸಿದೆ.

–ಚಂದ್ರಪ್ಪ ಹೊಸ್ಕೇರಾ



ಕಾಶ್ಮೀರದಲ್ಲಿನ ನಿರ್ಬಂಧಗಳು ಕೊನೆಗೊಳ್ಳಲೇ ಬೇಕು

ಆಗಲೇ 30 ದಿನಗಳು ಕಳೆದಿವೆ. ಒಂದೊಂದು ದಿನವೂ ಕಳೆಯುತ್ತಿರುವಂತೆ, ಕಾಶ್ಮೀರದ ಜನತೆಗೆ ನಿರ್ಬಂಧ, ಮತ್ತು ದಮನ ಭಾರತೀಯ ಪ್ರಜಾಪ್ರಭುತ್ವದ ಟೊಳ್ಳುತನವನ್ನು ಬಯಲು ಮಾಡುತ್ತಿದೆ. ಕಾಶ್ಮೀರದಲ್ಲಿ ಸಂಭವಿಸುತ್ತಿರುವುದು ಹಿಂದುತ್ವ ಸರ್ವಾಧಿಕಾರಶಾಹಿಯ ಅಡಿಯಲ್ಲಿ ಭಾರತದ ಇತರೆಡೆಗಳಲ್ಲಿ ಏನು ಕಾದಿದೆ ಎಂಬುದರ ಒಂದು ಗಂಭೀರ ಎಚ್ಚರಿಕೆಯಾಗಿದೆ. ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ಈ ಪಾಶವೀ ದಾಳಿ ಕೊನೆಗೊಳ್ಳಲೇ ಬೇಕು.



ಪ್ರಕಾಶ ಕಾರಟ್

ಜಮ್ಮು ಮತ್ತು ಕಾಶ್ಮೀರದಲ್ಲಿ ಆಗಸ್ಟ್ 5ರಂದು ಹಾಕಿದ ಭದ್ರತಾ ನಿರ್ಬಂಧಗಳಿಗೆ ಈಗ ಒಂದು ತಿಂಗಳಾಗಿದೆ. 30 ದಿನಗಳ ಕಾಲ ಕಾಶ್ಮೀರದ ಜನತೆಯನ್ನು ಅವರ ಎಲ್ಲ ಮೂಲಭೂತ ಹಕ್ಕುಗಳಿಂದ ವಂಚಿಸಿಡಲಾಗಿದೆ. ಅವರನ್ನು ಅವರ ಮನೆಗಳಿಂದ ಕದಲದಂತೆ ಮಾಡಲಾಗಿದೆ. ಮೊಬೈಲ್ ಫೋನ್ ಜಾಲಗಳು, ಟೆಲಿಫೋನ್‌ಗಳು ಮತ್ತು ಇಂಟರ್ನೆಟ್ ಸಂಪರ್ಕಗಳನ್ನು ಮುಚ್ಚಲಾಗಿದೆ; ಮುಖ್ಯ ರಸ್ತೆಗಳಲ್ಲಿ, ಹೆದ್ದಾರಿಗಳಲ್ಲಿ ತಂತಿಬೇಲಿಗಳನ್ನು ಹಾಕಿರುವುದರಿಂದಾಗಿ ಚಲನೆಯ ಹಕ್ಕು ಇಲ್ಲ; ಸಾರ್ವಜನಿಕ ಸಾರಿಗೆ ಇಲ್ಲ.

ಸರಕಾರೀ ಕಚೇರಿಗಳು ಕಾರ್ಯ ನಿರ್ವಹಿಸುತ್ತಿಲ್ಲ, ಏಕೆಂದರೆ ನೌಕರರು ಕರ್ತವ್ಯಕ್ಕೆ ಹಾಜರಾಗಲು ಆಗುತ್ತಿಲ್ಲ. ಮಾಧ್ಯಮ ವ್ಯಕ್ತಿಗಳಿಗೆ ಸಂಪರ್ಕ ತಡೆಗಳಿಂದಾಗಿ ಸುದ್ದಿ ಪತ್ರಿಕೆಗಳ ಪೂರ್ಣ ಪ್ರಮಾಣದ ಆವೃತ್ತಿಗಳು ಪ್ರಕಟವಾಗುತ್ತಿಲ್ಲ.

ಇವೆಲ್ಲಕ್ಕೂ ಮುಕುಟವಿಟ್ಟಂತೆ, ನ್ಯಾಷನಲ್ ಕಾನ್ಫರೆನ್ಸ್, ಪಿಡಿಪಿ, ಸಿಪಿಐ(ಎಂ), ಪೀಪಲ್ಸ್ ಕಾಂಗ್ರೆಸ್, ಎಐಪಿ ಮತ್ತು ಪೀಪಲ್ಸ್ ಮೂವ್‌ಮೆಂಟ್ ಪಕ್ಷಗಳ ಮುಖಂಡರು ಇನ್ನೂ ಸ್ಥಾನಬದ್ಧತೆಯಲ್ಲೇ ಇದ್ದಾರೆ. ಎಲ್ಲ ಹುರಿಯತ್ ಮುಖಂಡರುಗಳೂ ಜೈಲುಗಳಲ್ಲಿ ಇದ್ದಾರೆ. ಕಣಿವೆಯಲ್ಲಿನ ಪರಿಸ್ಥಿತಿಗಳ ಬಗ್ಗೆ ಮಾತು ಎತ್ತಿದವರನ್ನೆಲ್ಲ ಸ್ಥಾನಬದ್ಧತೆಯಲ್ಲಿಡಲಾಗುತ್ತಿದೆ.

ಇದರಲ್ಲಿ ಜನಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ನಿರಾಕರಿಸಲಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ ಡಾಕ್ಟರೂ ಇದ್ದಾರೆ. ಕಳೆದ 30 ದಿನಗಳಲ್ಲಿ ಕರಾಳ "ಸಾರ್ವಜನಿಕ ಸುರಕ್ಷತಾ ಕಾಯ್ದೆ" (ಪಿಎಸ್‌ಎ) ಅಡಿಯಲ್ಲಿ 250 ಮಂದಿ ನಿರ್ಬಂಧಕ್ಕೊಳಗಾಗಿದ್ದಾರೆ.

ಕೆಲವು ನಿರ್ಬಂಧಗಳನ್ನು ಸಡಿಲಿಸಲಾಗಿದೆ ಎಂದು ಸರಕಾರ ಹೇಳುತ್ತಿದೆ. ಆದರೆ ಬುಡಮಟ್ಟದಲ್ಲಿನ ವಾಸ್ತವತೆ ಏನೂ ಬದಲಾಗಿಲ್ಲ. ಟೆಲಿಫೋನ್ ಸಂಪರ್ಕಗಳನ್ನು ಮತ್ತೆ ಸ್ಥಾಪಿಸಲಾಗಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದರೂ ಹೆಚ್ಚಿನ ಪ್ರದೇಶಗಳಲ್ಲಿ ಬಹಳಷ್ಟು ಟೆಲಿಫೋನ್‌ಗಳು ಕೆಲಸ ಮಾಡುತ್ತಿಲ್ಲ. ಎರಡು ವಾರಗಳ ಹಿಂದೆ, 10 ನೆ ತರಗತಿಯ ವರೆಗಿನ ಶಾಲೆಗಳನ್ನು ತೆರೆಯಲಾಗಿದೆ ಎಂದು ಪ್ರಕಟಿಸಲಾಯಿತು. ಆದರೆ ನಿಜಸಂಗತಿಯೆಂದರೆ ಹೆಚ್ಚಿನ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಸುಮಾರಾಗಿ ಸೊನ್ನೆಯೇ. ಒಂದೋ ಪಾಲಕರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳಿಸಲು ಹಿಂಜರಿಯುತ್ತಿದ್ದಾರೆ, ಅಥವ ಸಂಪರ್ಕಗಳ ಅಭಾವದಿಂದಾಗಿ ಶಾಲೆಗಳ ಮೊಬೈಲ್ ಆಪ್‌ಗಳು ಅಥವ ಎಸ್‌ಎಂಎಸ್ ಗಳು ಅವರಿಗೆ ಲಭ್ಯವಾಗುತ್ತಿಲ್ಲ.

ವೈದ್ಯಕೀಯ ಚಿಕಿತ್ಸೆಗಳಿಗೆ ಆಸ್ಪತ್ರೆಗಳಿಗೆ ಹೋಗಲು ಜನಗಳಿಗೆ ಆಗುತ್ತಿಲ್ಲ. ನಿರ್ಬಂಧಗಳನ್ನು ಹೇರಿದ ನಂತರ "ಆಯುಷ್ಮಾನ್ ಭಾರತ ರಾಷ್ಟ್ರೀಯ ಆರೋಗ್ಯ ವಿಮಾ ಯೋಜನೆ"ಯ ಅಡಿಯಲ್ಲಿ ಬರುವ ಕೇಸ್‌ಗಳ ಸಂಖ್ಯೆ ಸುಮಾರಾಗಿ ಸೊನ್ನೆಗೇ ಇಳಿದಿದೆ ಎಂದು ಮಾಧ್ಯಮ ವರದಿಗಳು ಹೇಳುತ್ತಿವೆ. ಆಗಸ್ಟ್ 29ರ; ಇಕನಾಮಿಕ್ ಟೈಮ್ಸ್‌ನ ಒಂದು ವರದಿಯ ಪ್ರಕಾರ ರಾಜ್ಯದಲ್ಲಿ 14 ಲಕ್ಷ ಇ-ಕಾರ್ಡ್‌ಗಳನ್ನು ನೀಡಲಾಗಿದೆ. ಆಗಸ್ಟ್ 5 ರವರೆಗೆ ಇದರ ಅಡಿಯಲ್ಲಿ ಚಿಕಿತ್ಸೆ ಪಡೆಯಲು 22,000 ಮಂದಿ ಬಂದಿದ್ದರು. ಆದರೆ ನಿರ್ಬಂಧ ಹೇರಿದ ನಂತರ ಮೂರು ವಾರಗಳಲ್ಲಿ ಈ ಯೋಜನೆಯನ್ನು ಬಳಸಿದವರ ಸಂಖ್ಯೆ ತೀವ್ರವಾಗಿ ಇಳಿದಿದೆ, "ಸುಮಾರಾಗಿ ಸೊನ್ನೆ"ಯೇ ಆಗಿದೆ.

ಯುವಜನರನ್ನು ಅವರ ಮನೆಗಳಿಂದ ಬಂಧಿಸಿ ಒಯ್ಯುವ ಒಂದು ಹೊಸ ಪ್ರವೃತ್ತಿ ಆರಂಭವಾಗಿದೆ. ಅವರ ಬಂಧನಕ್ಕೆ ಯಾವುದೇ ಕಾರಣಗಳನ್ನು ಕೊಡುತ್ತಿಲ್ಲ, ಅವರು ಎಲ್ಲಿದ್ದಾರೆ ಎಂದೂ ತಿಳಿಸುತ್ತಿಲ್ಲ. ಇದು ಅವರ ಕುಟುಂಬಗಳಲ್ಲಿ ಭೀತಿಯ ವಾತಾವರಣವನ್ನು ಕಲ್ಪಿಸಿದೆ. ಶುಕ್ರವಾರದ ಪ್ರಾರ್ಥನೆಗಳ ನಂತರ ಪ್ರತಿಭಟನೆಗಳು ನಡೆದ ಸೌರಾ ಮುಂತಾದೆಡೆಯಲ್ಲಿ ಅವನ್ನು ಬಲಪ್ರಯೋಗದಿಂದ, ಪೆಲೆಟ್ ಗನ್‌ಗಳನ್ನೂ ಬಳಸಿ ಹತ್ತಿಕ್ಕಲಾಗಿದೆ. ಅಧಿಕೃತವಾಗಿ ಪೆಲೆಟ್ ಗನ್ ಬಳಕೆಯನ್ನು ನಿರಾಕರಿಸುತ್ತಿದ್ದರೂ, ಆಸ್ಪತ್ರೆಗಳಲ್ಲಿ ಯುವಜನರು ಪೆಲೆಟ್ ಗಾಯಗಳಿಗೆ ಚಿಕಿತ್ಸೆ ಪಡೆಯುತ್ತಿರುವುದು ಕಾಣ ಬಂದಿದೆ. ಇಂತಹ ಗಾಯಗಳಿಂದಾಗಿ ಸಂಭವಿಸಿರುವ ಮೊದಲ ಸಾವಿನ ವರದಿಯನ್ನು ಸಪ್ಟಂಬರ್ 3ರಂದು ಪಿಟಿಐ ನೀಡಿದೆ. ಆಗಸ್ಟ್ 6ರಂದು ಸೌರಾದಲ್ಲಿ ಪೆಲೆಟ್ ಗನ್‌ಗಳಿಂದ ಗಾಯಗೊಂಡ ಅಸ್ರಾರ್ ಅಹ್ಮದ್ ಖಾನ್ ಶ್ರೀನಗರದಲ್ಲಿ ಸಾವನ್ನಪ್ಪಿದ್ದಾನೆ.

ಸಂವಿಧಾನದ ಕಲಮು 19 ಮತ್ತು 21ರ ಅಡಿಯಲ್ಲಿ ಪ್ರತಿಯೊಂದು ಹಕ್ಕನ್ನೂ ಕಾಶ್ಮೀರ ಕಣಿವೆಯ ನಾಗರಿಕರಿಗೆ ಸಂಬಂಧಪಟ್ಟಂತೆ ದಮನ ಮಾಡಲಾಗಿದೆ. ಸುಪ್ರಿಂ ಕೋರ್ಟ್ ಈ ವಿಷಯದಲ್ಲಿ ಅರ್ಜಿಗಳ ವಿಚಾರಣೆ ನಡೆಸಿದರೂ ನಾಗರಿಕರ ಹಕ್ಕುಗಳನ್ನು ರಕ್ಷಿಸಲು ಮಧ್ಯಪ್ರವೇಶಿಸುವ ಅಗತ್ಯವಿಲ್ಲ ಎಂದು ಭಾವಿಸಿರುವಂತೆ ಕಾಣುತ್ತಿರುವುದು ಆತಂಕಕಾರಿ ಸಂಗತಿ.

ಒಂದೊಂದು ದಿನವೂ ಕಳೆಯುತ್ತಿರುವಂತೆ, ಕಾಶ್ಮೀರದ ಜನತೆಗೆ ನಿರ್ಬಂಧ, ಮತ್ತು ದಮನ ಭಾರತೀಯ ಪ್ರಜಾಪ್ರಭುತ್ವದ ಟೊಳ್ಳುತನವನ್ನು ಬಯಲು ಮಾಡುತ್ತಿದೆ. ಕಾಶ್ಮೀರದಲ್ಲಿ ಸಂಭವಿಸುತ್ತಿರುವುದು ಹಿಂದುತ್ವ ಸರ್ವಾಧಿಕಾರಶಾಹಿಯ ಅಡಿಯಲ್ಲಿ ಭಾರತದ ಇತರೆಡೆಗಳಲ್ಲಿ ಏನು ಕಾದಿದೆ ಎಂಬುದರ ಒಂದು ಗಂಭೀರ ಎಚ್ಚರಿಕೆಯಾಗಿದೆ.

ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ಈ ಪಾಶವೀ ದಾಳಿ ಕೊನೆಗೊಳ್ಳಲೇ ಬೇಕು. ನಿರ್ಬಂಧಗಳನ್ನು ತಕ್ಷಣವೇ ತೆಗೆಯಲೇ ಬೇಕು; ಸಂಪರ್ಕಗಳನ್ನು ಮತ್ತೆ ನೆಲೆಗೊಳಿಸಬೇಕು, ಸಾರ್ವಜನಿಕ ಸಾರಿಗೆ ಮತ್ತು ಸಾರ್ವಜನಿಕ ಸೇವೆಗಳನ್ನು ಮತ್ತೆ ಆರಂಭಿಸಬೇಕು; ಮತ್ತು ಎಲ್ಲ ರಾಜಕೀಯ ಮತ್ತು ನಾಗರಿಕ ಸಮಾಜದ ಮುಖಂಡರುಗಳನ್ನು, ಕಾರ್ಯಕರ್ತರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕು.

ಜಮ್ಮು-ಕಾಶ್ಮೀರದಲ್ಲಿ ಪರಿಸ್ಥಿತಿ-ಹೇಗಿದೆ? ಅಲ್ಲಿನವರ-ಮಾತಲ್ಲೇ-ಓದಿ.....



ಇವರು ರಾಜಕುಮಾರ್ ಮತ್ತು ಜಗದೀಶ್ ಶರ್ಮ. ಕೇರಳದ ತಿರುವನಂತಪುರಂ ನಲ್ಲಿ ಸಪ್ಟಂಬರ್ 4 ಮತ್ತು 5ರಂದು ನಡೆದ ಎರಡು ದಿನಗಳ ಭಾರತದ ಕಟ್ಟಡ ಕಾರ್ಮಿಕರ ಒಕ್ಕೂಟ(ಸಿಡಬ್ಲ್ಯುಎಫ್‌ಐ) ವರ್ಕಿಂಗ್ ಕಮಿಟಿ ಸಭೆಗಾಗಿ ಬಂದಿದ್ದರು. ಸಭೆಯಲ್ಲಿ ಜಮ್ಮು ಕಾಶ್ಮೀರ ಸಮಸ್ಯೆಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು...ನಂತರ ನಮ್ಮ ಜೊತೆ ಕೆಲ ಹೊತ್ತು ಕಾಶ್ಮೀರದ ಹಲವು ಮುಖಗಳನ್ನು ತೆರೆದಿಟ್ಟರು. ಅವರು ತಿಳಿಸಿದ ಕೆಲವು ಸಂಕ್ಷಿಪ್ತ ಅಂಶಗಳು ಇಲ್ಲಿವೆ. – ಕೆ. ಮಹಾಂತೇಶ್

"ಕಾಶ್ಮೀರದಲ್ಲಿ ನಮ್ಮನ್ನು ಅಕ್ಷರಶಃ ಬಂಧನದಲ್ಲಿಡಲಾಗಿದೆ"

ಜಮ್ಮು ಕಾಶ್ಮೀರದ ಜನ ನಾವು ಕಲಂ 370 ಮತ್ತು ಕಲಂ35ಎ ಅಡಿಯಲ್ಲಿ ನೆಮ್ಮದಿಯಿಂದ ಇದುವರೆಗೂ ಬದುಕುತ್ತಿದ್ದೇವೆ.

ಇವತ್ತು ಜಮ್ಮು-ಕಾಶ್ಮೀರದ ಪ್ರತಿಯೊಬ್ಬ ನಾಗರೀಕರಿಗೆ ಸಣ್ಣದಾದರೂ ಸರಿಯೇ ಒಂದು ಮನೆ ಇದೆ, ತುಂಡು ಭೂಮಿ ಹೊಂದಿದ್ದೇವೆ. ನಮ್ಮ ಜೀವನಕ್ಕೆ ಬೇಕಾದುದನ್ನು ನಾವು ಸಂಪಾದಿಸಿಕೊಳ್ಳುತ್ತಿದ್ದೇವೆ.

ನಮ್ಮೆಲ್ಲ ಮಕ್ಕಳಿಗೆ ಶಿಕ್ಷಣ ಸಿಗುತ್ತಿದೆ. ಇಲ್ಲಿ ಯಾವೊಬ್ಬ ಪ್ರಜೆಯೂ ಬೀದಿಯಲ್ಲಿ ಮಲಗುವ ಪರಿಸ್ಥಿತಿ ಇಲ್ಲ. ಶಿಕ್ಷಣ ಸರಾಸರಿಯಲ್ಲಿ ಜಮ್ಮು ಕಾಶ್ಮೀರ ಗುಜರಾತಿಗಿಂತ ಮುಂದಿದೆ.

ಜಮ್ಮು ಕಾಶ್ಮೀರದಲ್ಲಿ 2006 ರಲ್ಲಿ 'ಜಮ್ಮು ಕಾಶ್ಮೀರ ಕಟ್ಟಡ ಕಲ್ಯಾಣ ಮಂಡಳಿ' ರಚನೆಯಾಗಿದೆ ಅದರ ಅಡಿಯಲ್ಲಿ 2.5 ಲಕ್ಷ ಜನ ಸೌಲಭ್ಯಗಳಿಗಾಗಿ ಹೆಸರು ನೊಂದಾಯಿಸಿದ್ದಾರೆ. ಮಕ್ಕಳು ವಿದ್ಯಾರ್ಥಿವೇತನ ಪಡೆಯುತ್ತಿದ್ದಾರೆ. ಇನ್ನೂ ಲಕ್ಷಾಂತರ ಕಾರ್ಮಿಕರು ನೋಂದಣಿಯಾಗಬೇಕಿದೆ. ಮಂಡಳಿಯಲ್ಲಿ ಇದುವರೆಗೂ ಸುಮಾರು 500 ಕೋಟಿ ಸೆಸ್ ಹಣಸಂಗ್ರಹವಾಗಿದೆ.

ಆದರೆ ಮೋದಿ ಸರಕಾರ ಇದೀಗ ಸಾಮಾಜಿಕ ಮಸೂದೆ ಜಾರಿಗೊಳಿಸುವ ಮೂಲಕ ನಮ್ಮ ಸೌಲಭ್ಯಗಳನ್ನು ಕಿತ್ತುಕೊಳ್ಳಲು ಹೊರಟಿದೆ.

ಜಮ್ಮು-ಕಾಶ್ಮೀರದ ಜನತೆಗೆ ಕಲಂ 370 ರದ್ದುಪಡಿಸುವ ಮೂಲಕ ಸ್ವಾತಂತ್ರ್ಯ ನೀಡಿದ್ದೇವೆ ಎನ್ನುವ ಕೇಂದ್ರ ಸರಕಾರದ ಮಾತು ತಪ್ಪು ಮಾಹಿತಿಯಿಂದ ಕೂಡಿದೆ. ವಾಸ್ತವವಾಗಿ ಭಾರತ ಸರಕಾರ ಇದುವರೆಗೂ ಜಾರಿ ಮಾಡಿರುವ ಎಲ್ಲ ಕಾನೂನುಗಳು ಜಮ್ಮು ಕಾಶ್ಮೀರದಲ್ಲಿ ಜಾರಿಯಾಗುತ್ತಿವೆ. ಹಾಗೆ ನೋಡಿದರೆ ನಮಗೆ ಇರುವ ಸ್ವಾತಂತ್ರ್ಯವನ್ನು ಈಗ ಅಕ್ಷರಶಃ ಕಸಿದುಕೊಳ್ಳಲಾಗಿದೆ. ಇದರಿಂದ ನಮಗೆ ಅನಾನುಕೂಲವೇ ಹೆಚ್ಚು. ದೇಶದ ಇತರೆ ರಾಜ್ಯಗಳಾದ ನಾಗಲ್ಯಾಂಡ್, ತೆಲಂಗಾಣ ಸೇರಿದಂತೆ ಇತರೆ ಸ್ವಾಯತ್ತ ಪ್ರದೇಶಗಳಲ್ಲಿವೇ ಹಾಗೇಯೇ ನಮಗೂ ಇದುವರೆಗೂ ಕಲಂ 370 ಅಡಿ ಹಲವು ಸೌಲಭ್ಯಗಳು ದೊರಕುತ್ತಿದ್ದವು.

ಕಾಶ್ಮೀರದಲ್ಲಿ ಜನರನ್ನು ಅಕ್ಷರಶಃ ಬಂಧನದಲ್ಲಿಡಲಾಗಿದೆ ಅವರ ಮಕ್ಕಳು, ನೆರೆಹೊರೆಯವರು ಹಾಗೂ ಸಂಬಂಧಿಗಳ ಭೇಟಿಗೆ ಮತ್ತು ಎಲ್ಲಾ ಸಂಪರ್ಕ ಸಾಧನಗಳನ್ನು ಸಂಪೂರ್ಣ ನಿರ್ಬಂಧಿಸಲಾಗಿದೆ.

ಕಾಶ್ಮೀರಕ್ಕೆ ಹೋಲಿಸಿದರೆ ಜಮ್ಮುವಿನಲ್ಲಿ ಅಷ್ಟೊಂದು ಕಠಿಣ ಪರಿಸ್ಥಿತಿ ಇಲ್ಲವಾದರೂ ಹತ್ತಾರು ನಿರ್ಬಂದಗಳನ್ನು ಹೇರಲಾಗಿದೆ. ಸಂವಿಧಾನ ಬದ್ದವಾದ ವಿಧಾನಸಭೆಯನ್ನು ವಿಸರ್ಜಿಸಲಾಗಿದೆ ಜನರ ಸಮಸ್ಯೆಗಳನ್ನು ಆಲಿಸುವವರೇ ಇಲ್ಲವಾಗಿದೆ. ಎಲ್ಲಿ ನೋಡಿದರೂ ಮಿಲಿಟರಿ ಅರ್ಭಟವೇ ಒಂದು ತಿಂಗಳಿಂದ ಶಾಲೆ ಕಾಲೇಜುಗಳು ಬಂದ್ ಆಗಿವೆ....

#ಯಾಕೆ ಹೀಗೆ....?

ಜಮ್ಮು ಕಾಶ್ಮೀರ ಅತ್ಯದ್ಭುತವಾದ ಪ್ರವಾಸಿ ತಾಣ. ಇಲ್ಲಿ ಅಪಾರವಾದ ಮ್ಯಾಗ್ನೆಟಿಕ್ ಖನಿಜ ಸಂಪತ್ತಿದೆ.. ಈ ಅಪಾರ ಪ್ರಮಾಣದ ಖನಿಜ ಇದುವರೆಗೂ ಸುರಕ್ಷಿತವಾಗಿತ್ತು. ಇನ್ನು ಮುಂದೆ ಅದನ್ನು ಕೈಗಾರಿಕೆ, ಪ್ರವಾಸೋದ್ಯಮದ ಹೆಸರಲ್ಲಿ ಅಪಾರ ನೈಸರ್ಗಿಕ ಸಂಪತ್ತಿನ ಲೂಟಿಗೆ ಅವಕಾಶವಾಗಲಿದೆ.


ಆರ್.ಎಸ್.ಎಸ್. ಇಲ್ಲಿನ ಜಮ್ಮು ಪ್ರದೇಶವನ್ನು ಮತ್ತೊಂದು ನಾಗಪುರವನ್ನಾಗಿ ಮಾಡಿಕೊಳ್ಳುವ ಭಾಗವಾಗಿ ಪ್ರಯತ್ನ ನಡೆಸಿದೆ. ಅದು ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸಬೇಕೆಂಬ ಉದ್ದೇಶ ಹೊಂದಿದೆ. ಮೊದಲೇ ಉಗ್ರರ ನೆಲೆಯಿಂದ ತತ್ತರಿಸಿದ ಕಾಶ್ಮೀರದ ಜನತೆ ಮತ್ತಷ್ಟು ಕಷ್ಟಕ್ಕೆ ಸಿಲುಕಿದ್ದಾರೆ. ಈಗಾಗಲೇ ಅಲ್ಲಿನ ಕೆಲ ಉಗ್ರರು ಇತರೆ ರಾಜ್ಯಗಳವರು ಕಾಶ್ಮೀರ ಬಿಟ್ಟು ತೆರಳಬೇಕೆಂಬ ಫತ್ವಾವನ್ನು ಅಪ್ರತ್ಯಕ್ಷವಾಗಿ ಘೋಷಿಸಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಕಾಶ್ಮೀರ ದಿಂದ ಹೊರಗಿರುವ ಜನರಿಗೆ ಕಾಶ್ಮೀರ ಜನರ ಸಮಸ್ಯೆಗಳು ತಿಳಿದಿಲ್ಲ. ಕಾಶ್ಮೀರ ಎಂದರೆ ಕೇವಲ ಮುಸ್ಲಿಮರು ಮಾತ್ರ ಎನ್ನುವ ತಪ್ಪು ಅಭಿಪ್ರಾಯಗಳನ್ನು ಬಿಜೆಪಿ ಸಂಘಪರಿವಾರ ದೇಶದ ಉದ್ದಗಲಕ್ಕೂ ಪ್ರಚಾರ ನಡೆಸುತ್ತಿದೆ. ಕಾಶ್ಮೀರದಲ್ಲಿ ನೂರಾರು ವರ್ಷಗಳಿಂದ ಹಿಂದೂಗಳು ಮುಸ್ಲಿಂಮರು, ಬೌದ್ಧರು, ದಲಿತರು, ಆದಿವಾಸಿಗಳು, ನೇಪಾಳಿಗಳು ಇತರೆ ರಾಜ್ಯಗಳಿಂದ ಬಂದಿರುವ ಜನರು ಸೌಹಾರ್ದ ಬದುಕು ಸಾಗಿಸುತ್ತಿದ್ದಾರೆ. ಇಲ್ಲಿ ಕೋಮುಗಲಭೆಗಳು ನಡೆದೇ ಇಲ್ಲ. ಇಲ್ಲಿ ಈಗಲೂ ಪ್ರತಿವರ್ಷ ಸಾವಿರಾರು ಪ್ರವಾಸಿಗರು ಸ್ವಚ್ಛಂದವಾಗಿ ಬಂದು ಹೋಗುತ್ತಾರೆ.

ಹಿಂದೆ ಕಾಶ್ಮೀರದ ರಾಜ ಹರಿಸಿಂಗ್ ಇಲ್ಲಿ ಆಡಳಿತ ನಡೆಸಿದ. ಅವನು ನೇಪಾಳಿ ಮನೆತನದ ಹುಡುಗಿಯನ್ನು ಮದುವೆಯಾದ, ವರದಕ್ಷಿಣೆ ರೂಪದಲ್ಲಿ ಸಾವಿರಾರು ನೇಪಾಳಿಗರು ಆ ಕಾಲದಲ್ಲೇ ಕಾಶ್ಮೀರಕ್ಕೆ ವಲಸೆ ಬಂದಿದ್ದಾರೆ. ಇದೀಗ ಬಿಜೆಪಿಯವರು 'ಖಾಯಂ ನಿವಾಸ ಪ್ರಮಾಣಪತ್ರ'(ಪಿಆರ್‌ಸಿ) ಬಗ್ಗೆ ಮಾತನಾಡುತ್ತಿದ್ದಾರೆ. ಯಾರು ಈ ಪಿಆರ್‌ಸಿ ಹೊಂದಿಲ್ಲವೋ ಅವರು 'ಕಾಶ್ಮೀರೇತರರು' ಎನ್ನುವ ಅಭಿಪ್ರಾಯವನ್ನು ಪ್ರಚಾರ ಮಾಡುತ್ತಿದ್ದಾರೆ.


ಹಿಂದೆ ಪಿಆರ್‌ಸಿ ಹೊಂದಿದ್ದವರು ಇಂದು ಬದುಕಿಲ್ಲ. ಈಗ ಕಾಶ್ಮೀರದಲ್ಲಿ ಬದುಕುತ್ತಿರುವುದು ಅವರ ಮೂರು ನಾಲ್ಕನೇ ತಲೆಮಾರಿನ ಜನ ಈಗ ಅವರೆಲ್ಲ ಪಿಆರ್‌ಸಿ ದಾಖಲೆ ಎಲ್ಲಿಂದ ತರಲು ಸಾಧ್ಯ.? ಕಾಶ್ಮೀರದಲ್ಲಿರುವ ಬಹುಸಂಖ್ಯಾತ ಮುಸ್ಲಿಂಮರು ಅಲ್ಲಿನ ಮೂಲನಿವಾಸಿಗಳಲ್ಲ ಎನ್ನುವ ವಾದವನ್ನು ಹರಿಯಬಿಡಲಾಗಿದೆ....

ಇಂತಹ ಎಲ್ಲ ಸಂಘಪರಿವಾರದ ಕುತಂತ್ರಗಳ ವಿರುದ್ಧ ಸಿಐಟಿಯು ಮತ್ತು ಸಿಪಿಎಂ ನಿರಂತರ ಜನಸಂಪರ್ಕ, ಹೋರಾಟ ನಡೆಸುತ್ತಿವೆ. ಆದರೆ ನಮ್ಮ ಹೋರಾಟದ ವರದಿಗಳು ಸ್ಥಳೀಯ ಮಾಧ್ಯಮಗಳನ್ನು ಹೊರತುಪಡಿಸಿ ರಾಷ್ಟ್ರೀಯ ಮಾಧ್ಯಮಗಳಲ್ಲಿ ಸ್ಥಾನ ಪಡೆಯುತ್ತಿಲ್ಲ...ಎಂದು ಮಾತು ಮುಗಿಸಿದರು.



ಆಗಸ್ಟ್ 5, 2019ರಂದು ಮೋದಿ ಸರಕಾರ ಸಂವಿಧಾನ, ಪ್ರಜಾಪ್ರಭುತ್ವ, ಒಕ್ಕೂಟ ತತ್ವ ಮತ್ತು ಜಾತ್ಯತೀತತೆಯ ನೀತಿಗಳ ವಿರುದ್ಧ ಒಂದು ಮಿಂಚಿನ ಪ್ರಹಾರ ನಡೆಸಿ ಸಂವಿಧಾನದ 370ನೇ ಮತ್ತು 35ಎ ವಿಧಿಗಳನ್ನು ರದ್ದು ಪಡಿಸಿದ್ದರ ಸುತ್ತ ಹಲವು ಪ್ರಶ್ನೆಗಳು ಎದ್ದಿವೆ. ಸಿಪಿಐ(ಎಂ) ಈ ಕುರಿತು ಪ್ರಕಟಿಸಿರುವ ಪುಸ್ತಿಕೆ "ಸಂವಿಧಾನಕ್ಕೆ ಮೋಸ, ಕಾಶ್ಮೀರಕ್ಕೆ ವಿಶ್ವಾಸದ್ರೋಹ" ಇಂತಹ ಎಂಟು ಪ್ರಮುಖ ಪ್ರಶ್ನೆಗಳಿಗೆ ಉತ್ತರ ನೀಡಿದೆ. ಇವುಗಳಲ್ಲಿ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕೊಡಬೇಕಾಗಿ ಪ್ರಸಂಗದ ಕುರಿತಾದ ಪ್ರಧಾನ ಪ್ರಶ್ನೆಗೆ ಉತ್ತರವನ್ನು ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಅದಕ್ಕೆ ಸಂಬಂಧಪಟ್ಟಂತೆ ಆಗ ಕಾಶ್ಮೀರದ ಮಹಾರಾಜನಿಗೆ ಭಾರತದಿಂದ ಸ್ವತಂತ್ರವಾಗಿರಲು ಬೆಂಬಲ ಕೊಟ್ಟ ಶಕ್ತಿಗಳೇ ಈಗ ದೇಶಭಕ್ತಿಯ ಪೋಸು ಕೊಡುವ ಗೋಸುಂಬೆತನವನ್ನು ಈ ಪ್ರಶ್ನೆಗೆ ಉತ್ತರದಲ್ಲಿ ಬಯಲಿಗೆಳೆಯಲಾಗಿದೆ.

ಮಹಾರಾಜನಿಗೆ ಬೆಂಬಲ ಕೊಟ್ಟಿದ್ದ ಶಕ್ತಿಗಳು ಯಾವವು?



ಕಾಶ್ಮೀರಿಗಳು ಮತ-ಧರ್ಮಗಳ ಎಲ್ಲೆಗಳನ್ನು ದಾಟಿ ನ್ಯಾಯ, ಪ್ರಜಾಪ್ರಭುತ್ವ ಮತ್ತು ಮಹಾರಾಜನ ಹಾಗೂ ಬ್ರಿಟಿಶರ ನಿರಂಕುಶ ಆಳ್ವಿಕೆಯಿಂದ ಸ್ವಾತಂತ್ರ್ಯದ ಪಾಳೆಯಗಾರೀ-ವಿರೋಧಿ ಪ್ರಜಾಸತ್ತಾತ್ಮಕ ಬೇಡಿಕೆಗಳ ಮೇಲೆ ಅಣಿನೆರೆಯುತ್ತಿದ್ದಾಗ ಆರೆಸ್ಸೆಸ್ ರಾಜಪ್ರಭುತ್ವಕ್ಕೆ ಬೆಂಬಲವಾಗಿ ಎಲ್ಲ ಪ್ರತಿಕ್ರಿಯಾವಾದಿ ಪಾಳೆಯಗಾರೀ ಶಕ್ತಿಗಳನ್ನು ಅಣಿಗೊಳಿಸುತ್ತಿತ್ತು. ತನ್ನ ಹಿಂದೂರಾಷ್ಟ್ರ ಪರಿಕಲ್ಪನೆಗೆ ಬದ್ಧವಾಗಿದ್ದ ಅದು, ಅದನ್ನು ಮುಂದೊಯ್ಯುತ್ತ ಕಾಶ್ಮೀರಿಗಳ ಹೋರಾಟಗಳನ್ನು ಕೋಮು ಆಧಾರದಲ್ಲಿ ವಿಭಜಿಸಲು ಪ್ರಯತ್ನಿಸುತ್ತಿತ್ತು. ಹಿಂದೂಗಳನ್ನು ರಕ್ಷಿಸುವ ಹೆಸರಿನಲ್ಲಿ ಅದು ಮಹಾರಾಜನ ಕುತಂತ್ರಗಳನ್ನು ಮತ್ತು ಪಾಳೆಯಗಾರೀ ವ್ಯವಸ್ಥೆಯನ್ನು ಬಹಿರಂಗವಾಗಿಯೇ ಬೆಂಬಲಿಸಿತು. ಜಮ್ಮುವಿನಲ್ಲಿ ಅದು 'ಪ್ರಜಾ ಪರಿಷದ್' ಎಂಬ ಫಲಕದ ಅಡಿಯಲ್ಲಿ ಕೆಲಸ ಮಾಡುತ್ತ ನ್ಯಾಶನಲ್ ಕಾನ್ಫರೆನ್ಸ್‌ನ ಹೆಚ್ಚುತ್ತಿದ್ದ ಪ್ರಭಾವವನ್ನು ತಡೆಯಲು ಪ್ರಯತ್ನಿಸುತ್ತಿತ್ತು.

ಜೂನ್-ಜುಲೈ 1947 ರಲ್ಲಿ ಭಾರತದ ಸ್ವಾತಂತ್ರ್ಯ ಸನ್ನಿಹಿತವಾಗುತ್ತಿದ್ದಾಗ ಒಂದು ಸ್ವತಂತ್ರ ಪ್ರಭುತ್ವವಾಗುವ ಮಹಾರಾಜನ ಬೇಡಿಕೆಯನ್ನು ಅದು ಬೆಂಬಲಿಸಿತು, ಮತ್ತು ಭಾರತಕ್ಕೆ ಸೇರ್ಪಡೆಯಾಗುವುದನ್ನು ವಿರೋಧಿಸಿತು. ಅತ್ತ ಕಣಿವೆಯಲ್ಲಿನ ಕಾಶ್ಮೀರಿಗಳು ಪಾಕಿಸ್ತಾನ-ಬೆಂಬಲಿತ ದಾಳಿಕೋರರನ್ನು ಎದುರಿಸಿ ಹಿಮ್ಮೆಟ್ಟಿಸುತ್ತಿದ್ದಾಗ ಇದರ ಸುಳಿವೇ ಇರಲಿಲ್ಲ. ಇನ್ನೂ ಹೊಲಸು ಸಂಗತಿಯೆಂದರೆ, ಅದು ಕೋಮುವಾದಿ ಉದ್ದೇಶಕ್ಕಾಗಿ ಯುವಜನರಿಗೆ ಶಸ್ತ್ರಗಳನ್ನು ಕೊಟ್ಟು ತರಬೇತಿ ನಡೆಸುತಿತ್ತು. ಅದರಿಂದಾಗಿ ಇಬ್ಭಾಗವಾದ ಭಾರತ ಹೊತ್ತಿ ಉರಿಯುತ್ತಿದ್ದಾಗ, ಇತ್ತ ಕಾಶ್ಮೀರ ಕಣಿವೆಯಲ್ಲಿ ಮಾತ್ರ ಯಾವುದೇ ಕೋಮುವಾದಿ ಹಿಂಸಾಚಾರ ನಡೆಯಲಿಲ್ಲ. ಆದರೆ ಪಕ್ಕದ ಜಮ್ಮು ಪ್ರದೇಶದಲ್ಲಿ ಪ್ರಜಾಪರಿಷದ್ ನೇತೃತ್ವದಲ್ಲಿ, ಮತ್ತು ಮಹಾರಾಜನ ಬೆಂಬಲದಿಂದ ಒಂದು ಭೀಕರ ಕೋಮು ದಳ್ಳುರಿ ಹರಡಿತು. ಇದರಲ್ಲಿ ಜಮ್ಮುವಿನ ಹಲವಾರು ಮುಗ್ಧ ಮುಸ್ಲಿಮರ ಹತ್ಯಾಕಾಂಡ ನಡೆಯಿತು.


ಸೇರ್ಪಡೆಯ ದಸ್ತಾವೇಜಿಗೆ ಸಹಿ ಹಾಕಿದ ನಂತರ ಪ್ರಜಾಪರಿಷದ್ ತನ್ನ ಕೋಮುವಾದೀ ಎರಡು-ರಾಷ್ಟ್ರ ಸಿದ್ಧಾಂತದ ಆಧಾರದಲ್ಲಿ ಜಮ್ಮುವನ್ನು ಪ್ರತ್ಯೇಕಿಸಿ ರಾಜ್ಯ ರಚಿಸಬೇಕೆಂದು ಚಳುವಳಿ ಆರಂಭಿಸಿತು. ಸ್ವಾತಂತ್ರ್ಯದ ನಂತರವೂ ಭಾರತೀಯ ಬಾವುಟದ ಪಕ್ಕದಲ್ಲಿ ಮಹಾರಾಜನ ಬಾವುಟವೂ ಹಾರುವುದರ ಬಗ್ಗೆ ಆರೆಸ್ಸೆಸ್‌ಗೆ ಏನೇನೂ ಆಕ್ಷೇಪವಿರಲಿಲ್ಲ, ಎರಡೂ ಬಾವುಟಗಳನ್ನು ಅದು ಸ್ವೀಕರಿಸಿತ್ತು. ಆದರೆ ಹೊಸದಾಗಿ ರಚಿಸಲ್ಪಟ್ಟ ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ಸಭೆ ರಾಜಪ್ರಭುತ್ವವನ್ನು ನಿರ್ಮೂಲ ಮಾಡಿ ಮಹಾರಾಜನ ಬಾವುಟದ ಸ್ಥಾನದಲ್ಲಿ ರಾಜ್ಯದ ಸಮಸ್ತ ಜನತೆಯ ಹೋರಾಟವನ್ನು ಪ್ರತಿನಿಧಿಸುವ ರಾಜ್ಯದ ಬಾವುಟವನ್ನು ನಿರ್ಧರಿಸಿದ ನಂತರವೇ ಅದು 'ಒಂದು ಬಾವುಟ, ಒಂದು ರಾಷ್ಟ್ರ' ಎಂಬ ಬೇಡಿಕೆಯನ್ನು ಎತ್ತಿತು. ನೇಪಾಳದಲ್ಲೂ ರಾಜಪ್ರಭುತ್ವದ ಪರವಾದ ಶಕ್ತಿಗಳೊಂದಿಗೆ ಸಂಪರ್ಕದಲ್ಲಿದ್ದ ಆರೆಸ್ಸೆಸ್ ಸದಾ ರಾಜಪ್ರಭುತ್ವವನ್ನು ಬೆಂಬಲಿಸಿದಂತೆ, ಕಾಶ್ಮೀರದಲ್ಲಿ ಪಾಳೆಯಗಾರೀ ರಾಜ್ಯಭಾರದ ಅತ್ಯಾಚಾರಗಳು ಮತ್ತು ಶೋಷಣೆಗಳ ವಿರುದ್ಧ ಹೋರಾಟ ನಡೆಯುತ್ತಿದ್ದಾಗ, ಧರ್ಮದ ಹೆಸರಿನಲ್ಲಿ ಮಹಾರಾಜನ ಬೆಂಬಲಕ್ಕೆ ನಿಂತಿತ್ತು.

ಅದು ಜಮ್ಮು ಮತ್ತು ಕಾಶ್ಮೀರದ ಜನತೆಯ ಐಕ್ಯತೆಯ ಹೋರಾಟವನ್ನು ದುರ್ಬಲಗೊಳಿಸಿತು.

'ಮಿಂಚಿನ ಪ್ರಹಾರ'ದ ಕೋಲ್ಮಿಂಚುಗಳು

ನೋಟುರದ್ದತಿಯ ನಂತರ ಮೋದಿ ಸರಕಾರದ ಇನ್ನೊಂದು ಸಾಹಸಗಾಥೆ, ವಿಲಕ್ಷಣ ಸ್ವರೂಪಗಳನ್ನು ಪಡೆಯುತ್ತಿದೆ. ಈ ಮತ್ತೊಂದು ಮಿಂಚಿನ ಪ್ರಹಾರ'ದಲ್ಲಿ ಕಾಶ್ಮೀರಿಗಳ ಒಳಿತಿಗೆಂದೇ ಅವರ ರಾಜ್ಯಕ್ಕೆ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದ್ದಷ್ಟೇ ಅಲ್ಲ, ಅದನ್ನು ಒಂದು ಕೇಂದ್ರಾಡಳಿತ ಪ್ರದೇಶದ ಮಟ್ಟಕ್ಕೆ ಇಳಿಸಲಾಯಿತು! ಇದರಲ್ಲಿ ಕೈಜೋಡಿಸಿದ ರಾಜ್ಯಪಾಲರನ್ನು ಉಪರಾಜ್ಯಪಾಲರ ಮಟ್ಟಕ್ಕೆ ಇಳಿಸಲಾಗುತ್ತಿದೆ!! ಈ (ಉಪ)ರಾಜ್ಯಪಾಲರು ಒಂದೇ ಒಂದು ಕಾಶ್ಮೀರಿ ಹೆಣ ಬೀಳಬಾರದು ಎಂಬ ಸದ್ದುದ್ದೇಶದಿಂದಲೇ ಅಲ್ಲಿಯ ಜನಗಳು ಮಾತನಾಡಬಾರದು, ಮನೆಯಿಂದ ಕದಲಬಾರದು ಎಂದು ಕಟ್ಟಪ್ಪಣೆ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. (ಆದರೆ ಆಗಲೇ ಕನಿಷ್ಟ ಮೂರು ಸಾವುಗಳು ವರದಿಯಾಗಿವೆ ಎಂಬುದು ಬೇರೆ ಮಾತು)

ಈ ರಾಜ್ಯಪಾಲರಿಗೆ ಮತ್ತು ಅವರ ಮೇಲಿನವರಿಗೆ ಕಾಶ್ಮೀರಿ ಜನಗಳ ಬಗ್ಗೆ ಎಷ್ಟೊಂದು ಮಮತೆ ಎಂದರೆ, ಶ್ರೀನಗರದಲ್ಲಿ ಸರಕಾರೀ ಮೆಡಿಕಲ್ ಕಾಲೇಜು ಎದುರು 'ಇದು ಒಂದು ಪ್ರತಿಭಟನೆಯಲ್ಲ, ಒಂದು ಕೋರಿಕೆ' ಎಂಬ ಫಲಕ ಹಿಡಿದು ಕೂತಿದ್ದ ಡಾಕ್ಟರನ್ನು ಭದ್ರತಾ ಸಿಬ್ಬಂದಿ ಬಂದು ತಮ್ಮ ಗಾಡಿಯ ಬಳಿಗೆ ಒಯ್ದು ಅಲ್ಲಿಂದ ಹೊರಹಾಕಿಯೇ ಬಿಟ್ಟರಂತೆ-ಅವರು ಒಬ್ಬ ಪ್ರಸಿದ್ಧ ಡಾಕ್ಟರು ಎಂಬುದನ್ನೂ ಲೆಕ್ಕಿಸದೆ, ಅವರ ಕೋರಿಕೆಯೇನು?



"ಆಸ್ಪತ್ರೆಗಳಿಗೆ ಮತ್ತು ವೈದ್ಯಕೀಯ ಸಂಸ್ಥೆಗಳಿಗೆ ಟೆಲಿಫೋನ್ ಮತ್ತು ಇಂಟರ್ನೆಟ್ ಸಂಪರ್ಕವನ್ನು ಕಡಿಯಬೇಡಿ, ಇದರಿಂದ ರೋಗಿಗಳಿಗೆ ತೊಂದರೆಯಾಗುತ್ತದೆ, ಆರೋಗ್ಯ ವಿಮಾ ಯೋಜನೆ ನಿಷ್ಪ್ರಯೋಜಕವಾಗುತ್ತದೆ, ಡಯಾಲಿಸಿಸ್ ಸಾಧ್ಯವಾಗುತ್ತಿಲ್ಲ, ಕ್ಯಾನ್ಸರ್ ರೋಗಿಗಳ ಚಿಕಿತ್ಸೆ ನಿಂತು ಹೋಗಿದೆ." **ಈ ವೈದ್ಯರ ಹೆಸರು ಡಾ. ಒಮರ್ ಸಲೀಂ.** (ದಿ ಸಿಟಿಝನ್, ಸೆಪ್ಟಂಬರ್ 1)

ಇವರು **ನಜೀರ್ ಅಹ್ಮದ್ ರೋಂಗ.** ಕಾಶ್ಮೀರ ಹೈಕೋರ್ಟ್ ಬಾರ್ ಅಸೋಸಿಯೇಷನ್' ನ ಅಧ್ಯಕ್ಷರಾಗಿದ್ದವರು.ಇವರನ್ನು ಆಗಸ್ಟ್ 4ರಂದು 6 ತಿಂಗಳು ವಿಚಾರಣೆಯಿಲ್ಲದೆ ಜೈಲಿನಲ್ಲಿ ಡಬಹುದಾದ 'ಸಾರ್ವಜನಿಕ ಸುರಕ್ಷತಾ ಕಾಯ್ದೆ'(ಪಿಎಸ್ಎ) ಅಡಿಯಲ್ಲಿ ಬಂಧಿಸಲಾಯಿತು. ಏಕೆ? ಇವರು 370 ಕಲಮಿನ ರದ್ದತಿಯನ್ನು ವಿರೋಧಿಸುತ್ತಾರೆ ಎಂದಲ್ಲ, "ಪ್ರತ್ಯೇಕತಾವಾದಿಗಳು ಮತದಾನಕ್ಕೆ ಬಹಿಷ್ಕಾರದ ಕರೆ ನೀಡಿದ್ದಾಗಲೂ ನೀವು ನಿಮ್ಮ ಮತದಾರರಿಗೆ ಮನವರಿಕೆ ಮಾಡಿ ಅಪಾರ ಸಂಖ್ಯೆಯಲ್ಲಿ ಮತದಾನ ಮಾಡಿಸುವಂತಹ ಸಾಮರ್ಥ್ಯ ಹೊಂದಿದ್ದೀರಿ."! ಇನ್ನು, ಮರುದಿನ ತರಲಿದ್ದ 370 ರದ್ದತಿಯಂತಹ ನೇರವಾಗಿ ಸಂವಿಧಾನ-ವಿರೋಧಿಯಾದ ಕ್ರಮದ ಬಗ್ಗೆ ಜನರಿಗೆ ಮನವರಿಕೆ ಮಾಡದಿರಲು ಸಾಧ್ಯವೇ ಎಂಬುದು ಆಳರಸರ ಭೀತಿಯಿರಬಹುದೇ? "ಅಂದರೆ ಈಗ ಕಾಶ್ಮೀರದಲ್ಲಿ ಜನಗಳು ಪ್ರಜಾಪ್ರಭುತ್ವದಲ್ಲಿ ಭಾಗವಹಿಸಬೇಕು ಎಂದು ಹೇಳುವುದೂ ತಪ್ಪೇ?" ಎಂದು ಹೆಸರು ಹೇಳಲಿಚ್ಛಿಸದ ವಕೀಲರೊಬ್ಬರು ಟಿಪ್ಪಣಿ ಮಾಡಿದರಂತೆ.(ದಿ ವೈರ್, 31 ಆಗಸ್ಟ್).



ಇವರು **ಡಾ. ಉಪೇಂದ್ರ ಕೌಲ್.** ಪ್ರಸಿದ್ಧ ಹೃದ್ರೋಗ ತಜ್ಞ. ಇವರನ್ನು ಎನ್.ಐ.ಎ. (ರಾಷ್ಟ್ರೀಯ ತನಿಖಾ ಸಂಸ್ಥೆ) 2017ರ ಒಂದು ಭಯೋತ್ಪಾದನಾ ಫಂಡಿಂಗ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಗಂಭೀರ ವಿಚಾರಣೆಗೆಂದು ಕಳೆದ ವಾರ ಶ್ರೀನಗರದಿಂದ ದಿಲ್ಲಿಗೆ ಕರೆಸಿತ್ತು. ಇವರು ಜೆಕೆಎಲ್ಎಫ್ (ಜಮ್ಮು ಕಾಶ್ಮೀರ ಲಿಬರೇಷನ್ ಫ್ರಂಟ್) ನ ಮುಖಂಡ ಯಾಸಿನ್ ಮಲಿಕ್ ಗೆ 20ವರ್ಷಗಳ ಹಿಂದೆ ಚಿಕಿತ್ಸೆ ಕೊಡುತ್ತಿದ್ದವರು. ಆತನಿಗೆ ಕಳಿಸಿದ ಯಾವುದೋ ಒಂದು ಎಸ್ಎಂಎಸ್ ನಲ್ಲೋ, ವಾಟ್ಸ್ ಆಪ್‌ನಲ್ಲೋ "ಐಎನ್ಆರ್ 2.78' ಎಂದು ಬರೆದಿತ್ತಂತೆ. ಜೆಕೆಎಲ್ಎಫ್ ಈ ವರ್ಷವಷ್ಟೇ ನಿಷೇಧಿತವಾದ ಸಂಘಟನೆ, ಯಾಸಿನ್ ಮಲಿಕ್ ತಿಹಾರ್ ಜೈಲಿನಲ್ಲಿದ್ದಾನೆ. ಈ "ಐಎನ್ಆರ್ 2.78' ಎಂದರೆ ಏನು? ಐಎನ್ಆರ್ ಎಂದರೆ ವ್ಯಾಪಾರ-ವ್ಯವಹಾರಗಳಲ್ಲಿ ಭಾರತೀಯ ರೂಪಾಯಿ ಎಂದರ್ಥ. ಅಂದರೆ ಇದು ಯಾವುದೋ 2.78 ಲಕ್ಷವೋ, ಕೋಟಿಯೋ, ಭಯೋತ್ಪಾದಕರಿಗೆ ಹಣ ಒದಗಿಸುವ ಹವಾಲಾ ವ್ಯವಹಾರದ್ದಿರಬೇಕು ಎಂದು ಎನ್ಐಎಎ ಊಹೆಯಂತೆ. ಪ್ರತ್ಯೇಕತಾವಾದಿ ಮಲಿಕ್‌ಗೆ ಎಸ್ಎಂಎಸ್ ಏಕೆ ಕಳಿಸುತ್ತಿದ್ದೀರಾ, ಈ ಸಂದೇಶದ ಅರ್ಥವೇನು ಇತ್ಯಾದಿ ಪ್ರಶ್ನೆಗಳಿಂದ ಮೊದಲಿಗೆ ತಬ್ಬಿಬ್ಬಾದರೂ ನಂತರ ಡಾ.ಕೌಲ್‌ಗೆ ಬಹಳ ತಮಾಷೆಯೆನಿಸಿತಂತೆ. ಏಕೆಂದರೆ, ವಾಸ್ತವವಾಗಿ ಇದು ಒಂದು ವೈದ್ಯಕೀಯ ಪದ, ರಕ್ತ ಹೆಪ್ಪುಗಟ್ಟಲು ಎಷ್ಟು ಸಮಯ ಬೇಕು ಎಂಬುದರ ಒಂದು ಪ್ರಯೋಗಶಾಲಾ ಅಳತೆ. (ದಿ ವೈರ್, ಆಗಸ್ಟ್ 30)

1996-97ರಲ್ಲಿ ಡಾ. ಕೌಲ್ ಮಲಿಕ್‌ಗೆ ಚಿಕಿತ್ಸೆ ಕೊಟ್ಟಿದ್ದರು. ಆದರೆ ಇನ್ನೊಂದು ತಮಾಷೆಯ ಸಂಗತಿ-ಆತನನ್ನು ಈ ಡಾಕ್ಟರ್ ಬಳಿಗೆ ಮೊದಲು ಕರೆ ತಂದವರು ಭಾರತ ಸರಕಾರದ ಬೇಹುಗಾರಿಕೆ ಕಚೇರಿ (ಐಬಿ)ಯ ಒಬ್ಬ ವಿಶೇಷ ನಿರ್ದೇಶಕರು, ಮುಂದೆ 'ರಾ' ದ ಮುಖ್ಯಸ್ಥರೂ ಆದವರು!..

ಮತ್ತೂ ಒಂದು ತಮಾಷೆಯ ಸಂಗತಿಯೆಂದರೆ, ಎನ್ಐಎ ಬುಲಾವ್ ಬಂದದ್ದು, ಟೆಲಿವಿಷನ್ ಕಾರ್ಯಕ್ರಮವೊಂದರಲ್ಲಿ ಡಾ. ಕೌಲ್ ಕಲಮು 370ರ ರದ್ದತಿಯನ್ನು ಟೀಕಿಸಿದ ಕೆಲವು ದಿನಗಳ ನಂತರ. ಬಹಳಷ್ಟು ಪ್ರಸಿದ್ಧರಿಗೆ ಹೃದ್ರೋಗ ಕುರಿತ ಸಲಹೆ-ಸೂಚನೆಗಳನ್ನು ಕೊಡುತ್ತಿದ್ದ ಡಾ.ಕೌಲ್ ಮತ್ತು ಯಾಸಿನ್ ಮಲಿಕ್ ನಡುವಿನ ಇಂತಹ ಎಸ್ಎಂಎಸ್‌ಗಳನ್ನು ಅಗೆದು ತೆಗೆಯಲು ಈ 'ಕೆಲವು ದಿನಗಳು' ಬೇಕಾಯಿತಂತೆ. ಇಂತಹ ಹಿರಿಯ ವೈದ್ಯರ ಬಗ್ಗೆ ಇಂತಹ ಅಪಾರ್ಥಕ್ಕೆ ಎನ್ಐಎ ಅಧಿಕಾರಿಗಳು ಕ್ಷಮೆ ಕೇಳಿದರೇ? ಖಂಡಿತಾ ಇಲ್ಲ, ಅರ್ಧಗಂಟೆಯ ನಂತರ ನೀವು ಹೋಗಬಹುದು ಎಂದರು!



ಗುಲಾಮಗಿರಿಯ ಪ್ರಾರಂಭದ 400 ವರ್ಷಗಳ ನಂತರವೂ

ಕಪ್ಪು–ಬಿಳಿ ಅಮೆರಿಕನ್ನರ ನಡುವಿನ ಅಸಮಾನತೆ ಮುಂದುವರಿದಿದೆ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ನಾನೂರು ವರ್ಷಗಳ ಹಿಂದೆ, ಅಂದರೆ, 1619ರ ಆಗಸ್ಟ್ ತಿಂಗಳಲ್ಲಿ 20 ಸೆರೆಯಾಳುಗಳನ್ನು ಹೊತ್ತ ಹಡಗು ಆಫ್ರಿಕಾದಿಂದ ವರ್ಜೀನಿಯಾದ ಹಡಗುದಾಣದಲ್ಲಿ ಬಂದು ನಿಂತಿತು. ಮುಂದೆ ಇದೇ ಅಮೆರಿಕಾದ ಗುಲಾಮಗಿರಿಯ ಉಗಮಕ್ಕೆ ಕಾರಣವಾಯಿತು. ಆದರೆ, 1620 ರಲ್ಲಿ "ಮೇ ಫ್ಲವರ್" ಹಡಗಿನಲ್ಲಿ, ಬಂದಿಳಿದ 102 ಪ್ರಯಾಣಿಕರ ಆಗಮನವನ್ನೇ ಈಗಲೂ ಯುಎಸ್ ನ ಗುಲಾಮಗಿರಿ ಪದ್ಧತಿಯ ಆರಂಭವೆಂದೇ ಬಹಳಷ್ಟು ಅಮೆರಿಕನ್ನರಿಗೆ ಪರಿಚಯಿಸಲಾಗಿದೆ. ಆದರೆ, ಇದಕ್ಕೆ ಒಂದು ವರ್ಷದ ಹಿಂದೆಯೇ 20 ಆಫ್ರಿಕನ್ನರನ್ನು ಅವರ ಇಚ್ಛೆಗೆ ವಿರುದ್ಧವಾಗಿ ಅಪಹರಿಸಿ ತಂದು, ಅಂದು ಅಮೆರಿಕಾವನ್ನು ವಸಾಹತು ಮಾಡಿಕೊಂಡಿದ್ದ ಬ್ರಿಟಿಷರಿಗೆ ಒಪ್ಪಿಸಿದ್ದೇ ಗುಲಾಮ ಪದ್ಧತಿಗೆ ಮೂಲ ಕಾರಣವಾಯಿತು ಎಂಬುದು ವಾಸ್ತವತೆ.

ಅಮೆರಿಕಾದ ಬಂಡವಾಳಶಾಹಿ ಆರ್ಥಿಕತೆಯ ಸೃಷ್ಟಿಗೆ ಗುಲಾಮರ ಶ್ರಮವೇ ಬೆನ್ನೆಲುಬು ಎಂದರೆ ಅತಿಶಯೋಕ್ತಿಯಾಗಲಾರದು. ಇಂದು ಅಮೆರಿಕಾವು ವಿಶ್ವದ ಪ್ರಮುಖ ಆರ್ಥಿಕತೆಯಾಗಿ ಬೆಳೆಯಲು ಮತ್ತು ಉಳಿಯಲು ಅವಕಾಶ ಮಾಡಿಕೊಟ್ಟಿದ್ದೆ ಈ ಗುಲಾಮರ ಶ್ರಮ. ಆದರೆ, ಈ ಆಫ್ರಿಕನ್ ಗುಲಾಮ ಕಾರ್ಮಿಕರಿಗೆ ಅವರ ಪಾಲಿನ ಸಂಪತ್ತನ್ನು ಮಾತ್ರ ಸೂಕ್ತವಾಗಿ ಇಲ್ಲಿಯವರೆವಿಗೂ ಪಾವತಿಸಲೇ ಇಲ್ಲವೆಂಬುದು ಕೂಡ ಅಷ್ಟೆ ಸತ್ಯ. ಆದಾಗ್ಯೂ, ಅಮೆರಿಕದ ಆರ್ಥಿಕತೆ, ಈಗಲೂ ಹೆಚ್ಚಾಗಿ ಇವರ ಕೆಲಸದ ಮೇಲೆಯೇ ಹೆಚ್ಚಾಗಿ ಅವಲಂಬಿತವಾಗಿದೆ ಎಂಬುದು ವಾಸ್ತವ.

ಪ್ರಸ್ತುತ ಸಂಪತ್ತಿನ ವಿಭಜನೆಯಲ್ಲಿ ಅಪಾರ ಜನಾಂಗೀಯ ಅಸಮಾನತೆಯನ್ನು ಕಾಣಬಹುದು. ಕಳೆದ ನಾಲ್ಕು ವರ್ಷಗಳಿಂದೀಚೆಗೆ ಈ ಸಂಪತ್ತಿನ ಜನಾಂಗೀಯ ವ್ಯತ್ಯಾಸ ಮತ್ತಷ್ಟು ಹೆಚ್ಚಾಗಿರುವುದು ಮತ್ತು ಅದರ ಮುಂದುವರಿದ ಪ್ರವೃತ್ತಿಗಳು ಅಸಮಾನತೆಯ ಅಂತರದ ವಿಸ್ತರಣೆಯನ್ನು ಇನ್ನೂ ಪ್ರತಿಬಿಂಬಿಸುತ್ತಲೇ ಇವೆ.

ಶೇ.37 ಕರಿಯ ಕುಟುಂಬಗಳ ಸಂಪತ್ತು ನಕಾರಾತ್ಮಕ!

ಜನವರಿ 15, 2019 ರಂದು ಡಾ. ಮಾರ್ಟಿನ್ ಲೂಥರ್ ಕಿಂಗ್(ಜೂನಿಯರ್)ರವರ 90 ನೇ ಜನ್ಮ ದಿನದ ಪ್ರಯುಕ್ತ "ಇನ್‌ಸ್ಟಿಟ್ಯೂಟ್ ಫಾರ್ ಪಾಲಿಸಿ ಸ್ಟಡೀಸ್" ನಡೆಸಿದ ಒಂದು ಸಮೀಕ್ಷೆಯ ವರದಿಯು" ಅಮೆರಿಕದ ಸಂಪತ್ತು ಬಿಳಿ ಅಮೆರಿಕನ್ನರ ಕುಟುಂಬಗಳಲ್ಲಿ ಹೇಗೆ ಹೆಚ್ಚು ಸಾಂದ್ರೀಕರಿಸಿದೆ ಮತ್ತು ಕಪ್ಪು ಆಫ್ರಿಕನ್ ಕುಟುಂಬಗಳ ಸಂಪತ್ತಿನ ಪಾಲನ್ನು ಹೇಗೆ ವಂಚಿಸಲಾಗಿದೆ" ಎಂಬ ವಾಸ್ತವ ಚಿತ್ರಣವನ್ನು ಹೊರ ಹಾಕಿದೆ.

ಮಾರ್ಟಿನ್ ಲೂಥರ್ ಕಿಂಗ್ (ಜೂನಿಯರ್) ಕರಿಯರ ಮಾನವೀಯ ಹಕ್ಕುಗಳಿಗಾಗಿ ಜೀವನ ಪರ್ಯಂತ ಹೋರಾಟ ನಡೆಸಿದವರು. ಕೊನೆಗೆ ಇವರು ಕೊಲ್ಲಲ್ಪಟ್ಟರು. ಕರಿಯರ ವಿರುದ್ಧ ಕ್ರೌರ್ಯಕ್ಕೆ ಮಾರ್ಟಿನ್ನರ ಕೊಲೆ ಕನ್ನಡಿ ಹಿಡಿದ ಹಾಗೆ.

ವಸಾಹತುಶಾಹಿಯಿಂದ ವಿಮುಕ್ತಿಗೊಂಡು ಯು.ಎಸ್. ಹೊಸದಾಗಿ ಸ್ಥಾಪನೆಯಾದ ನಂತರ, ಸುಮಾರು 250 ವರ್ಷಗಳ ಕಾಲ ಅವ್ಯಾಹತವಾಗಿ ನಡೆದಿದ್ದ ಗುಲಾಮಗಿರಿಯು ಅಧಿಕೃತವಾಗಿ 1865ರಲ್ಲಿ ಕೊನೆಗೊಂಡಿತು. ಆದರೆ ಕರಿಯರ ವಿರುದ್ಧ ಅಸಮಾನತೆಯ ಆಚರಣೆಯ ಕ್ರೌರ್ಯಗಳನ್ನು – ಜಿಮ್ ಕ್ರೌ ಕಾನೂನು, ರೆಡ್ ಲೈನಿಂಗ್ ಹಾಗೂ ವ್ಯಾಪಕ ಬಂಧನಗಳು – ಮುಂತಾದ ಅನೇಕ ಸಾರ್ವಜನಿಕ ನೀತಿಗಳ ಮೂಲಕ ಮುಂದುವರಿಸಲಾಯಿತು.

1983 ರಿಂದ 2016 ರ ನಡುವೆ, ಕಪ್ಪು ಅಮೆರಿಕನ್ನರ ಕುಟುಂಬದ ಸರಾಸರಿ ಸಂಪತ್ತು ಅರ್ಧಕ್ಕಿಂತಲೂ ಹೆಚ್ಚು ಇಳಿಕೆಯನ್ನು ಕಂಡಿದೆ. ಆದರೆ, ಇದೇ ಸಮಯದಲ್ಲಿ ಬಿಳಿ ಅಮೆರಿಕನ್ ಕುಟುಂಬದ ಸರಾಸರಿ ಸಂಪತ್ತು, ಶೇ.33 ರಷ್ಟು ಹೆಚ್ಚಾಗಿರುವುದನ್ನು ಈ ವರದಿ ದಾಖಲಿಸಿದೆ. ಇದು ಆಫ್ರಿಕನ್ ಅಮೆರಿಕನ್ ರಿಂದ ಮತ್ತು ಇತರೆ ದೇಶಗಳಿಂದ ವಲಸೆ ಬಂದು ನೆಲೆಸಿರುವ ಬಡ ಕಾರ್ಮಿಕರ ಶ್ರಮದಿಂದ ಯುಎಸ್ ನ ಆರ್ಥಿಕ ಅಭಿವೃದ್ಧಿ ವೃದ್ದಿಯಾಗುತ್ತಿರುವುದನ್ನು ಪ್ರತಿ ಬಿಂಬಿಸುತ್ತದೆ ಎಂದು ವರದಿಯು ಪ್ರಸ್ತಾಪಿಸಿದೆ. ಕಪ್ಪು ಅಮೆರಿಕನ್ನರ ಸಂಪತ್ತು ಕುಸಿಯುತ್ತಿರುವ ಈ ವರ್ಷಗಳಲ್ಲೇ, ಒಂದು ಕೋಟಿ ಡಾಲರುಗಳಿಗಿಂತ ಹೆಚ್ಚು ಸಂಪತ್ತು ಇರುವ ಕುಟುಂಬಗಳ ಸಂಖ್ಯೆ 8.56 ಪಟ್ಟು ಹೆಚ್ಚಳವಾಗಿದೆ. ಇದರ ಪರಿಣಾಮದಿಂದಾಗಿ, ಇನ್ನೊಂದು ತುದಿಯಲ್ಲಿ ಈಗ ಶೇ.37 ರಷ್ಟು ಕಪ್ಪು ಕುಟುಂಬಗಳ ಸರಾಸರಿ ಸಂಪತ್ತು ಶೂನ್ಯ ಅಥವಾ ನಕಾರಾತ್ಮಕವಾಗಿದೆ (ಅಂದರೆ ಅವರ ಆಸ್ತಿಗಿಂತ ಹೆಚ್ಚು ಸಾಲ ಇದೆ) ಎನ್ನಲಾಗಿದೆ. ಶೇ.15 ರಷ್ಟು ಬಿಳಿ ಅಮೆರಿಕನ್ನರ ಕುಟಂಬಗಳು ಮಾತ್ರ ಈ ಸ್ಥಿತಿಯಲ್ಲಿವೆ.

ಸಂಪತ್ತಿನ ಈ ವಿಷಮ ಜನಾಂಗೀಯ ವಿಭಜನೆಯು ಎಲ್ಲಾ ಅಮೆರಿಕನ್ನರ ಮೇಲೆ ಹಾಗೂ ಒಟ್ಟಾರೆ ಯಾಗಿ ಅಮೆರಿಕಾದ ಆರ್ಥಿಕತೆಯ ಮೇಲೆಯೂ ಗಾಡವಾದ ದುಷ್ಪರಿಣಾಮ ಬೀರಿದೆ. ಕಪ್ಪು ಜನಸಂಖ್ಯೆ ಹೆಚ್ಚಾದಂತೆ ಅಮೆರಿಕದ ಕುಟುಂಬಗಳ ಸರಾಸರಿ ಸಂಪತ್ತು ಕೂಡ ಕುಸಿದಿದೆ. 1983ರಲ್ಲಿ 84,111 ಡಾಲರ್ ಇದ್ದ ಸರಾಸರಿ ಸಂಪತ್ತು 2016ರಲ್ಲಿ 81,704 ಡಾಲರಿಗೆ ಕುಸಿದಿದೆ. 1983ರಲ್ಲಿ 6 ಅಮೆರಿಕನ್ ಕುಟುಂಬಗಳಲ್ಲಿ 1 ಕುಟುಂಬ ನಕಾರಾತ್ಮಕ ಸಂಪತ್ತು ಅನುಭವಿಸುತ್ತಿದ್ದು, 2016ರಲ್ಲಿ 5 ಕುಟುಂಬಗಳಲ್ಲಿ 1 ಕುಟುಂಬ ಆ ಸ್ಥಿತಿಯಲ್ಲಿದೆ. ಹಾಗೆಯೇ, ಕರಿಯರ ಸಂಪತ್ತಿನ ಸವೆತದ ಸುತ್ತ ಅನೇಕ ರೀತಿಯ ಚರ್ಚೆಗಳು ನಡೆಯುತ್ತಿವೆ. ಈ ಚರ್ಚೆಗಳು ಕರಿಯರ ಸೋಮಾರಿತನ, ಶಿಕ್ಷಣದಲ್ಲಿ ಹಿಂದುಳಿದಿರುವಿಕೆ ಮತ್ತು ನಿರಾಸಕ್ತಿ, ಕೆಲಸದ ಮತ್ತು ಇತರ ನೈತಿಕತೆಯ ಅಭಾವದ ಸುತ್ತ ಗಿರಕಿ ಹೊಡೆಯುತ್ತವೆ. ಅಂದರೆ ಜಗತ್ತಿನ ಎಲ್ಲೆಡೆಗೆ ಆಗುವಂತೆ ದಮನಿತರ ಶೋಚನೀಯ ಪರಿಸ್ಥಿತಿಗೆ ಅವರೇ ಕಾರಣ ಎನ್ನುವ ಸಾಮಾನ್ಯ ಉಳ್ಳವರ ಕಥನ. ಇದು ಮಿಥ್ಯೆ ಎಂದು ಹಲವು ಅಧ್ಯಯನಗಳು ತೋರಿಸುತ್ತವೆ. ಕಾಲೇಜು ಶಿಕ್ಷಣ ಪಡೆದ ಕರಿಯ ಕುಟುಂಬಗಳು ಹೈಸ್ಕೂಲ್ ಶಿಕ್ಷಣ ಪಡೆದ ಬಿಳಿಯ ಕುಟುಂಬಗಳಿಗಿಂತ ಕಡಿಮೆ ಸರಾಸರಿ ಸಂಪತ್ತು ಹೊಂದಿವೆ. ಏಕ–ಪೋಷಕ ಬಿಳಿ ಕುಟುಂಬಗಳು, ಕರಿಯ ದ್ವಿ–ಪೋಷಕ ಕುಟುಂಬಕ್ಕಿಂತ ಎರಡು ಪಟ್ಟು ಹೆಚ್ಚು ಶ್ರೀಮಂತರಾಗಿದ್ದಾರೆ.

ಒಟ್ಟಾರೆಯಾಗಿ, ಕರಿಯ–ಬಿಳಿಯ ಕುಟುಂಬಗಳ ಸಂಪತ್ತಿನ ಅಂತರ ಕರಿಯರ ವೈಯಕ್ತಿಕ ಗುಣಲಕ್ಷಣಗಳಿಂದಾಗಿ ಅಲ್ಲ. ಗುಲಾಮಗಿರಿ ಪ್ರಾರಂಭವಾಗಿ 400 ವರ್ಷಗಳಲ್ಲಿ ಕರಿಯ ಅಮೆರಿಕನ್ನರಿಗೆ ಸಂಪನ್ಮೂಲಗಳನ್ನು ನಿರಂತರವಾಗಿ ನಿರಾಕರಿಸಿರುವುದು ಕಾರಣ ಎಂದು ಈ ವರದಿಯಲ್ಲಿ ಗುರುತಿಸಿಲಾಗಿದೆ. ಮೊದಲ ಗುಲಾಮರನ್ನು ಆಫ್ರಿಕಾದಿಂದ ಒತ್ತಾಯಪೂರ್ವಕವಾಗಿ ಅಪಹರಿಸಿಕೊಂಡು ಬಂದದ್ದು, ಅವರಿಂದ ಅಮೂಲ್ಯವಾದ ಶ್ರಮವನ್ನು ಉಚಿತವಾಗಿ ಮಾಡಿಸಿಕೊಳ್ಳಲೆಂದೆ' ಎಂದು ಇನ್ಸಿಟ್ಯೂಟ್ ಫಾರ್ ಪಾಲಿಸಿ ಸ್ಟಡೀಸ್ ತನ್ನ ವರದಿಯಲ್ಲಿ ಒತ್ತಿ ಹೇಳಿದೆ. ಉದ್ಯೋಗ, ಆದಾಯ, ಮನೆ ಮಾಲಿಕತ್ವ, ಷೇರ್ ಮಾಲಿಕತ್ವ, ಉದ್ಯಮ ಶೀಲತೆ ಮತ್ತು ಇತರೆ ಎಲ್ಲಾ ಆರ್ಥಿಕ ಸೂಚಕಗಳು ಸಂಪತ್ತಿನ ವಿಷಮ ಜನಾಂಗೀಯ ವಿಭಜನೆಯನ್ನು ಸ್ಪಷ್ಟವಾಗಿ ತೋರಿಸುತ್ತವೆ.

ಈ ಜನಾಂಗೀಯ ವಿಭಜನೆಯನ್ನು ನಿಜವಾದ ಅರ್ಥದಲ್ಲಿ ನಿವಾರಿಸಲು, ಐತಿಹಾಸಿಕವಾಗಿ ಬಿಳಿ ಅಮೆರಿಕನ್ ಸಮುದಾಯಗಳು ಸ್ವಾಧೀನ ಪಡಿಸಿಕೊಂಡಿರುವ ಬೃಹತ್ ಸಂಪತ್ತಿನ್ನಷ್ಟೇ ದೊಡ್ಡ ಪ್ರಮಾಣದಲ್ಲಿ ಕರಿಯ ಸಮುದಾಯಗಳಿಗೆ ಪರಿಹಾರ ಒದಗಿಸಬೇಕು ಅಥವಾ ಸಂಪತ್ತಿನ ವರ್ಗಾವಣೆ/ ಹೂಡಿಕೆ ಮಾಡಬೇಕು. ಈ ನಿಟ್ಟಿನಲ್ಲಿ ಎಲ್ಲರನ್ನೂ ಒಳಗೊಂಡ ಆಮೂಲಾಗ್ರ ಸಂರಚನಾತ್ಮಕ ಬದಲಾವಣೆಯ ಕ್ರಮಗಳನ್ನು ಕೈಗೊಳ್ಳಬೇಕು. ಇದಕ್ಕೆ ದೃಢವಾದ ರಾಜಕೀಯ ಇಚ್ಛಾಶಕ್ತಿ ಇರಬೇಕಾಗುತ್ತದೆ. ಆಗ ಮಾತ್ರ ಆಫ್ರಿಕನ್ ಅಮೆರಿಕನ್ ರಿಗೆ ಅಂತಿಮವಾಗಿ ನ್ಯಾಯ ಒದಗಿಸಲು ಸಾಧ್ಯ. 400 ವರ್ಷಗಳ ಗುಲಾಮಗಿರಿಯ ಪರಿಣಾಮಗಳನ್ನು ತಾತ್ಕಾಲಿಕ ಬ್ಯಾಂಡ್–ಏಡ್ ಗಳು ನಿವಾರಿಸಲು ಸಾಧ್ಯವಿಲ್ಲ, ಎಂದು ವರದಿ ಹೇಳುತ್ತದೆ. "ಈ ದೇಶದಲ್ಲಿ ಅಮೆರಿಕನ್ನರು ಎಂದರೆ ಬಿಳಿಯರು ಮಾತ್ರ, ಉಳಿದವರು ಗುಲಾಮರು ಅಷ್ಟೇ" ಎಂಬ ಪ್ರಸಿದ್ಧ ಕರಿಯ ಲೇಖಕಿ ಟೋನಿ ಮಾರಿಸನ್ ಅವರ ಮಾತು ಸದ್ಯಕ್ಕಂತೂ ಸತ್ಯವೆನಿಸುತ್ತದೆ.

> 1983 ರಿಂದ 2016 ರ ನಡುವೆ, ಕಪ್ಪು ಅಮೆರಿಕನ್ನರ ಕುಟುಂಬದ ಸರಾಸರಿ ಸಂಪತ್ತು ಅರ್ಧಕ್ಕಿಂತಲೂ ಹೆಚ್ಚು ಇಳಿಕೆಯನ್ನು ಕಂಡಿದೆ. ಆದರೆ, ಇದೇ ಸಮಯದಲ್ಲಿ ಬಿಳಿ ಅಮೆರಿಕನ್ ಕುಟುಂಬದ ಸರಾಸರಿ ಸಂಪತ್ತು, ಶೇ.33 ರಷ್ಟು ಹೆಚ್ಚಾಗಿದೆ. 2017ರಲ್ಲಿ ಪ್ಯೂ (ಪಿ.ಇ.ಡಬ್ಲ್ಯೂ) ಅಧ್ಯಯನ ಸರಾಸರಿ ಬಿಳಿಯ ಕುಟುಂಬಗಳ ಆದಾಯ ಕರಿಯ ಕುಟುಂಬಗಳ ಆದಾಯದ 10 ಪಟ್ಟು ಎಂದಿದೆ. ಈ ಹಿನ್ನೆಲೆಯಲ್ಲಿ ಗುಲಾಮಗಿರಿ ಪ್ರಾರಂಭವಾಗಿ 400 ವರ್ಷಗಳ ಆಚರಣೆಯ ಸುತ್ತ ಈ ಕುರಿತು ತೀವ್ರ ರಾಜಕೀಯ ಚರ್ಚೆ ಆರಂಭವಾಗಿದೆ. 2014ರಲ್ಲೇ 250 ವರ್ಷಗಳ ಗುಲಾಮಗಿರಿಗೆ ಕರಿಯರಿಗೆ ಪರಿಹಾರ ಒದಗಿಸಬೇಕು ಎಂದು ವಾದಿಸುವ ತಾ ನೆಹಿಸಿ ಕೋಟ್ಸ್ ಎನ್ನುವವರ ವರದಿ ಪ್ರಕಟವಾಯಿತು. ಡೆಮೊಕ್ರಾಟಿಕ್ ಅಧ್ಯಕ್ಷೀಯ ಅಭ್ಯರ್ಥಿ ಸೆನೆಟರ್ ಕೊರಿ ಬುಕರ್ ಕರಿಯರಿಗೆ ಪರಿಹಾರ ಒದಗಿಸುವ ಬಗ್ಗೆ ಒಂದು ಮಸೂದೆಯನ್ನು ಮಂಡಿಸಿದ್ದಾರೆ. ಇತರ ಡೆಮೊಕ್ರಾಟಿಕ್ ಅಧ್ಯಕ್ಷೀಯ ಅಭ್ಯರ್ಥಿಗಳಾದ ಎಲಿಜಬೆತ್ ವಾರೆನ್ ಮತ್ತು ಬರ್ನಿ ಸ್ಯಾಂಡರ್ಸ್ ಅದನ್ನು ಬೆಂಬಲಿಸಿ, ತಮ್ಮ ಪ್ರಣಾಳಿಕೆಯಲ್ಲಿ ಸೇರಿಸಿಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಗುಲಾಮಗಿರಿಯ ಪ್ರಾರಂಭವಾಗಿ 400 ವರ್ಷಗಳ ಆಚರಣೆಯ ಸುತ್ತ ಈ ಕುರಿತು ತೀವ್ರ ರಾಜಕೀಯ ಚರ್ಚೆ ಆರಂಭವಾಗಿದೆ. 2014ರಲ್ಲೇ 250 ವರ್ಷಗಳ ಗುಲಾಮಗಿರಿಗೆ ಕರಿಯರಿಗೆ ಪರಿಹಾರ ಒದಗಿಸಬೇಕು ಎಂದು ವಾದಿಸುವ ತಾ ನೆಹಿಸಿ ಕೋಟ್ಸ್ ಎನ್ನುವವರ ವರದಿ ಪ್ರಕಟವಾಯಿತು. 2017ರಲ್ಲಿ ಪ್ಯೂ (ಪಿ.ಇ.ಡಬ್ಲ್ಯೂ) ಅಧ್ಯಯನ ಸರಾಸರಿ ಬಿಳಿಯ ಕುಟುಂಬಗಳ ಆದಾಯ ಕರಿಯ ಕುಟುಂಬಗಳ ಆದಾಯದ 10 ಪಟ್ಟು ಎಂದಿದೆ. ಡೆಮೊಕ್ರಾಟಿಕ್ ಅಧ್ಯಕ್ಷೀಯ ಅಭ್ಯರ್ಥಿ ಸೆನೆಟರ್ ಕೊರಿ ಬುಕರ್ ಕರಿಯರಿಗೆ ಪರಿಹಾರ ಒದಗಿಸುವ ಬಗ್ಗೆ ಒಂದು ಮಸೂದೆಯನ್ನು ಮಂಡಿಸಿದ್ದಾರೆ. ಇತರ ಡೆಮೊಕ್ರಾಟಿಕ್ ಅಧ್ಯಕ್ಷೀಯ ಅಭ್ಯರ್ಥಿಗಳಾದ ಎಲಿಜಬೆತ್ ವಾರೆನ್ ಮತ್ತು ಬರ್ನಿ ಸ್ಯಾಂಡರ್ಸ್ ಅದನ್ನು ಬೆಂಬಲಿಸಿ, ತಮ್ಮ ಪ್ರಣಾಳಿಕೆಯಲ್ಲಿ ಸೇರಿಸಿಕೊಂಡಿದ್ದಾರೆ.


ಅಮೆರಿಕದ ಗುಲಾಮಗಿರಿಯ ಸ್ಥೂಲ ಚರಿತ್ರೆ

1619: ವರ್ಜೀನಿಯಾಕ್ಕೆ 20 ಆಫ್ರಿಕರನ್ನು ಹೊತ್ತ ಹಡಗಿನ ಆಗಮನ; ಡಚ್ ವ್ಯಾಪಾರಿಯಿಂದ ಅವರನ್ನು ಗುಲಾಮರಾಗಿ ಮಾರಾಟ; ಗುಲಾಮಗಿರಿಯ ಆರಂಭ


1619–1810: ಆಫ್ರಿಕನ್ನರನ್ನು ಅಪಹರಿಸಿ ಅಟ್ಲಾಂಟಿಕ್ ಸಾಗರದ ಮೇಲೆ ಹಡಗಿನಲ್ಲಿ ಸಾಗಾಣಿಕೆ ಮಾಡಿ ಗುಲಾಮರಾಗಿ ಅಮೆರಿಕದಲ್ಲಿ ಮಾರಾಟ ಮಾಡುವ ವಾಪಾರ ಮುಂದುವರೆಯಿತು. 1700 ರಲ್ಲಿ ಹತ್ತು ಸಾವಿರದಷ್ಟಿದ್ದ ಗುಲಾಮರ ಸಂಖ್ಯೆ, 1760 ಹೊತ್ತಿಗೆ 2 ಲಕ್ಷಕ್ಕೆ ಹತ್ತಿರವಾಗಿ, 1810ರ ಹೊತ್ತಿಗೆ 3 ಲಕ್ಷ ದಾಟಿತ್ತು.

1661: ಮೇರಿಲ್ಯಾಂಡಿನಲ್ಲಿ ಕರಿಯ ಗುಲಾಮರು ಮತ್ತು ಬಿಳಿಯರ ನಡುವೆ ಮದುವೆ ನಿಷೇಧಿಸುವ ಮೊದಲ ಕಾನೂನು: ಮುಂದೆ ಇಂತಹ ಕಾನೂನುಗಳು ಹೆಚ್ಚಿನ ಉತ್ತರ ಅಮೆರಿಕದ ಬ್ರಿಟಿಷ್ ವಸಾಹತುಗಳಲ್ಲಿ ಬಂದವು. 1960ರಲ್ಲೂ ಇನ್ನೂ ಯು.ಎಸ್. ನ 20 ರಾಜ್ಯಗಳಲ್ಲಿ ಇಂತಹ ಕಾನೂನುಗಳು ಇದ್ದವು. 2000ದಲ್ಲಿ ಅಲಬಾಮಾ ಇಂತಹ ಕಾನೂನು ತೆಗೆದು

ಪುಟ 11 ಕ್ಕೆ



ಕರಿಯ ಗುಲಾಮರ ಹರಾಜು



ಕರಿಯರಿಗೆ ಪ್ರತ್ಯೇಕ ವಾಶ್ ಬೇಸಿನ್!





ರೈತ – ಕಾರ್ಮಿಕರ ಜಂಟಿ ಪ್ರತಿಭಟನೆ

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯುನಿಯನ್ಸ್ (ಸಿಐಟಿಯು) ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಜಂಟಿ ಜಿಲ್ಲಾ ಸಮಿತಿ ವಿಜಯಪುರವತಿಯಿಂದ ಸೆ. 5 ರಂದು ವಿಜಯಪುರ ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ ಅವರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಲಾಯಿತು.

ಪ್ರತಿಭಟನಾ ಮೆರವಣಿಗೆಯು ಅಂಬೇಡ್ಕ್ ವೃತ್ತದಿಂದ ಬೃಹತ್ ಮೆರವಣಿಗೆ ನಡೆಯಿತು. ಧರಣಿ ನಿರತ ಸ್ಥಳಕ್ಕೆ ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ ಅವರು ಆಗಮಿಸಿ ಮನವಿ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಭೀಮಶಿ ಕಲಾದಗಿ ಮಾತನಾಡಿ, ದೇಶದ ಸಂಪತ್ತನ್ನು ಸೃಷ್ಟಿ ಮಾಡುವ ರೈತ–ಕಾರ್ಮಿಕ ವರ್ಗಗಳನ್ನು ಸಂಕಷ್ಟಕೆ ನುಗ್ಗುವ ಯಾವುದೇ ಸರ್ಕಾರವು ದೇಶದ ಪ್ರಗತಿಗೆ ಪೂರಕವಾಗಿರಲು ಸಾಧ್ಯವಿಲ್ಲ. ಬಿಜೆಪಿ ನೇತ್ರತ್ವದ ಸರ್ಕಾರ ಅನುಸರಿಸುತ್ತಿರುವ ಆಕ್ರಮಣಕಾರಿ ನವ ಉಧಾರಿಕರಣ ಆರ್ಥಿಕ ನೀತಿಗಳಿಂದಾಗಿ ದೇಶದ ಆರ್ಥಿಕ ಸ್ಥಿತಿ ಕುಸಿಯುತ್ತಿದೆ. ದೇಶದ ದುಡಿಯುವ ಜನರನ್ನು ಕಡೆಗಣಿಸಿ, ವಿದೇಶಿ ಹಾಗು ಸ್ವೇದೇಶಿ ಕಾರ್ಪೋರೇಟ್ ಬಂಡವಾಳದ ಹಿತ ಕಾಪಾಡುವ ಈ ನೀತಿಗಳ ವಿರುದ್ಧ ಸಂಘಟಿತ ಹಾಗು ಅಸಂಘಟಿತ ಕಾರ್ಮಿಕರು, ರೈತಾಪಿ ವರ್ಗ ಹಾಗು ಕೃಷಿ ಕೂಲಿಗಾರರು ವ್ಯಾಪಕವಾದ ಐಕ್ಯ ಚಳುವಳಿಗಳನ್ನು ನಡೆಸುವುದು ಅನಿವಾರ್ಯವಾಗುತ್ತಿದೆ. ದೇಶದ 99% ಶೇ ಜನರ ಪರವಾದ ಆರ್ಥಿಕ ನೀತಿಗಳ ಜಾರಿಗಾಗಿ ಬಿಡಿಬಿಡಿಯಾಗಿ ನಡೆಯುವ ಚಳುವಳಿಗಳಿಂದ ಈ ಸರ್ಕಾರದ ಮೇಲೆ ರಾಜಕೀಯ ಒತ್ತಡವನ್ನು ಹೇರಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ರೈತ ಕಾರ್ಮಿಕರ ಐಕ್ಯ ಪ್ರತಿಭಟನೆಗಳನ್ನು ರಾಷ್ಟ್ರವ್ಯಾಪಿ ನಡೆಸಲು ಸಿಐಟಿಯು ತೀರ್ಮಾನಿಸಿದೆ.

ಅಸಂಘಟಿತ, ಸಂಘಟಿತ ಹಾಗು ಯೋಜನಾ ಕಾರ್ಮಿಕರಿಗೆ ಮಾಸಿಕ ಕನಿಷ್ಟ ವೇತನವನ್ನು ರೂ. 18000/–(2016ರ ಬೆಲೆ ಸೂಚ್ಯಾಂಕದ ಆಧಾರದಲ್ಲಿ) ಬೆಲೆ ಏರಿಕೆಗೆ ತಕ್ಕಂತ ರೀತಿಯಲ್ಲಿ ತುಟ್ಟಿ ಭತ್ಯೆಯನ್ನು ಒಳಗೊಂಡು ನಿಗಧಿ ಪಡಿಸ ಬೇಕು. ಒಟ್ಟು ವ್ಯಾಪಾರ ಚಟುವಟಿಕೆಯಲ್ಲಿ ಸೃಷ್ಟಿಯಾಗುವ ಸಂಪತ್ತಲ್ಲಿ ಮಾಲೀಕರ ಲಾಭದ ಪಾಲು ಹೆಚ್ಚಾಗುತ್ತಿದ್ದು, ದುಡಿಮೆಗಾರರ ವೇತನದ ಪಾಲು ಕುಸಿಯುತ್ತಿದೆ. ಇದರಿಂದಾಗಿ ಉತ್ಪನ್ನಗಳ ಮಾರಾಟವು ಕುಸಿಯುತ್ತಿದೆ. ಉದ್ಯೋಗ ನಷ್ಟವಾಗುತ್ತದೆ. ಕನಿಷ್ಟ ವೇತನದ ಹೆಚ್ಚಳ ಹಾಗೂ ಅದರ ಸಮರ್ಪಕ ಜಾರಿಗೆ ಒತ್ತಾಯಿಸುತ್ತಿದ್ದೇವೆ.

ಬಿಜೆಪಿ ಸರ್ಕಾರ ಬಂದ ಮೇಲೆಯೇ ಭಾರೀ ಪ್ರಮಾಣ ಆರ್ಥಿಕ ಕುಸಿದಿದೆ. ಪಾರ್ಲೆ ಕಂಪನಿಯಲ್ಲಿ 10,000 ಉದ್ಯೋಗವನ್ನು ಕಳೆದುಕೊಂಡಿರುವುದು ವಿಷಾದನೀಯ ಎಂದರು.

ಖಾಯಂ ಉದ್ಯೋಗಿಗಳ ಬದಲಾಗಿ, ಯಾವುದೇ ಕಾನೂನು ರಕ್ಷಣೆ, ಕನಿಷ್ಟ ವೇತನ, ಸಾಮಾಜಿಕ ರಕ್ಷಣಾ ಯೋಜನೆಗಳ ಸವಲತ್ತುಗಳಿಲ್ಲದೆ ದುಡಿಯುವ ಗುತ್ತಿಗೆ ಹಾಗು ತರಬೇತಿ ಕಾರ್ಮಿಕರನ್ನು ನೇಮಕ ಮಾಡಲು ಅನುವಾಗುವ ಉದ್ಯೋಗ ನೀತಿಗಳಿಂದಾಗಿ ದೇಶವು ಅತಿ ತೀವ್ರವಾದ ನಿರುದ್ಯೋಗವನ್ನು ಎದುರಿಸುತ್ತದೆ. ದೇಶದ ಯುವ ಜನತೆಯ ಉದ್ಯೋಗ ಅವಕಾಶಗಳನ್ನು ಕಸಿಯುತ್ತಿರುವ ಈ ಗುಲಾಮ ಪದ್ಧತಿಯನ್ನು ರದ್ದುಗೊಳಿಸಬೇಕು. ರಾಜ್ಯ ಕೇಂದ್ರ ಸರ್ಕಾರಗಳಲ್ಲಿ ಖಾಲಿಯಾಗಿರುವ ಉದ್ಯೋಗಗಳಿಗೆ ನೇಮಕಾತಿಯನ್ನು ಮಾಡಬೇಕು. ಖಾಸಗಿ ರಂಗದಲ್ಲಿಯು ಖಾಯಂ ಉದ್ಯೋಗ ಸೃಷ್ಟಿಯನ್ನು ಖಾತರಿಗೊಳಿಸುವ ನೀತಿಗಳನ್ನು ಜಾರಿಗೆ ತರಬೇಕು.

ಈ ದೇಶದ ರಕ್ಷಣೆಗೆ, ಕೈಗಾರಿಕಾ ಅಭಿವೃದ್ಧಿಗೆ, ಸಾಮಾಜಿಕ ನ್ಯಾಯಕ್ಕೆ ಕಾರಣವಾಗಿರುವ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಕರಣ ಮಾಡುವ ದೇಶದ್ರೋಹಿ ನೀತಿಗಳನ್ನು ಕೈಬಿಡಬೇಕು. ಉತ್ಪಾದನಾ ವಲಯ, ವಿಮೆ–ಬ್ಯಾಂಕ್–ಶೀಕ್ಷಣ–ಆರೋಗ್ಯ ವಲಯಗಳಲ್ಲಿ ಸರಕಾರದ ಬಂಡವಾಳದ ಎಲ್ಲಾ ರೀತಿಯ ಹಿಂಬಡಿಕೆಯನ್ನು ಕೈಬಿಡಬೇಕು. ಸಾರ್ವಜನಿಕ ವಲಯವನ್ನು ದೃಡಗೊಳಿಸ ಬೇಕು. ಕರ್ನಾಟಕದಲ್ಲಿನ ಭದ್ರಾವತಿಯಲ್ಲಿರುವ ಶ್ರೀ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಯನ್ನು ಮುಚ್ಚುವ ತೀರ್ಮಾನವನ್ನು ಹಿಂದಕ್ಕೆ ಪಡೆದು ಕಾರ್ಖಾನೆಯನ್ನು ಉಳಿಸ ಬೇಕು. ಬಿಇಎಂಎಲ್ ಒಳಗೊಂಡ ಯಾವುದೆ ಸಾರ್ವಜನಿಕ ಉದ್ದಿಮೆಗಳ ಶೇರು ಮಾರಾಟವನ್ನು ಕೂಡಲೇ ನಿಲ್ಲಿಸ ಬೇಕು ಎಂದು ಆಗ್ರಹಿಸಿದರು.

ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದ ಸರ್ಕಾರಿ ಯೋಜನೆಗಳಲ್ಲಿ ಕೆಲಸಮಾಡುವ ಜನರನ್ನು ಭಾರತ ಕಾರ್ಮಿಕ ಸಮ್ಮೇಳದ ತೀರ್ಮಾನದಂತೆ ಕಾರ್ಮಿಕರೆಂದು ಪರಿಗಣಿಸಬೇಕು. ಕನಿಷ್ಟ ವೇತನ ಹಾಗು ಇತರೆ ಸೇವಾ ಸೌಲಭ್ಯಗಳನ್ನು ನೀಡಬೇಕು. ಮಕ್ಕಳಿಗೆ, ಗರ್ಭಿಣಿ ಬಾಣಂತಿಯರಿಗೆ ಪೌಷ್ಟಿಕ ಆಹಾರ ಒದಗಿಸುವ ಐಸಿಡಿಎಸ್ ಯೋಜನೆಯನ್ನು ಬಲಪಡಿಸ ಬೇಕು. ಸರ್ಕಾರದ ಅನುದಾನವನ್ನು ಹೆಚ್ಚು ಮಾಡಬೇಕು. ಕಾಲುವೆಗೆ ನೀರು ಬಿಡಬೇಕೆಂದು ಒತ್ತಾಯಿ 25 ದಿವಸಗಳಿಂದ ಹೋರಾಟವನ್ನು ತಾಂದಾಬದಲ್ಲಿ ರೈತರು ನಡೆಸುತ್ತಿದ್ದಾರೆ. ಇಂಡಿ ಗುತ್ತಿ ಬಸವಣ್ಣ ಕಾಲುವೆಗೆ ತಕ್ಷಣ ನೀರು ಬಿಡಬೇಕು ಎಂದು ಒತ್ತಾಯಿಸಿದರು. ನೆರೆ ಸಂತ್ರಸ್ಥರ ಮನೆ, ಹೊಲ, ಗದ್ದೆ, ಬದುಕನ್ನು ಕಟ್ಟಿ ಕೊಡಲು ಕೇಂದ್ರ, ರಾಜ್ಯ ಸರ್ಕಾರಗಳು ಕೂಡಲೇ ಮುಂದಾಗಬೇಕು: ಭೀಕರ ನೆರೆ, ರಾಜ್ಯದ ಬಹು ಭಾಗದ ರೈತರು, ಕೂಲಿಕಾರರು ಇತರರ ಬದುಕನ್ನು ಧ್ವಂಸ ಮಾಡಿದೆ. ಅಪಾರ ಆಸ್ತಿ ಪಾಸ್ತಿಗಳು, ಪ್ರಾಣ ಹಾನಿಯು ಉಂಟಾಗಿದೆ. ತಮ್ಮ ಮನೆ, ಹೊಲ, ಗದ್ದೆಗಳು ಜೊತೆಗೆ ಇಡೀ ಬದುಕು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ. ಇಂತಹ ಗಂಭೀರ ನೆರೆಯ ಬಗ್ಗೆ ಕೇಂದ್ರ ಸರ್ಕಾರ ನಿರ್ಲಕ್ಷ ತೋರಿಸುತ್ತಿದೆ. ಇನ್ನೂ ರಾಜ್ಯದಲ್ಲಿ 'ಸರ್ಕಾರ'ವೇ ಇಲ್ಲ ಎನ್ನುವ ಸ್ಥಿತಿಯು ಸಂತ್ರಸ್ಥರ ಬದುಕನ್ನು ಮತ್ತಷ್ಟು ಶೋಚನೀಯವನ್ನಾಗಿಸಿದೆ. "ರಾಷ್ಟ್ರೀಯ ವಿಪತ್ತು" ಎಂದು ಘೋಷಿಸಿ, ಕೂಡಲೇ ಪ್ರಧಾನಮಂತ್ರಿಗಳು ರಾಜ್ಯಕ್ಕೆ ಭೇಟಿ ನೀಡಬೇಕು. ಮೊದಲ ಕಂತಾಗಿ ಕನಿಷ್ಠ 10,000 ಕೋಟಿ ರೂ. ಬಿಡುಗಡೆ ಮಾಡಬೇಕು. ರಾಜ್ಯದಲ್ಲಿ ಪೂರ್ಣ ಪ್ರಮಾಣದ ಸರ್ಕಾರ ರಚನೆಯಾಗಬೇಕು. ಪ್ರಾಣವನ್ನು ಕಳೆದು ಕೊಂಡ ಕುಟುಂಬಗಳಿಗೆ ಪರಿಹಾರ, ಸತ್ತ ಜಾನುವಾರಗಳಿಗೆ ಪರಿಹಾರ, ಮನೆ ನಿರ್ಮಾಣ, ಹೊಲ, ಗದ್ದೆಗಳನ್ನು ಮೊದಲಿನ ಸ್ಥಿತಿಗೆ ತರಲು ಹಣಕಾಸಿನ ಪೂರ್ಣ ಸಹಾಯ. ಬೆಳೆ ವಿಮೆ, ಬೆಳೆ ನಷ್ಟ ಪರಿಹಾರ, ಸಾಲ ಮನ್ನಾ ಇತ್ಯಾದಿ ಪರಿಹಾರ ಕಾರ್ಯಕ್ರಮಗಳ ಜೊತೆಗೆ ಮುಂದೆ ಇಂತಹ ಸಂದರ್ಭಗಳನ್ನು ಎದುರಿಸಲು ಅಗತ್ಯವಿರುವ ದೀರ್ಘವಾದ ಯೋಜನೆಗಳನ್ನು ರೂಪಿಸಬೇಕೆಂದು ನಾವು ಒತ್ತಾಯಿಸುತ್ತೇವೆ. ಪ್ರಾಣ ಹಾನಿ ಇತ್ಯಾದಿ ಸಂತ್ರಸ್ಥ ಫಲಾನಿಭವಿಗಳನ್ನು ಪತ್ತೆ ಮಾಡುವುದು ಹಾಗು 'ಪರಿಹಾರ'ಗಳನ್ನು ವಿತರಣೆ ಮಾಡುವ ಕೆಲಸವನ್ನು ಸಮರ್ಥವಾಗಿ ಮಾಡಲು "ತಳ ಮಟ್ಟದಲ್ಲಿ ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳ ಉಸ್ತುವಾರಿ ಸಮಿತಿ"ಗಳನ್ನು ರಚಿಸಬೇಕೆಂದು ಆಗ್ರಹಿಸುತ್ತೇವೆ.

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ ಮಾತನಾಡಿ, 2022 ಕ್ಕೆ ದೇಶದ 'ಸ್ವಾತಂತ್ರ್ಯ'ಕ್ಕೆ 75 ವರ್ಷಗಳು ತುಂಬುವ ಸಂದರ್ಭಕ್ಕೆ 'ರೈತರ ಆದಾಯ ದ್ವಿಗುಣ'ಗೊಳಿಸುವ ಘೋಷಣೆಯನ್ನು ನೀಡಿರುವ ಕೇಂದ್ರ ಸರ್ಕಾರ, ವಿಪರೀತ ದುಬಾರಿಯಾದ ಬೀಜ, ಗೊಬ್ಬರ, ಡಿಸೇಲ್ ಇತ್ಯಾದಿ ಕೃಷಿ ಲಾಗುವಾಡಿಗಳ ದರಗಳನ್ನು ಕಡಿತ ಮಾಡುವ ಯಾವುದೇ ಸೂಚನೆಗಳಿಲ್ಲ 'ಉತ್ಪಾದನೆ ಮತ್ತು ಉತ್ಪಾದಕತೆ'ಯನ್ನು ಹೆಚ್ಚಿಸಲು ನಿರ್ಧಿಷ್ಟ ಕಾರ್ಯಕ್ರಮಗಳನ್ನು ನೀಡುತ್ತಿಲ್ಲ. ಇನ್ನೂ ಮುಖ್ಯವಾಗಿ ಉತ್ಪಾದನಾ ವೆಚ್ಚದ ಮೇಲೆ ಶೇ. 50 ರಷ್ಟು ಲಾಭವನ್ನು ಸೇರಿಸಿ, ಎಲ್ಲಾ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡಬೇಕೆನ್ನುವ ಡಾ॥ ಎಂ.ಎಸ್. ಸ್ವಾಮಿನಾಥನ್ ವರದಿಯನ್ವಯ ಕಾಯ್ದೆಗೆ ಸುತಾರಾಂ ಸಿದ್ಧವಿಲ್ಲ. ಆದರೂ ರೈತರ ಆದಾಯವನ್ನು ದ್ವಿಗುಣಗೊಳಿಸುವ ಘೋಷಣೆಯ ಮೂಲಕ ರೈತರನ್ನು ಮತ್ತೆ ಮೋಸ ಮಾಡಲು ಹೊರಟಿದೆ. ಈ ಹಿನ್ನೆಲೆಯಲ್ಲಿ "ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಖಾತರಿ ಮಾಡುವ ಕಾನೂನ"ನ್ನು ರೂಪಿಸಲೇಬೇಕೆಂದು ಒತ್ತಾಯವನ್ನು ತರಬೇಕಿದೆ. ರಾಜ್ಯದಲ್ಲಿ ಶೇ. 85 ಕ್ಕಿಂತ ಹೆಚ್ಚಿನ ರೈತರು, ಸಣ್ಣ, ಅತಿ ಸಣ್ಣ ರೈತರು ಮತ್ತು ಒಂದು ಕೋಟಿಯಷ್ಟಿರುವ ಕೃಷಿ ಕೂಲಿಕಾರರಿಗೆ ಬಹುತೇಕ ಬ್ಯಾಂಕ್ ಸಾಲಗಳು ಸಿಗುತ್ತಿಲ್ಲ ಇವರೆಲ್ಲ ಖಾಸಗಿ ಸಾಲದ ಮೇಲೆ ಅವಲಂಬನೆಯಾಗಿರುವ ಸನ್ನಿವೇಶವಿದೆ.

ಈ ಹಿನ್ನೆಲೆಯಲ್ಲಿ ಎಲ್ಲಾ ಕೃಷಿ ಕೂಲಿಕಾರರು ಮತ್ತು ರೈತರಿಗೆ ಅಗತ್ಯವಿರುವಷ್ಟು ಬ್ಯಾಂಕ್ ಸಾಲ ನೀಡಿಕೆ, ವಿಶೇಷ ಸಂದರ್ಭಗಳಲ್ಲಿ ಬಡ್ಡಿ ಮನ್ನಾ, ಸಾಲ ಮನ್ನಾ ಮಾಡುವ ಶಾಶ್ವತ ವ್ಯವಸ್ಥೆಯಾಗಿ 'ಋಣ ಮುಕ್ತ ಕಾಯ್ದೆ' ಯನ್ನು ಜಾರಿ ಮಾಡಬೇಕು. ಒಂದು ಬಾರಿ ಪರಿಹಾರವಾಗಿ "ಎಲ್ಲಾ ಕೃಷಿ ಕೂಲಿಕಾರರು ಮತ್ತು ರೈತರ ಸಂಪೂರ್ಣ ಸಾಲ ಮನ್ನಾ" ಮಾಡಬೇಕೆಂದು ಆಗ್ರಹಿಸುತ್ತದೆ.

ಹಿಂದೆಂದೂ ಕಂಡರಿಯದ ಪ್ರವಾಹ ರಾಜ್ಯದ ಸುಮಾರು 100 ತಾಲ್ಲೂಕಗಳಲ್ಲಿ ಜನರ ಬದುಕನ್ನು ಧ್ವಂಸ ಮಾಡಿದೆ. ಇನ್ನುಳಿದ ಸುಮಾರು 40 ತಾಲ್ಲೂಕಗಳಲ್ಲಿ 'ಬರಗಾಲ'ದ ಛಾಯೆ ಗಟ್ಟಿಯಾಗಿದೆ.

ಪುಟ 11 ಕ್ಕೆ





ರೈತ – ಕಾರ್ಮಿಕರ ಜಂಟಿ ಪ್ರತಿಭಟನೆ....

ಪುಟ 10 ರಿಂದ

ಪ್ರವಾಹದಿಂದ ಕೊಚ್ಚಿಕೊಂಡು ಹೋಗಿರುವ ಮನೆ, ಹೊಲ, ಗದ್ದೆ ಇತ್ಯಾದಿಗಳನ್ನು ಪುನರ್ ನಿರ್ಮಾಣ ಮಾಡಲು ಹಾಗು ಬರ ಪರಿಹಾರ ಕಾರ್ಯಕ್ರಮಗಳನ್ನು ರೂಪಿಸುವ ಹಿನ್ನೆಲೆಯಲ್ಲಿ 'ಉದ್ಯೋಗ ಖಾತರಿ ಯೋಜನೆ'ಗೆ ಇರುವ ಕೆಲಸದ ದಿನಗಳ ಮಿತಿಯನ್ನು ತೆಗೆದು ಹಾಕಿ, ಕೂಲಿಯನ್ನು 600–00 ರೂ. ಗಳಿಗೆ ಏರಿಸಬೇಕು ಹಾಗೂ ಇದಕ್ಕೆ ವಿಶೇಷವಾಗಿ ಹೆಚ್ಚಿನ ಅನುದಾನವನ್ನು ನೀಡಿ ವ್ಯಾಪಕವಾಗಿ ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಾಯಬಣ್ಣ ಹಂದಿಗನೂರ, ಸಿದ್ರಾಮ ಬಂಗಾರಿ, ಸುರೇಖಾ ರಜಪೂತ, ಭಾರತಿ ವಾಲಿ, ಅಶ್ವಿನಿ ತಳವಾರ, ಸುನಂದಾ ನಾಯಕ ಸೇರಿದಂತೆ ಇತರರು ಉಪಸ್ಥಿತರಿದ್ದರು.

– ಲಕ್ಷ್ಮಣ ಹಂದ್ರಾಳ

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಸಿಐಟಿಯು ಜಿಲ್ಲಾ ಸಮಿತಿ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷರಾದ ಭಾರತಿ ವಾಲಿ ಮಾತನಾಡಿ, ಸೆಪ್ಟೆಂಬರ್ 5, 2019ರಂದು, ಅಂದರೆ ಈ ವರ್ಷದ ಶಿಕ್ಷಕರ ದಿನದಂದು, ಅಂಗನವಾಡಿ ಕಾರ್ಮಿಕರು ಮತ್ತು ಸಹಾಯಕರಾದ ನಾವು, ಬೀದಿಗೆ ಬಂದು ಮತ್ತು ಧರಣಿ ಹೂಡಿ ಸರಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಿದ್ದೇವೆ. ಮಕ್ಕಳನ್ನು ಅವರ ಒಟ್ಟಾರೆ ಬೆಳವಣಿಗೆಗೆ ಹಾನಿಕಾರಕವಾಗಿರುವ ಅವೈಜ್ಞಾನಿಕ ಶಾಲಾ–ಪೂರ್ವ ಶಾಲೆಗಳಿಂದ ರಕಿಸಲು ಮತ್ತು ಶಾಲಾ–ಪೂರ್ವ ಶಿಕ್ಷಣದಲ್ಲಿ ಅಂಗನವಾಡಿ ಮಾದರಿಯ ಪಾತ್ರವನ್ನು ಮಾನ್ಯ ಮಾಡಲು ಈ ಮನವಿ ಮೂಲಕ ಒತ್ತಡ ಹಾಕಲಿದ್ದೇವೆ. ಮಕ್ಕಳ ಒಟ್ಟು ಮೆದುಳಿನ ಬೆಳವಣಿಗೆಯ ಶೇ.85ರಷ್ಟು 6 ವರ್ಷಕ್ಕಿಂತ ಮೊದಲೇ ಆಗುತ್ತದೆ ಎಂದು ನರವಿಜ್ಞಾನ ಹೇಳುತ್ತದೆ. ಆದ್ದರಿಂದ ಶೈಶವದಲ್ಲಿ (6 ವರ್ಷಗಳೊಳಗಿನ ಮಕ್ಕಳು) ಸಮರ್ಪಕವಾದ ಆರೈಕೆ, ಪೋಷಣೆ ಮತ್ತು ಶಿಕ್ಷಣ ಕೊಡುವುದು ಮಗುವಿನ ಬೆಳವಣಿಗೆಯ ದೃಷ್ಟಿಯಿಂದ ನಿರ್ಣಾಯಕವಾಗಿರುತ್ತದೆ. ಅತ್ಯುತ್ತಮ ಆರೈಕೆ, ಪೋಷಣೆ, ಆರೋಗ್ಯ ಮತ್ತು ಪೋಷಕ ಆಹಾರ; ದೈಹಿಕ ಚಟುವಟಿಕೆ; ಮನೋ ಸಾಮಾಜಿಕ ಪರಿಸರ; ಹಾಗೂ ಗ್ರಹಿಕೆ ಮತ್ತು ಭಾವನೆಗಳ ಉದ್ದೀಪನೆ – ಇವೆಲ್ಲ ಶೈಶವ ಆರೈಕೆ ಮತ್ತು ಶಿಕ್ಷಣದಲ್ಲಿ (Early Childhood Care And Education) ಸೇರಿರಬೇಕು ಎಂದು ವೈಜ್ಞಾನಿಕ ಅಧ್ಯಯನಗಳು ಸಿದ್ಧ ಪಡಿಸಿವೆ. ಮಗುವಿನ ಮೊದಲ 6 ವರ್ಷಗಳಲ್ಲಿ ದೊರೆಯುವ ಇಂತಹ ಶೈಶವ ಆರೈಕೆ ಮತ್ತು ಶಿಕ್ಷಣವು, ಮಗುವಿನ ಅಗತ್ಯ ಮೆದುಳಿನ ಬೆಳವಣಿಗೆ ಮತ್ತು ಜೀವನ ಪೂರ್ತಿ ಕಲಿಕೆಯ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ. ಈಗಿರುವ ಶಾಲಾ–ಪೂರ್ವ ಶಿಕ್ಷಣದ ಕುರಿತು ಅಧ್ಯಯನಗಳು – ಬರಿಯ ಸಾಂಪ್ರದಾಯಿಕ ಕಲಿಸುವಿಕೆ, ಬಾಯಿಪಾಠ ಹಾಗೂ ಬೆಳವಣಿಗೆಗೆ ಸಮಂಜಸವಾದ ಯಾವುದೇ ಸಮರ್ಪಕವಾದ ಆಟದ ಮೂಲಕ ಕಲಿಕೆಯಿಲ್ಲದ, ತರಬೇತಿ ಹೊಂದದ ಶಿಕ್ಷಕರಿರುವ – ಪ್ರಾಥಮಿಕ ಶಿಕ್ಷಣದ ವಿಧಾನವನ್ನು ಕೆಳಮಟ್ಟಕ್ಕೆ ವಿಸ್ತರಿಸಲಾಗಿದೆಯಷ್ಟೇ, ಎಂದು ಎತ್ತಿ ತೋರಿಸಿವೆ ಎಂದರು.

ಜಿಲ್ಲಾಧ್ಯಕ್ಷರಾದ ಸುನಂದಾ ನಾಯಕ ಮಾತನಾಡಿ, ಐ.ಸಿ.ಡಿ.ಎಸ್. ರಕ್ಷಿಸುವ ಹೋರಾಟಕ್ಕೆ ಕೈಜೋಡಿಸಿ ! , ಸಾರ್ವಜನಿಕ ಶಿಕ್ಷಣ ರಕ್ಷಿಸಿ ! , ಶಾಲಾ–ಪೂರ್ವ ಶಿಕ್ಷಣದ ಕುರಿತು ವೈಜ್ಞಾನಿಕ ಧೋರಣೆಗಾಗಿ ! , ಕಾರ್ಮಿಕರಾಗಿ ನಮ್ಮ ಹಕ್ಕುಗಳಿಗಾಗಿ! , ಭಾರತದ ಉತ್ತಮ ಭವಿಷ್ಯಕ್ಕಾಗಿ ! , ಸೆಪ್ಟೆಂಬರ್ 3, 4 ಮತ್ತು 5 ರಂದು ದೇಶದಾದ್ಯಂತ ಎಲ್ಲಾ ಸ್ಕೀಂ (ಅಂಗನವಾಡಿ, ಬಿಸಿಯೂಟ ಮತ್ತು ಆಶಾ) ಕಾರ್ಮಿಕರು ತಮ್ಮ ಪ್ರತಿಭಟನೆಯನ್ನು ದಾಖಲಿಸಲಿದ್ದಾರೆ ಎಂದರು.

ಅಂಗನವಾಡಿ ಕೇಂದ್ರಗಳಲ್ಲಿ ತಕ್ಕುದಾದ ಮೂಲಸೌಕರ್ಯ ಮತ್ತು ಬೆಂಬಲವಿದ್ದರೆ, ಅವು ಶೈಶವ ಆರೈಕೆ ಮತ್ತು ಶಿಕ್ಷಣ ನೀಡಲು ಅತ್ಯುತ್ತಮ ಮಾದರಿಯಾಗಿದೆ. ಪೋಷಕ ಆಹಾರ ಮತ್ತು ಆರೋಗ್ಯ ಸೇವೆ, ಜೊತೆಗೆ ಆಟದ ಚಟುವಟಿಕೆಗಳ ಮೇಲೆ ಆಧಾರಿತ ಕಲಿಕೆ, ಸ್ಥಳೀಯ ಪರಿಸರದೊಂದಿಗೆ ಸಕ್ರಿಯ ಸ್ಪಂದನ – ಇವುಗಳೆಲ್ಲವು ಸೇರಿದ ಸರ್ವಾಂಗೀಣ ವಿಧಾನವು ಈ ಮಾದರಿಯಲ್ಲಿದೆ, ಎಂದು ಅಧ್ಯಯನಗಳು ಗಮನಿಸಿವೆ. ಅಂಗನವಾಡಿ ಕಾರ್ಮಿಕರು ಮತ್ತು ಸಹಾಯಕರ ಅಖಿಲ ಭಾರತ ಫೆಡರೇಶನ್ **(AIFAWH)** 3ರಿಂದ 6 ವರ್ಷದ ವರೆಗಿನ ಮಕ್ಕಳಿಗೆ ಶಿಕ್ಷಣ ಹಕ್ಕನ್ನು ವಿಸ್ತರಿಸಬೇಕು ಮತ್ತು ಅಂಗನವಾಡಿಗಳೂ ಅದಕ್ಕೆ ನೋಡಲ್ ಕೇಂದ್ರಗಳಾಗಿರಬೇಕೆಂದು ಒತ್ತಾಯಿಸುತ್ತಾ ಬಂದಿದೆ. ಐ.ಸಿ.ಡಿ.ಎಸ್. (ಸಮಗ್ರ ಮಕ್ಕಳ ಬೆಳವಣಿಗೆ ಯೋಜನೆ) ನ ಶಾಲಾ–ಪೂರ್ವ ಭಾಗವನ್ನುತಿ ಉತ್ತಮ ಪಡಿಸಲು, ಹಣಕಾಸಿನ ಸಹಾಯ ಮತ್ತು ತರಬೇತಿ ಬಹಳ ಕನಿಷ್ಠ ಪ್ರಮಾಣದಲ್ಲಿ ಒದಗಿಸಿದರೂ, ಇತ್ತೀಚೆಗೆ ಮಕ್ಕಳ ಮತ್ತು ಮಹಿಳಾ ಕಲ್ಯಾಣ ಇಲಾಖೆ ಕೆಲವು ಕ್ರಮಗಳನ್ನು ಕೈಗೊಂಡಿದೆ. ಹಲವು ರಾಜ್ಯಗಳಲ್ಲಿ, ರಾಜ್ಯದ ಶಿಕ್ಷಣ ಇಲಾಖೆಗಳ ಪ್ರವರ್ತಕ ಪಾತ್ರದೊಂದಿಗೆ, ಪ್ರಾಥಮಿಕ ಶಾಲೆಗಳಲ್ಲಿ (ಅದರಲ್ಲೂ ಸರಕಾರಿ ಶಾಲೆಗಳಲ್ಲಿ) ಶಾಲಾ–ಪೂರ್ವ ಶಿಕ್ಷಣವನ್ನು, ಅದರ ಅಗತ್ಯಗಳ ಅಧ್ಯಯನ ಮಾಡದೆ, ಮೂಲ ಸೌಕರ್ಯಗಳು ಇಲ್ಲದೆ, ತರಬೇತಿ ಪಡೆದ ಸಿಬ್ಬಂದಿ ಮತ್ತು ಯಾವುದೇ ವೈಜ್ಞಾನಿಕ ಉಪಕ್ರಮವಿಲ್ಲದೆ, ಆರಂಭಿಸಲಾಗುತ್ತಿದೆ. ಪಂಜಾಬ್, ಕರ್ನಾಟಕ ಮುಂತಾದ ರಾಜ್ಯಗಳಲಿ, ಅಂಗನವಾಡಿಗಳಿಂದ ಮಕ್ಕಳನ್ನು ಶಾಲೆಗಳಲ್ಲಿ ಆರಂಭಿಸಲಾದ ಶಾಲಾ–ಪೂರ್ವ/ ಎಲ್.ಕೆ.ಜಿ./ಯುಕೆ.ಜಿ. ತರಗತಿಗಳಿಗೆ ಕಳಿಸಬೇಕೆಂದು ಶಿಕ್ಷಣ ಇಲಾಖೆಗಳು ಆದೇಶಿಸಿವೆ. ಹಲವು ರಾಜ್ಯಗಳಲ್ಲಿ ಈ ಸಮಸ್ಯೆ ಎದುರಾಗಿದೆ. ದುರದೃಷ್ಟವಶಾತ್, ಸಾರ್ವಜನಿಕ ಶಿಕ್ಷಣವನ್ನು ರಕ್ಷಿಸಲು ಹೋರಾಡುತ್ತಿರುವವರನ್ನೂ ಈ ವಿಷಯದಲ್ಲಿ ದಾರಿ ತಪ್ಪಿಸಲಾಗಿದೆ. ಪೋಷಕಾಂಶಗಳ ಪಾತ್ರವನ್ನು ಮನೆ–ರೇಶನು ಮತ್ತು ನೇರ ನಗದು ಪಾವತಿಗಳಿಗೆ, ಆರೋಗ್ಯ ಸೇವಾ ಪಾತ್ರವನ್ನು ಆಶಾ ಕಾರ್ಮಿಕರಿಗೆ ಕೊಡುವ ಈ ಕ್ರಮಗಳು, ಐ.ಸಿ.ಡಿ.ಎಸ್ ಕಾರ್ಯಕ್ರಮದ ಮರಣ ಶಾಸನದಂತಿದೆ. ಇಂತಹ ಅವೈಜ್ಞಾನಿಕ ಶಾಲೆಗಳನ್ನು ತೆರೆಯುವ ಬಗ್ಗೆ ಯಾವುದೇ ನಿಬಂಧನೆಗಳು ಎಲ್ಲೂ ಕಾಣಿಸುತ್ತಿಲ್ಲ. ಇವಲ್ಲದೆ, ಇತ್ತೀಚೆಗೆ ಪ್ರಕಟಿಸಲಾಗಿರುವ ಕರಡು ಶಿಕ್ಷಣ ನೀತಿ ಸಹ ಐ.ಸಿ.ಡಿ.ಎಸ್. ಗೆ ಮಾರಕವಾದ ಹಲವು ಕ್ರಮಗಳನ್ನು ಒಳಗೊಂಡಿದೆ. ಶಿಕ್ಷಣದ ವ್ಯಾಪಾರೀಕರಣದ ಮೇಲೆ ಈ ನೀತಿ ಒತ್ತು ಕೊಡುತ್ತಿದೆ. 3ರಿಂದ 8 ವರ್ಷಗಳ ವರೆಗಿನ ಮಕ್ಕಳನ್ನು ಶಾಲಾ ಶಿಕ್ಷಣದ ಒಂದು ಘಟ್ಟ ಎಂದು ಪರಿಗಣಿಸಲಾಗಿದೆ. ಶಾಲೆಗಳಲ್ಲಿನ ಶಾಲಾ–ಪೂರ್ವ ಶಿಕ್ಷಣವಲ್ಲದೆ, 'ಪ್ರತ್ಯೇಕವಾದ' (ಇವು 'ಪ್ರತಿಷ್ಠಿತ' ಪ್ರಿ–ಸ್ಕೂಲುಗಳಲ್ಲದೆ ಬೇರೆನಲ್ಲ) ಶಾಲಾ–ಪೂರ್ವ ಶಾಲೆಗಳ ಬಗೆಗೂ ಹೇಳಿದೆ. ಶಾಲಾ–ಪೂರ್ವ ಶಿಕ್ಷಣೋದ್ಯಮದಲ್ಲಿ 20 ಸಾವಿರ ಕೋಟಿ ರೂ. ಗಳ 'ವ್ಯವಹಾರ' ನಡೆಯುವಂತೆ ಉತ್ತೇಜಿಸುವುದು ಈ ನೀತಿಯ ಉದ್ದೇಶ ಎನ್ನಲಾಗಿದೆ. ಇಂತಹ ಶಾಲೆಗಳಲ್ಲಿ 'ಬೋಧನಾ ಸಹಾಯಕರು', 'ಸ್ವಯಂಸೇವಕರು', 'ಸಲಹೆಗಾರರು' ಮತ್ತು 'ಸಾಮಾಜಿಕ ಕಾರ್ಯಕರ್ತರು' – ಇವರುಗಳನ್ನು ನೇಮಿಸಬೇಕು ಎಂದು ಹೇಳುವ ಈ ನೀತಿ, ಶಾಶ್ವತ ಉದ್ಯೋಗಿಗಳ ಬದಲಿಗೆ ಇನ್ನೊಂದು ವಿಧದ ಸ್ಕೀಂ ಕಾರ್ಮಿಕರನ್ನು ನೇಮಿಸುವ ಉದ್ದೇಶವನ್ನು ಹೊಂದಿದೆ. ಇದನ್ನು ವಿರೋಧಿಸಬೇಕಾಗಿದೆ. ಗಾತ್ರದಲ್ಲಿ 'ಕಾರ್ಯಸಾಧ್ಯ'ವಾದ 'ಸಮೂಹ' ಅಥವಾ 'ಶಾಲಾ ಸಂಕೀರ್ಣ'ಗಳ ಪರಿಕಲ್ಪನೆ ಸಹ ಈ ನೀತಿಯಲ್ಲಿದೆ. ಹಲವು ರಾಜ್ಯಗಳಲ್ಲಿ ಈಗಾಗಲೇ 'ಸಮೂಹ' ಅಥವಾ 'ಶಾಲಾ ಸಂಕೀರ್ಣ'ಗಳ ಹೆಸರಿನಲ್ಲಿ, ಐದು ಅಂಗನವಾಡಿ ಕೇಂದ್ರಗಳು ಒಂದೇ ಕೋಣೆಯಲ್ಲಿ ಕೆಲಸ ಮಾಡುತ್ತಿವೆ! ಇಂತಹ ಕ್ರಮಗಳನ್ನು ನಾವು ವಿರೋಧಿಸುತ್ತೇವೆ.

ಅಶ್ವಿನಿ ತಳವಾರ ಮಾತನಾಡಿ, ಸರಕಾರದ ಶೈಶವ ಆರೈಕೆ ಮತ್ತು ಶಿಕ್ಷಣ ನೀತಿಯ ಪ್ರಕಾರ ಶಾಲಾ–ಪೂರ್ವ ಶಿಕ್ಷಣವನ್ನು ಅಂಗನವಾಡಿ/ ಅಂಗನವಾಡಿ ಮಾದರಿಯಲ್ಲೇ ನೀಡಬೇಕೆಂದು ನಾವು ಒತ್ತಾಯಿಸುತ್ತೇವೆ. ಎಲ್ಲಾ ಅಂಗನವಾಡಿಗಳು ಸಮರ್ಪಕ ಕುಡಿಯುವ ನೀರು ಮತ್ತು ನೈರ್ಮಲ್ಯವಿರುವ ಅಗತ್ಯ ಮೂಲಸೌಕರ್ಯ, ಅಗತ್ಯ ಕಲಿಕೆಯ ಸಾಮಗ್ರಿಗಳು, ಉತ್ತಮ ಗುಣಮಟ್ಟದ ಆಹಾರ ಮತ್ತು ಸರಿಯಾದ ಆರೋಗ್ಯ ಸೇವೆಗಳನ್ನು ಹೊಂದಿರಬೇಕು. ಅಂಗನವಾಡಿ ಕಾರ್ಮಿಕರಿಗೆ ಅಗತ್ಯ ತರಬೇತಿಯನ್ನು ನೀಡಬೇಕು. ಆರುವರ್ಷದ ಕೆಳಗಿನ ಎಲ್ಲಾ ಮಕ್ಕಳಿಗೆ ಉತ್ತಮ ಗುಣಮಟ್ಟದ ಶೈಶವ ಆರೈಕೆ ಮತ್ತು ಶಿಕ್ಷಣವನ್ನು ನೀಡುವ ಕ್ರೆಶ್ ಮತ್ತು ಅಂಗನವಾಡಿ ಎರಡೂ ಆಗಿರುವಂತೆ ಇಂದಿನ ಅಂಗನವಾಡಿಗಳನ್ನು ಅಭಿವೃದ್ಧಿಪಡಿಸಬೇಕು ಎಂಬುದು ನಮ್ಮ ಒತ್ತಾಯ. ಇದಕ್ಕೆ ಬೇಕಾದ ಹೆಚ್ಚುವರಿ ಕ್ರೆಶ್ ಕಾರ್ಮಿಕರು/ಸಹಾಯಕರನ್ನು ನೇಮಿಸಿಕೊಳ್ಳಬೇಕು. ಹೀಗೆ ಅಂಗನವಾಡಿಗಳನ್ನು ಸಮಗ್ರ ಮಕ್ಕಳ ಬೆಳವಣಿಗೆಯ ಕೇಂದ್ರಗಳಾಗಿ ಅಭಿವೃದ್ಧಿಪಡಿಸಬೇಕೆಂಬ ನಮ್ಮ ದೀರ್ಘಕಾಲದ ಒತ್ತಾಯ ಸಾಕಾರವಾದಂತಾಗುತ್ತದೆ.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಭೀಮಶಿ ಕಲಾದಗಿ ಮಾತನಾಡಿ, ಮೋದಿ–2 ಸರಕಾರವು ಐ.ಸಿ.ಡಿ.ಎಸ್. ಹಾಗೂ ಅಂಗನವಾಡಿ ಕಾರ್ಮಿಕರು ಮತ್ತು ಸಹಾಯಕರನ್ನು ನಿರ್ಲಕ್ಷಿಸುತ್ತಿದ್ದು, ಸೆಪ್ಟೆಂಬರ್ 2018ರಲ್ಲಿ ಘೋಷಿಸಲಾದ ಹೆಚ್ಚುವರಿ ವೇತನವನ್ನು ಕೊಡಲಾಗದಷ್ಟು ಮಟ್ಟಿಗೆ ಬಜೆಟ್ ಅನುದಾನ ಕಡಿತ ಮಾಡಿದೆ. ಅಂಗನವಾಡಿ ಕಾರ್ಮಿಕರನ್ನು ಉದ್ಯೋಗಿಗಳು ಎಂದು ಮಾನ್ಯ ಮಾಡಬೇಕು; ಅವರಿಗೆ ಕನಿಷ್ಠ ವೇತನ, ಪೆನ್ಶನ್ ಮತ್ತು ಸಾಮಾಜಿಕ ಭದ್ರತೆಯ ಸವಲತ್ತುಗಳನ್ನು ಒದಗಿಸಬೇಕು; – ಎಂಬ 45ನೇ ಇಂಡಿಯನ್ ಲೇಬರ್ ಕಾನ್ಫರೆನ್ಸ್ (ಐ.ಎಲ್.ಸಿ.) ಶಿಫಾರಸುಗಳ ಬಗ್ಗೆ ಮೋದಿ–2 ಸರಕಾರ ಕುರಿತು ಮಾತೇ ಆಡುತ್ತಿಲ್ಲ.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ ಮಾತನಾಡಿ, ಅಂಗನವಾಡಿ, ಬಿಸಿಯೂಟ ಮತ್ತು ಆಶಾ ಕಾರ್ಮಿಕರ (ಅನುಕ್ರಮವಾಗಿ) ಅಖಿಲ ಭಾರತ ಸಂಘಟನೆಗಳಾದ, AIFAWH, MDMWFI ಮತ್ತು AICCAW, ಎರಡು ಸಾರ್ವತ್ರಿಕ ಮುಷ್ಕರಗಳು (2017 ಮತ್ತು 2018ರಲ್ಲಿ) ಸೇರಿದಂತೆ ಕಳೆದ ಕೆಲವು ವರ್ಷಗಳಿಂದ ಹಲವು ಜಂಟಿ ಹೋರಾಟಗಳನ್ನು ಸಂಘಟಿಸುತ್ತಾ ಬಂದಿವೆ. 45 ನೇ ಐ.ಎಲ್.ಸಿ.ಯ ಶಿಫಾರಸುಗಳನ್ನು ಜಾರಿ ಮಾಡುವುದು ಮತ್ತು ಐ.ಸಿ.ಡಿ.ಎಸ್., ಬಿಸಿಯೂಟ ಮತ್ತು ಆರೋಗ್ಯ ಸೇವಾ ಕ್ಷೇತ್ರದ ಖಾಸಗೀಕರಣವನ್ನು ನಿಲ್ಲಿಸುವ ನಮ್ಮ ಹಕ್ಕೊತ್ತಾಯಗಳ ಈಡೇರಿಕೆಗಾಗಿ, ನಾವು ಮೂರು ಸಂಘಟನೆಗಳು ಜಂಟಿಯಾಗಿ 3 ದಿನಗಳ ಸತತ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಹಾಗಾಗಿ ಸೆಪ್ಟೆಂಬರ್ 3, 4 ಮತ್ತು 5 ರಂದು ದೇಶದಾದ್ಯಂತ ಅಂಗನವಾಡಿ, ಬಿಸಿಯೂಟ ಮತ್ತು ಆಶಾ ಕಾರ್ಮಿಕರು ಸರಕಾರದ ನೀತಿಗಳ ವಿರುದ್ಧ ತಮ್ಮ ಪ್ರತಿಭಟನೆಯನ್ನು ದಾಖಲಿಸಲಿದ್ದಾರೆ.

ಅಂಗನವಾಡಿ ಫೆಡರೇಶನ್ (AIFAWH) ದೇಶದ ಎಲ್ಲಾ ಅಂಗನವಾಡಿ ಕಾರ್ಮಿಕರು ಮತ್ತು ಸಹಾಯಕರು ಬೀದಿಗೆ ಬಂದು ಐ.ಸಿ.ಡಿ.ಎಸ್. ರಕ್ಷಿಸಲು ಮತ್ತು ಸರಕಾರದ ನೀತಿಗಳ ಬಗ್ಗೆ ಪ್ರತಿಭಟಿಸಲು ಬೀದಿಗಿಳಿಯಬೇಕೆಂದು ಕರೆ ಕೊಡುತ್ತದೆ.

ಜನವಾದಿ ಮಹಿಳಾ ಸಂಘದ ರಾಜ್ಯ ಉಪಾಧ್ಯಕ್ಷ ಸುರೇಖಾ ರಜಪೂತ ಮಾತನಾಡಿದರು.

ಈ ಸಂದರ್ಭದಲ್ಲಿ ಸರಸ್ವತಿ ಮಠ, ಅಶ್ವಿನಿ ತಳವಾರ, ಸುವರ್ಣಾ ಹಲಗಣಿ, ದಾನಮ್ಮ ಗುಗ್ಗರೆ, ಪ್ರತಿಭಾ ಕುರಡೆ, ಶೋಭಾ ಕರಾಡೆ, ಜಯಶ್ರೀ ಪೂಜಾರಿ, ಉಷಾ ಕುಲಕರ್ಣಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

–ಸುನಂದ ನಾಯಕ

ಕಪ್ಪು–ಬಿಳಿ ಅಮೆರಿಕನ್ನರ ನಡುವಿನ ಅಸಮಾನತೆ....

ಪುಟ 9 ರಿಂದ

ಹಾಕಿದ ಕೊನೆಯ ರಾಜ್ಯವಾಯಿತು.

1776–1790: 'ಮಾನವರೆಲ್ಲ ಹುಟ್ಟಿನಿಂದ ಸಮಾನರು' ಎಂದ ಅಮೆರಿಕನ್ ಸ್ವಾತಂತ್ರ್ಯ ಘೋಷಣೆ ಕರಿಯ ಗುಲಾಮರಿಗೆ ಲಗಾವಾಗಲಿಲ್ಲ. ಗುಲಾಮರ ಸಾಗಾಣಿಕೆ ಮುಂದುವರೆಯಿತು, ಅದರಲ್ಲೂ ವಿಶೇಷವಾಗಿ ದಕ್ಷಿಣದ ಹತ್ತಿ ಬೆಳೆಯುವ ಪ್ರಾಂತ್ಯಗಳಲ್ಲಿ ದೊಡ್ಡ ಸಂಖ್ಯೆಯ ಕರಿಯ ಗುಲಾಮರನ್ನು ನೆಲೆಸಲಾಯಿತು. 1790 ಜನಗಣತಿಯ ಪ್ರಕಾರ ಇಂತಹ 3 ಪ್ರಾಂತ್ಯಗಳಲ್ಲಿ ಕರಿಯ ಗುಲಾಮರ ಸಂಖ್ಯೆ 18 ಲಕ್ಷ ದಾಟಿತ್ತು. ಆ ಪ್ರಾಂತ್ಯಗಳ ಒಟ್ಟು ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚಿತ್ತು.

1808: 18ನೇ ಶತಮಾನದಲ್ಲಿ ಬ್ರಿಟಿಷರು ನಡೆಸಿದ ವ್ಯಾಪಕ ಆಫ್ರಿಕನ್ ಗುಲಾಮರ ವ್ಯಾಪಾರದಲ್ಲಿ 6 ಲಕ್ಷ ಕರಿಯರನ್ನು ಅಮೆರಿಕಾಕ್ಕೆ ಸಾಗಿಸಲಾಯಿತು. **1808ರಲ್ಲಿ ಗುಲಾಮರ ವ್ಯಾಪಾರವನ್ನು (ಗುಲಾಮಗಿರಿಯನ್ನಲ್ಲ, ಗುಲಾಮರ ವ್ಯಾಪಾರವನ್ನು ಮಾತ್ರ) ನಿಷೇಧಿಸುವ ವರೆಗೆ ಅದು ಭಾರಿ ಪ್ರಮಾಣದಲ್ಲಿ ಮುಂದುವರೆಯಿತು.**

1860: ಕರಿಯ ಗುಲಾಮರು ಮತ್ತು ಅವರ ಸಂತತಿಯೆಲ್ಲಾ ಸೇರಿ 1860ರ ಜನಗಣತಿಯ ಹೊತ್ತಿಗೆ ಕರಿಯರ ಸಂಖ್ಯೆ 40 ಲಕ್ಷಕ್ಕೆ (ಒಟ್ಟು ಜನಸಂಖ್ಯೆಯ ಶೇ. 13) ಏರಿತ್ತು.

1865–68: ಅಮೆರಿಕದ ಆಂತರಿಕ ಯುದ್ಧದಲ್ಲಿ ಗುಲಾಮಗಿರಿ ಸಹ ಒಂದು ವಿಷಯವಾಗಿತ್ತು. ಆದರೆ ಅದೇ ಮುಖ್ಯವಾಗಿರಲಿಲ್ಲ. ದಕ್ಷಿಣದ ಪ್ರಾಂತ್ಯಗಳ ಪ್ರತ್ಯೇಕತೆ ಮುಖ್ಯ ವಿಷಯವಾಗಿತ್ತು. ಆದರೆ ಯುದ್ಧ ನಂತರ ಕರಿಯರ ಮೇಲಿದ್ದ ಹಲವು ನಿರ್ಬಂಧಗಳನ್ನು ಸಡಿಲಿಸಲಾಯಿತು. ಅಮೆರಿಕದಲ್ಲಿ ಆಗ ನೆಲೆಸಿದ್ದ ಮತ್ತು ಅಲ್ಲೇ ಹುಟ್ಟಿದ್ದ ಕರಿಯರಿಗೆ ನಾಗರಿಕ ಹಕ್ಕು ಕೊಡಲಾಯಿತು.

1870–1964: ಜಿಮ್ ಕ್ರೋ ಕಾನೂನುಗಳು ಎಂದು ಕರೆಯಲಾಗುವ ಕಾನೂನುಗಳು ಹೆಚ್ಚಿನ ದಕ್ಷಿಣದ ಪ್ರಾಂತ್ಯಗಳಲ್ಲಿ ಜಾರಿಗೆ ಬಂತು. ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಕರಿಯರು ಮತ್ತು ಬಿಳಿಯರು ಒಟ್ಟಿಗೆ ಇರುವಂತಿಲ್ಲ ಎಂಬುದು ಈ ಕಾನೂನುಗಳ ಸಾರಾಂಶ. ಇದರ ಪ್ರಕಾರವೇ ಸಾರ್ವಜನಿಕ ಸಾರಿಗೆಯಲ್ಲಿ, ಹೋಟೆಲುಗಳಲ್ಲಿ ಎಲ್ಲೆಲ್ಲೂ ಕರಿಯರನ್ನು ಪ್ರತ್ಯೇಕಿಸಲಾಗಿತ್ತು. ಇಂತಹ ಒಂದಲ್ಲ ಒಂದು ಕಾನೂನು ಒಂದಲ್ಲ ಒಂದು ಪ್ರಾಂತ್ಯದಲ್ಲಿ 1964ರವರೆಗೂ ಜಾರಿಯಲ್ಲಿದ್ದವು. 1958ರಲ್ಲಷ್ಟೇ ಯು.ಎಸ್. ಮಿಲಿಟರಿಯಲ್ಲಿ ಕರಿಯರ ಪ್ರತ್ಯೇಕ ಘಟಕಗಳನ್ನು ವಿಸರ್ಜಿಸಲಾಯಿತು. ಹಲವು ದಕ್ಷಿಣದ ಪ್ರಾಂತ್ಯಗಳಲ್ಲಿ ಒಂದಲ್ಲ ಒಂದು ಕಾರಣ ಕೊಟ್ಟು ಕರಿಯರ ಮತದಾನದ ಹಕ್ಕನ್ನು ಮೊಟಕುಗೊಳಿಸಲಾಗುತ್ತಿತ್ತು. ಈಗಲೂ ಅದು ಕೆಲವು ಪ್ರಾಂತ್ಯಗಳಲ್ಲಿ ಹೊಸ ರೂಪಗಳಲ್ಲಿ ಮುಂದುವರೆದಿದೆ. ●

ಯುಸುಫ್ ತರಿಗಾಮಿ ಶ್ರೀನಗರ ಸ್ಥಾನಬದ್ಧತೆಯಿಂದ ದಿಲ್ಲಿಯ ಏಮ್ಸ್‌ಗೆ

– ಸುಪ್ರಿಂ ಕೋರ್ಟ್ ಆದೇಶಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಸ್ವಾಗತ

ಜಮ್ಮು ಮತ್ತು ಕಾಶ್ಮೀರದ ಹಿರಿಯ ಸಿಪಿಐ(ಎಂ) ಮುಖಂಡರು ಹಾಗೂ ನಾಲ್ಕು ಬಾರಿ ಶಾಸಕರಾಗಿ ಚುನಾಯಿತರಾಗಿರುವ ಮಹಮ್ಮದ್ ಯುಸುಫ್ ತರಿಗಾಮಿಯವರನ್ನು ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ(ಏಮ್ಸ್)ಗೆ ವರ್ಗಾಯಿಸುವ ಆದೇಶವನ್ನು ಸುಪ್ರಿಂ ಕೋರ್ಟ್ ಸಪ್ಟಂಬರ್ 5ರಂದು ನೀಡಿದೆ.. ತರಿಗಾಮಿಯವರಿಗೆ ಇದು ಉಪಶಮನ ನೀಡಿರುವ ಆದೇಶ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸ್ವಾಗತಿಸಿದೆ. ಅವರಿಗೆ ಸರಿಯಾದ ವೈದ್ಯಕೀಯ ಪಾಲನೆ ದೊರೆಯಲೆಂದು ಈ ಆದೇಶವನ್ನು ನೀಡಲಾಗಿದ್ದು, ಅವರು ಬಯಸಿದ ಒಬ್ಬ ಕುಟುಂಬದ ಸದಸ್ಯರು ಅವರ ಜತೆಯಲ್ಲಿ ಇರಲು ಕೂಡ ಅವಕಾಶ ನೀಡಲಾಗಿದೆ.

ಆಗಸ್ಟ್ 5ರಂದು ಕಲಮು 370ನ್ನು ರದ್ದು ಮಾಡುವ ಕೇಂದ್ರ ಸರಕಾರದ ಕ್ರಮಕ್ಕೆ ಪೂರ್ವಭಾವಿಯಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಸರಕಾರ ವ್ಯಾಪಕವಾದ ನಿರ್ಬಂಧಗಳನ್ನು ಹೇರಿದ ನಂತರ ತರಿಗಾಮಿಯವರು ಎಲ್ಲಿದ್ದಾರೆಂದು ತಿಳಿದಿರಲಿಲ್ಲ. ಅವರ ಆರೋಗ್ಯ ಸಮಸ್ಯೆಗಳ ಹಿನ್ನೆಲೆಯಲ್ಲಿ ಅವರನ್ನು ಭೇಟಿ ಮಾಡಲು, ರಾಜ್ಯಪಾಲರಿಗೆ ಮುಂದಾಗಿ ತಿಳಿಸಿಯೇ ಹೋದ ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರನ್ನು ನಿರ್ಬಂಧಿಸಿದ ರಾಜ್ಯದ ಆಡಳಿತ ಅವರನ್ನು ಎರಡು ಬಾರಿ ಶ್ರೀನಗರ ವಿಮಾನ ನಿಲ್ದಾಣದಿಂದಲೇ ಹಿಂದಕ್ಕೆ ಕಳಿಸಿತು. ಕಳೆದ ವಾರ ಕೊನೆಗೂ ಸುಪ್ರಿಂ ಕೋರ್ಟ್‌ನಲ್ಲಿ ಹೆಬಿಯಸ್ ಕಾರ್ಪಸ್ ಅರ್ಜಿ ಹಾಕಿದ ಮೇಲೆಯೇ ಅವರು ತರಿಗಾಮಿಯವರನ್ನು ಭೇಟಿಯಾಗಲು ಸಾಧ್ಯವಾಗಿರುವುದು.

ಆಗಸ್ಟ್ 28ರಂದು ಈ ಅರ್ಜಿಯನ್ನು ವಿಚಾರಣೆಗೆತ್ತಿಕೊಂಡ ಸುಪ್ರಿಂ ಕೋರ್ಟ್ ಕಾಶ್ಮೀರದಲ್ಲಿ ತರಿಗಾಮಿಯವರನ್ನು ಭೇಟಿ ಮಾಡಲು ಯೆಚುರಿಯವರಿಗೆ ಅನುಮತಿ ನೀಡಬೇಕು ಎಂದು ಆದೇಶ ನೀಡಿತು. ಅವರು ಮರಳಿ ಬಂದು ನ್ಯಾಯಾಲಯಕ್ಕೆ ತರಿಗಾಮಿಯವರ ಆರೋಗ್ಯದ ಕುರಿತು ಅಫಿಡವಿಟ್ ಸಲ್ಲಿಸಬೇಕು ಎಂದು ಅದು ಹೇಳಿತು..

ಈ ಪ್ರಕಾರ ಮರುದಿನ 29ರಂದು ಶ್ರೀನಗರಕ್ಕೆ ಹೋದ ಯೆಚುರಿಯವರು ತರಿಗಾಮಿಯವರನ್ನು ಭೇಟಿ ಮಾಡಿ 30 ರಂದು ದಿಲ್ಲಿಗೆ ಮರಳಿ ಸಪ್ಟಂಬರ್ 2ರಂದು ಸುಪ್ರಿಂ ಕೋರ್ಟಿಗೆ ಅಫಿಡವಿಟ್ ಸಲ್ಲಿಸಿದರು.

ಇದನ್ನು ಸಪ್ಟಂಬರ್ 5ರಂದು ವಿಚಾರಣೆಗೆ ಎತ್ತಿಕೊಂಡ ಸುಪ್ರಿಂ ಕೋರ್ಟ್ ಮೇಲೆ ಹೇಳಿದಂತೆ ಆದೇಶ ನೀಡಿದೆ.

ಈ ವಿಚಾರಣೆಯಲ್ಲಿ ಯೆಚುರಿಯವರು ಸಲ್ಲಿಸಿರುವ ಅಫಿಡವಿಟ್ ಆಧಾರದಲ್ಲಿ, ತರಿಗಾಮಿಯವರ ಗೃಹಬಂಧನ ಮೇಲ್ನೋಟಕ್ಕೇ ಕಾನೂನುಬಾಹಿರವಾಗಿ ಕಾಣುತ್ತದೆ ಎಂಬುದನ್ನು ನ್ಯಾಯಾಲಯದ ಗಮನಕ್ಕೆ ತರಲಾಯಿತು. ಏಕೆಂದರೆ ಅವರ ಮೇಲೆ ಆರೋಪಗಳೇನನ್ನೂ ಹಾಕಿಲ್ಲ, ಅವರನ್ನು ಮನೆಯಿಂದ ಹೊರಗೆ ಹೋಗದಂತೆ ನಿರ್ಬಂಧಿಸಿರುವ ಬಗ್ಗೆ ಆದೇಶವನ್ನೂ ಕೊಟ್ಟಿಲ್ಲ. ನಿಜಸಂಗತಿಯೆಂದರೆ, ಅವರನ್ನು ಗೃಹಬಂಧನದಲ್ಲಿರಿಸುವಂತೆ ಭದ್ರತಾ ಸಿಬ್ಬಂದಿಗೆ ಮುಖತಃ ನಿರ್ದೇಶನಗಳನ್ನಷ್ಟೇ ನೀಡಲಾಗಿದೆ, ಯಾವುದೇ ಕಾನೂನಾತ್ಮಕ ಅಧಿಕಾರದ ಬೆಂಬಲ ಈ ನಿರ್ದೇಶನಗಳಿಗೆ ಇಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಈ ಕುರಿತು ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಸುಪ್ರಿಂ ಕೋರ್ಟ್ ಈ ವಿಚಾರಣೆಯ ನಂತರ ಯೆಚುರಿಯವರು ತನ್ನ ಹೆಬಿಯಸ್ ಕಾರ್ಪಸ್ ಅರ್ಜಿಯಲ್ಲಿ ಎತ್ತಿದ ಅಂಶಗಳ ಮೇಲೆ ಭಾರತ ಸರಕಾರಕ್ಕೆ ನೋಟೀಸ್ ಕಳಿಸಿದೆ. ಸರಕಾರದ ಉತ್ತರ ಬಂದ ಮೇಲೆ ಈ ಅರ್ಜಿಯ ಮೇಲಿನ ವಿಚಾರಣೆ ಮುಂದುವರೆಯುತ್ತದೆ ಎಂದು ಪೊಲಿಟ್ ಬ್ಯುರೊ ಹೇಳಿದೆ.



ತರಿಗಾಮಿ ಬಿಡುಗಡೆ ಕೋರಿರುವ ಅರ್ಜಿಯನ್ನು ಮುಂದುವರೆಸಲು ಮತ್ತು ಕಂಡಿರುವ ಸಂಗತಿಗಳನ್ನು ದಾಖಲಿಸಲು ಅವಕಾಶ

– ಯೆಚುರಿ ಅಫಿಡವಿಟ್‌ನಲ್ಲಿ ಕೋರಿಕೆ

ಯೆಚುರಿಯವರು ನ್ಯಾಯಾಲಯಕ್ಕೆ ಸಲ್ಲಿಸಿದ ತಮ್ಮ ಅಫಿಡವಿಟ್‌ನಲ್ಲಿ ತಾನು ಶ್ರೀನಗರಕ್ಕೆ ಹೋಗಿ ದಿಲ್ಲಿಗೆ ಹಿಂದಿರುಗುವ ವರೆಗಿನ ವಿವರಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿರುವ ಕೆಲವು ಅಂಶಗಳನ್ನು ಈ ಮುಂದೆ ಕೊಡಲಾಗಿದೆ:

ಒಬ್ಬ ಆಪ್ತ ಸಹಾಯಕರು ಜತೆಗೆ ಬರಲು ಅವಕಾಶ ನೀಡಬೇಕೆಂಬ ಕೋರಿಕೆಯನ್ನು ಆಡಳಿತ ಒಪ್ಪಿದ್ದರಿಂದ, ಆಪ್ತ ಸಹಾಯಕರೊಂದಿಗೆ ಶ್ರೀನಗರದಲ್ಲಿ ವಿಮಾನದಿಂದ ಇಳಿದು ನಿಲ್ದಾಣದ ಕಟ್ಟಡವನ್ನು ಪ್ರವೇಶಿಸುವ ಏರೋಬ್ರಿಜ್‌ನಲ್ಲೆ ಇಬ್ಬರು ಪೋಲೀಸ್ ಅಧಿಕಾರಿಗಳು ಬಳಿ ಬಂದು ಯೆಚುರಿಯವರನ್ನು ಒಂದು ಕೋಣೆಗೆ ಒಯ್ದರು. ಅಲ್ಲಿ ಮೊದಲೇ ತಿಳಿಸಿದ್ದ ಸೆಕ್ಯುರಿಟಿ ವಿಭಾಗದ ಎಸ್.ಎಸ್.ಪಿ. ಮಿರ್ ಇಮ್ತಿಯಾಜ್ ಹುಸೇನ್ ಎಂಬವರು ತಾನು ತರಿಗಾಮಿಯವರವನ್ನು ಭೇಟಿಯಾಗಲು ಒಯ್ದು ಸಂಜೆ ಸುಮಾರು 5ರ ವೇಳೆಗೆ ದಿಲ್ಲಿಗೆ ಹೊರಡುವ ವಿಮಾನದಲ್ಲಿ ಹಿಂದಿರುಗಲು ವಾಪಾಸು ಕರೆ ತರುವುದಾಗಿ ತಿಳಿಸಿದರು. ಆದರೆ ತಾನು ಅದೇ ದಿನ ಸಂಜೆ ಹಿಂದಿರುಗಬಹುದೋ ಇಲ್ಲವೋ ಎಂಬುದನ್ನು ತರಿಗಾಮಿಯವರ ಆರೋಗ್ಯದ ಸ್ಥಿತಿಯನ್ನು ನೋಡಿದ ಮೇಲೆಯೇ ನಿರ್ಧರಿಸಲು ಸಾಧ್ಯ, ನ್ಯಾಯಾಲಯ ರಾಜ್ಯ ಅಡಳಿತಕ್ಕೆ ಆದೇಶ ನೀಡಿರುವುದು ತರಿಗಾಮಿಯವರು ಎಲ್ಲಿದ್ದಾರೆ ಎಂದು ತಿಳಿಸಿ ಅಲ್ಲಿಗೆ ಹೋಗಲು ಅನುಕೂಲ ಕಲ್ಪಿಸಬೇಕೆಂದಷ್ಟೇ, ಅದನ್ನು ತಳಿಸಿದರೆ ತಾವೇ ಹೋಗುವುದಾಗಿ ಯೆಚುರಿ ತಿಳಿಸಿದರು. ಆದರೆ ಎಸ್.ಎಸ್.ಪಿ. ತಾವು ಜತೆಗಿರಲೇಬೇಕು ಎಂದು ಆಗ್ರಹಿಸಿದರು, ಆದ್ದರಿಂದ ಶ್ರೀನಗರ ವಿಮಾನ ನಿಲ್ದಾಣದಲ್ಲಿ ಇಳಿದು ವಾಪಾಸು ದಿಲ್ಲಿಗೆ ಹೊರಡುವ ವರೆಗೂ ತಾವಾಗಿಯೇ ತರಿಗಾಮಿಯವರನ್ನು ಭೇಟಿಯಾಗಲು ತಮಗೆ ಅವಕಾಶವನ್ನೇ ಕೊಡಲಿಲ್ಲ ಎಂದು ಯೆಚುರಿಯವರು ತಮ್ಮ ಅಫಿಡವಿಟ್‌ನಲ್ಲಿ ಹೇಳಿದ್ದಾರೆ.

ಯೆಚುರಿ ಮತ್ತು ಅವರ ಆಪ್ತ ಸಹಾಯಕರನ್ನು ಒಂದು ಹೈ ಸೆಕ್ಯುರಿಟಿ ಕಾರನ್ನು ಹತ್ತುವಂತೆ ಹೇಳಲಾಯಿತು. ಅದರ ಹಿಂದೆ ಮುಂದೆ ಕಾರುಗಳು ಮತ್ತು ಭದ್ರತಾ ಸಿಬ್ಬಂದಿಯ ಸಾಲೇ ನಿಂತಿತ್ತು. ಈ ವಾಹನ ಸಾಲು ತರಿಗಾಮಿಯವರ ಮನೆಯನ್ನು ಮಧ್ಯಾಹ್ನ 12.30ರ ವೇಳೆಗೆ ತಲುಪಿತು.

ತರಿಗಾಮಿಯವರು ಯೆಚುರಿಯವರನ್ನು ನೋಡಿ ಬಹಳ ಹರ್ಷೋಲ್ಲಸಿತರಾದರು. ಅವರೊಡನೆ ಮಾತಾಡುವಾಗ ಮೊದಲ ಒಂದು ಗಂಟೆ ಎಸ್.ಎಸ್.ಪಿ. ಯವರು ಅಗತ್ಯವಿಲ್ಲದಿದ್ದರೂ ಆಹ್ವಾನವಿಲ್ಲದೆಯೇ ಅಲ್ಲೇ ಕುಳಿತಿದ್ದರು. ಅವರ ಮುಂದೆಯೇ **ಯೆಚುರಿಯವರು ಯಾವ ಆರೋಪಗಳ ಮೇಲೆ, ಕಾನೂನಿನ ಯಾವ ಅಂಶಗಳ ಅಡಿಯಲ್ಲಿ ಅವರನ್ನು ಮನೆಯಲ್ಲೇ ಬಂಧಿಸಿಡಲಾಗಿದೆ ಎಂದು ತರಿಗಾಮಿಯವರನ್ನು ಕೇಳಿದರು. ಆಗ ಆ ಪೋಲೀಸ್ ಅಧಿಕಾರಿ ತರಿಗಾಮಿಯವರ ಮೇಲೆ ಯಾವುದೇ ಕಾನೂನಾತ್ಮಕ ಆರೋಪಗಳಿಲ್ಲ, ಅವರನ್ನು ಸ್ಥಾನಬದ್ಧಗೊಳಿಸಲಾಗಿಲ್ಲ, ಅವರು "ಮುಕ್ತ"ರಾಗಿದ್ದಾರೆ ಎಂದರು!.**

ತರಿಗಾಮಿಯವರು ಕೂಡ ಆ ಅಧಿಕಾರಿಯ ಸಮ್ಮುಖವೇ, ತನ್ನ ಝಡ್+ ಸೆಕ್ಯುರಿಟಿಯ ವಾಹನಗಳನ್ನು ಹಿಂತೆಗೆದುಕಳ್ಳಲಾಗಿದೆ, ಸ್ಥಾನಬದ್ಧತೆಯ ಯಾವುದೇ ಆದೇಶವನ್ನು ತನಗೆ ತೋರಿಸದೇ ಇದ್ದರೂ, ತನ್ನನ್ನು ಅಥವ ತನ್ನ ಕುಟುಂಬದ ಯಾವುದೇ ಸದಸ್ಯರನ್ನು ಮನೆಯಿಂದ ಹೊರಗೆ ಹೋಗದಂತೆ ಮತ್ತು ಹೊರಗಿನಿಂದ ಯಾರೂ ಮನೆಗೆ ಪ್ರವೇಶಿಸದಂತೆ ತಡೆಯಲು ಭದ್ರತಾ ಸಿಬ್ಬಂದಿಗೆ ನಿರ್ದೇಶನ ಕಳೆದ 25 ದಿನಗಳಿಂದ ಇದೆ ಎಂದರು.

ಆಸ್ಪತ್ರೆಗೆ ನಿಯಮಿತವಾಗಿ ಹೋಗಬೇಕಾಗಿರುವ ತರಿಗಾಮಿ, ತಾನು ಕೊನೆಯ ಬಾರಿ ಶೇರ್–ಇ–ಕಾಶ್ಮೀರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ(ಎಸ್‌ಕೆಐಎಂಎಸ್) ಗೆ ಭೇಟಿ ನೀಡಿದ್ದು ಜುಲೈ 31ರಂದು, ಆಗ ಕೆಲವು ತಪಾಸಣೆಗಳನ್ನು ಮಾಡಬೇಕಾಗಿದೆ ಎಂದು ವೈದ್ಯರು ಸೂಚಿಸಿದ್ದರು ಎಂದರು. ಆದರೆ ಆಗಸ್ಟ್ 5ರಿಂದ ಮನೆಯಿಂದ ಕದಲಲು ಬಿಡುತ್ತಿಲ್ಲವಾದ್ದರಿಂದ ಅದು ಸಾಧ್ಯವಾಗಲಿಲ್ಲ. ಮತ್ತೆ–ಮತ್ತೆ ಕೇಳಿಕೊಂಡ ಮೇಲೆ, ಆಗಸ್ಟ್ 19ರಂದು ಅವಕಾಶ ನೀಡಲಾಯಿತು. ಅಲ್ಲಿ ಅವರ ಹೃದಯಬೇನೆ ಮತ್ತು ಮಧುಮೇಹಕ್ಕೆ ಹಲವಾರು ತಪಾಸಣೆಗಳನ್ನು ಮಾಡಬೇಕಾಗಿದೆ ಎಂದರು. ಆದರೆ ಅದಕ್ಕೆ ಒಂದೇ ಬಾರಿ ಆಗಸ್ಟ್ 24 ರಂದು ಅವಕಾಶ ನೀಡಲಾಯಿತು. ಆದರೆ ಆದಿನ ಸಂಬಂಧಪಟ್ಟ ವೈದ್ಯರು ಇಲ್ಲದ್ದರಿಂದ ಅದೂ ಸಾಧ್ಯವಾಗಲಿಲ್ಲ. ವೈದ್ಯರು ಹೇಳಿದಂತಹ ತನ್ನ ಅನಾರೋಗ್ಯದ ವಿವರಗಳನ್ನು ತರಿಗಾಮಿಯವರು ತಿಳಿಸಿದರು.

ಯೆಚುರಿಯವರು ಕೊನೆಗೂ ಆ ಎಸ್.ಎಸ್.ಪಿ.ಗೆ ಅವರಿದ್ದ ಕೋಣೆಯಿಂದ ಹೊರಹೋಗುವಂತೆ ಕೋರಬೇಕಾಗಿ ಬಂತು. ಅದಕ್ಕೆ ಮೊದಲು ಯೆಚುರಿಯವರು ತಾನು ದಿಲ್ಲಿಗೆ ಹಿಂದಿರುಗವ ಮೊದಲು ತರಿಗಾಮಿಯವರ ಆರೋಗ್ಯಸ್ಥಿತಿಯ ಆಮೂಲಾಗ್ರ ಮೌಲ್ಯಮಾಪನವಾಗಬೇಕು ಎಂದು ಆಗ್ರಹಿಸಿದರು. ಆಗ ಸಂಬಂಧಪಟ್ಟವರೊಂದಿಗೆ ವಿಚಾರಿಸಿದ ನಂತರ ಎಸ್.ಎಸ್.ಪಿ. ಮರುದಿನ ಬೆಳಿಗ್ಯೆಯಷ್ಟೇ ಒಬ್ಬ ಡಾಕ್ಟರನ್ನು ವ್ಯವಸ್ಥೆ ಮಾಡಲು ಸಾಧ್ಯ ಎಂದರು. ಯೆಚುರಿಯವರು ಅದುವರೆಗೆ, ಆ ರಾತ್ರಿ ತರಿಗಾಮಿಯವರ ಜತೆಗೆ ಇರಲು ಸಾಧ್ಯವಿಲ್ಲ, ಅವರಿಗೆ ಸರಕಾರದ ಗೆಸ್ಟ್ ಹೌಸ್‌ನಲ್ಲಿ ರಾತ್ರಿ ತಂಗಲು ವ್ಯವಸ್ಥೆ ಮಾಡುವುದಾಗಿ ಹೇಳಿದರು. ಅವರನ್ನು ಮತ್ತೆ ಅದೇ ಭದ್ರತಾವಾಹನಗಳ ಮೆರವಣಿಗೆಯಲ್ಲಿ ಗೆಸ್ಟ್ ಹೌಸ್‌ಗೆ ಒಯ್ಯಲಾಯಿತು.

ಈ ನಡುವೆ ತರಿಗಾಮಿಯವರ ಪತ್ನಿ ಮತ್ತು ಅವರ ಕುಟುಂಬದ ಇತರ ಸದಸ್ಯರು ಅವರ ಆರೋಗ್ಯದ ಬಗ್ಗೆ ಆತಂಕ ವ್ಯಕ್ತಪಡಿಸಿದರು. ತರಿಗಾಮಿ ಮಾತ್ರವಲ್ಲ, ಅವರ ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳು ಕೂಡ ಗೃಹಬಂಧನದಲ್ಲಿದ್ದಾರೆ. ಯಾರೂ ಹೊರಗೆ ಹೋಗುವಂತಿಲ್ಲ. ಮನೆಗೆ ಬೇಕಾದ ದಿನಸಿ ವಸ್ತುಗಳನ್ನು ಭದ್ರತೆಯವರಿಂದಲೇ ಪಡೆಯಬೇಕು. ಶ್ರೀನಗರದಲ್ಲಿರುವ, ರಾಜ್ಯದ ಇತರ ಭಾಗಗಳಲ್ಲಿರುವ, ದೇಶದ ಇತರೆಡೆಗಳಲ್ಲಿರುವ ಮಿತ್ರರು ಯಾರೊಂದಿಗೂ ಮಾತಾಡುವಂತಿಲ್ಲ, ಮೊಬೈಲ್‌ಗಳು, ಮನೆಯಲ್ಲಿರುವ ಎರಡು ಟೆಲಿಫೋನ್‌ಗಳು ಎಲ್ಲವನ್ನೂ ಸ್ತಬ್ಧಗೊಳಿಸಲಾಗಿದೆ. ಇದರಿಂದಾಗಿ ತುರ್ತು ವೈದ್ಯಕೀಯ ನೆರವು ಪಡೆಯುವದೂ ಅಸಾಧ್ಯವಾಗಿದೆ. ಅಲ್ಲದೆ ಈ ನಿರ್ಬಂಧಗಳಿಂದಾಗಿ ಮನೆಯಲ್ಲಿ ನಗದಿನ ಅಭಾವವೂ ಉಂಟಾಗುತ್ತಿದೆ ಎಂದು ಅವರು ತಮ್ಮ ಪರಿಸ್ಥಿತಿಯನ್ನು ಹೇಳಿಕೊಂಡರು.

ಮರುದಿನ ಬೆಳಿಗ್ಯೆ ವೈದ್ಯರು ಬಂದು ತಪಾಸಣೆ ನಡೆಸಿದರು. ತರಿಗಾಮಿಯವರ ವೈದ್ಯಕೀಯ ವರದಿಯನ್ನು ಅಲ್ಲಿದ್ದ ಕಂಪ್ಯೂಟರಿನಲ್ಲಿ ಟೈಪ್‌ಮಾಡಿ ಒಂದು ಪ್ರತಿಯನ್ನು ಯೆಚುರಿಯವರಿಗೆ ಕೊಟ್ಟರು. ಆದರೆ ಅದರ ಮೇಲೆ ಸಹಿ ಮಾಡಲಿಲ್ಲ.

ನಂತರ ಯೆಚುರಿ ಮತ್ತು ಅವರ ಆಪ್ತ ಸಹಾಯಕರನ್ನು ಹಿಂದಿನ ದಿನದ ರೀತಿಯಲ್ಲಿ ಬಿಗಿ ಭದ್ರತೆಯೊಂದಿಗೆ ವಿಮಾನ ನಿಲ್ದಾಣಕ್ಕೆ ಕರೆ ತರಲಾಯಿತು. ಅಲ್ಲಿ 11.10ರ ದಿಲ್ಲಿ ವಿಮಾನಕ್ಕೆ ಟಿಕೆಟ್‌ನ್ನು ರಾಜ್ಯ ಆಢಳಿತವೇ ಬುಕ್ ಮಾಡಿತ್ತು.

ಶ್ರೀನಗರದಲ್ಲಿ ಸರಿಯಾದ ವೈದ್ಯಕೀಯ ನೆರವು ಅಗತ್ಯವಿದ್ದಾಗ ಸಿಗುವುದು ಸಾಧ್ಯವಿಲ್ಲವಾದ್ದರಿಂದೆ ಯೆಚುರಿಯವರು ತಾವು ಹಾಕಿರುವ ಹೆಬಿಯಸ್ ಕಾರ್ಪಸ್ ಅರ್ಜಿಯನ್ನು ಮುಂದುವರೆಸಬೇಕು ಮತ್ತು ತರಿಗಾಮಿಯವರನ್ನು ನಿಯಮಿತ ವೈದ್ಯಕೀಯ ತಪಾಸಣೆಗೆ ದಿಲ್ಲಿಯ ಏಮ್ಸ್‌ಗೆ ವರ್ಗಾಯಿಸುವಂತೆ ನ್ಯಾಯಾಲಯವನ್ನು ಕೇಳಬೇಕು ಎಂದು ತರಿಗಾಮಿ ಮತ್ತು ಅವರ ಪತ್ನಿ ಕೇಳಿದ್ದಾರೆ ಎಂದು ಈ ಅಫಿಡವಿಟ್‌ನಲ್ಲಿ ಯೆಚುರಿ ನ್ಯಾಯಾಲಯಕ್ಕೆ ತಿಳಿಸಿದರು. **ಈ ಇಡೀ ಭೇಟಿಯಿಂದ ತನಗೆ ಸ್ಪಷ್ಟವಾಗಿರುವ ಸಂಗತಿಯೆಂದರೆ, ತರಿಗಾಮಿಯವರ ಕಾನೂನುಬಾಹಿರ ಸ್ಥಾನಬದ್ಧತೆ, ಮತ್ತು ಅವರ ಕುಟುಂಬದ ಮೇಲೆ ಹೇರಿರುವ ಸಂಪರ್ಕದ ಅನಿಶ್ಚಿತತೆ, ವೈದ್ಯಕೀಯ ಮತ್ತು ತುರ್ತು ನರವಿನ ಅಲಭ್ಯತೆ ತರಿಗಾಮಿಯವರ ಅನಾರೋಗ್ಯ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದೆ, ಅವರು ಮತ್ತು ಅವರ ಕುಟುಂಬದ ಮಾನಸಿಕ ಆರೋಗ್ಯದ ಮೇಲೂ ಪ್ರಭಾವ ಬೀರಿದೆ ಎಂದು ಯೆಚುರಿ ಅಫಿಡವಿಟ್‌ನಲ್ಲಿ ಹೇಳಿದ್ದಾರೆ.**

ಇದಲ್ಲದೆ, ಯೆಚುರಿ ದಿಲ್ಲಿಗೆ ಹಿಂದಿರುಗಿದಾಗ, ದೊಡ್ಡ ಸಂಖ್ಯೆಯಲ್ಲಿದ್ದ ಮಾಧ್ಯಮದವರು ಪ್ರಶ್ನೆಗಳ ಸುರಿಮಳೆಗೈದರು. ಆದರೆ ಯೆಚುರಿ, ತಾನು ಸುಪ್ರಿಂ ಕೋರ್ಟಿಗೆ ವರದಿ ಮಾಡುತ್ತೇನೆ, ತನಗೆ ಕಂಡ ಪ್ರಕಾರ ಪರಿಸ್ಥಿತಿ ಸರಕಾರ ಸೂಚಿಸುವುದಕ್ಕೆ ಸಂಪೂರ್ಣವಾಗಿ ತದ್ವಿರುದ್ಧವಾಗಿದೆ ಎಂದಷ್ಟೇ ಹೇಳಿದರು.

ಈ ಹಿನ್ನೆಲೆಯಲ್ಲಿ ಯೆಚುರಿ ತರಿಗಾಮಿಯವರಿಗೆ ಬಿಡುಗಡೆ ನೀಡಬೇಕು ಎಂಬ ತಮ್ಮ ಮೂಲ ಅರ್ಜಿಯನ್ನು ಮುಂದುವರೆಸಲು ಸ್ವಾತಂತ್ರ್ಯ ನೀಡಬೇಕು ಮತ್ತು ತನ್ನ ಸೀಮಿತ ಭೇಟಿಯ ಸಂದರ್ಭದಲ್ಲಿ ತಾನು ಕಂಡುದರ ಆಧಾರದಲ್ಲಿ ತನ್ನ ವೀಕ್ಷಣೆಗಳನ್ನು ದಾಖಲಿಸಲು ಸ್ವಾತಂತ್ರ್ಯ ನೀಡಬೇಕು ಎಂದು ತಮ್ಮ ಅಫಿಡವಿಟ್‌ನಲ್ಲಿ ನ್ಯಾಯಾಲಯವನ್ನು ಕೋರಿದ್ದಾರೆ.

ಅಲ್ಲದೆ, ತಾವು ಸರಕಾರೀ ಗೆಸ್ಟ್ ಹೌಸಿನಲ್ಲಿ ಇದ್ದುದಕ್ಕೆ, ಹಾಗೂ ದಿಲ್ಲಿಗೆ ಹಿಂದಿರುಗಲು ಮಾಡಿದ್ದ ಟಿಕೆಟಿನ ಹಣವನ್ನು ಸಂದಾಯ ಮಾಡಿರುವುದಾಗಿಯೂ ನ್ಯಾಯಾಲಯದ ಗಮನಕ್ಕೆ ಈ ಅಫಿಡವಿಟ್ ಮೂಲಕ ತಂದಿದ್ದಾರೆ.

15ನೇ ಹಣಕಾಸು ಆಯೋಗಕ್ಕೆ ರಕ್ಷಣಾ ವೆಚ್ಚದ ಪರಾಮರ್ಶೆ ರಾಜ್ಯ ಸರಕಾರಗಳ ಸಂಪನ್ಮೂಲಗಳಿಗೆ ಕೈಹಾಕುವ ಹುನ್ನಾರ



ಸೆಸ್, ಸರ್ಚಾರ್ಜ್, ಜಿಎಸ್‌ಟಿ ಮುಂತಾದ ಕ್ರಮಗಳ ಮೂಲಕ ರಾಜ್ಯಗಳ ಆದಾಯಗಳಿಗೆ ಕತ್ತರಿ ಹಾಕಿದ ನಂತರ ಈಗ ಕೇಂದ್ರ ಸರ್ಕಾರ ಕೇಂದ್ರದ ವ್ಯಾಪ್ತಿಯಲ್ಲಿರುವ ರಕ್ಷಣಾ ವೆಚ್ಚಗಳ ಹೊರೆಯನ್ನು ರಾಜ್ಯಗಳು ಹೊರಬೇಕು ಎಂದು ಬಯಸುತ್ತಿದೆ. ಸಂವಿಧಾನದಲ್ಲಿ ಇದಕ್ಕೆ ಅನುಮತಿ ಇಲ್ಲ. ಆದರೂ, ಕೇಂದ್ರ ಸರ್ಕಾರವು ಈ ಪ್ರಸ್ತಾಪವನ್ನು ಕಾರ್ಯರೂಪಕ್ಕೆ ತರಲು ಮುಂದಾಗುತ್ತಿದೆ. ಇದು ಸಂವಿಧಾನಕ್ಕೆ ಮಾಡುತ್ತಿರುವ ಇನ್ನೊಂ ದು ಮೋಸ, ಒಕ್ಕೂಟ ವ್ಯವಸ್ಥೆಯ ಮೇಲೆ, ರಾಜ್ಯಗಳ ಹಕ್ಕುಗಳ ಮೇಲೆ ನಡೆದಿರುವ ಇನ್ನೊಂದು ದಾಳಿ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ರಾಷ್ಟ್ರಪತಿಯವರು ಇದ್ದಕ್ಕಿದಂತೆ ಜುಲೈ 29 ರಂದು ಒಂದು ಆದೇಶದ ಮೂಲಕ 15ನೇ ಹಣಕಾಸು ಆಯೋಗದ ಪರಾಮರ್ಶೆಯ ವಿಷಯ ವ್ಯಾಪ್ತಿಯನ್ನು ಮಾರ್ಪಡಿಸಿದ್ದಾರೆ. ಅದರಂತೆ, ಈಗ ಹಣಕಾಸು ಆಯೋಗವು ದೇಶದ ರಕ್ಷಣೆ ಮತ್ತು ಆಂತರಿಕ ಭದ್ರತೆಗೆ ತಗುಲುವ ವೆಚ್ಚಗಳಿಗೆ ಹಣ ಹೊಂದಿಸಿಕೊಳ್ಳಲು ಒಂದು ಪ್ರತ್ಯೇಕ ವ್ಯವಸ್ಥೆಯನ್ನು ಏರ್ಪಡಿಸಿಕೊಳ್ಳುವ ಅಗತ್ಯವಿದೆಯೇ ಎಂಬುದನ್ನು ಪರಿಶೀಲಿಸುವಂತೆ ಮತ್ತು ಅಗತ್ಯವಿದ್ದರೆ ಅದನ್ನು ಹೇಗೆ ಜಾರಿ ಮಾಡಬಹುದು ಎಂಬುದನ್ನು ಪರಾಮರ್ಶಿಸಲಿದೆ.

ರಾಷ್ಟ್ರಪತಿಯವರು ಈ ಆದೇಶ ಹೊರಡಿಸುವ ಮುನ್ನವೇ ಕೇಂದ್ರ ಸಚಿವ ಸಂಪುಟವು ರಕ್ಷಣೆ ಮತ್ತು ಆಂತರಿಕ ಭದ್ರತೆಯ ವೆಚ್ಚಗಳಿಗೆ ಸಂಬಂಧಿಸಿದ ಹೊಸ ಏರ್ಪಾಟಿನ ಬಗ್ಗೆ ಚರ್ಚಿಸಿ ಅದಕ್ಕೆ ಒಪ್ಪಿಗೆ ಕೊಟ್ಟಿದೆ. ಈ ಏರ್ಪಾಟಿನ ಪ್ರಕಾರ, ಕೇಂದ್ರ ಸರ್ಕಾರ ಸಂಗ್ರಹಿಸಿದ ಒಟ್ಟು ತೆರಿಗೆಯಲ್ಲಿ ಮೊದಲು ರಕ್ಷಣೆ ಮತ್ತು ಆಂತರಿಕ ಭದ್ರತೆಯ ವೆಚ್ಚಗಳನ್ನು ಬದಿಗಿರಿಸಿ ನಂತರ ಉಳಿದ ಹಣದಲ್ಲಿ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ರಾಜ್ಯಗಳಿಗೆ ಸಲ್ಲುವ ಪಾಲನ್ನು ಹಂಚಲಾಗುವುದು. ಈ ಕ್ರಮವು ಮೂಲಭೂತವಾಗಿ ಏನನ್ನು ಸೂಚಿಸುತ್ತದೆ ಎಂದರೆ, ರಾಜ್ಯಗಳ ಖರ್ಚಿನಲ್ಲಿ ದೇಶದ ರಕ್ಷಣೆ ಮತ್ತು ಆಂತರಿಕ ಭದ್ರತೆಯ ವೆಚ್ಚಗಳನ್ನು ಒದಗಿಸಿಕೊಳ್ಳಲಾಗುತ್ತದೆ. ಅಂದರೆ, ರಾಜ್ಯಗಳಿಗೆ ಸಲ್ಲಬೇಕಿದ್ದ ಒಟ್ಟು ಹಣದ ಗಾತ್ರ ಕುಗ್ಗುತ್ತದೆ ಮತ್ತು ಅದಕ್ಕನುಗುಣವಾಗಿ ರಾಜ್ಯಗಳಿಗೆ ಒದಗುವ ಸಂಪನ್ಮೂಲಗಳು ಹಿಂಡಲ್ಪಡುತ್ತವೆ.

ಇದು, ಸಂವಿಧಾನದ ಮೇಲೆ ಎಸಗಿದ ವಂಚನೆ. ಭಾರತದ ಸಂವಿಧಾನದ ಏಳನೆಯ ಷೆಡ್ಯೂಲಿನಲ್ಲಿ ಮೂರು ಪಟ್ಟಿಗಳಿವೆ – ಕೇಂದ್ರದ(ಒಕ್ಕೂಟದ) ಪಟ್ಟಿ, ರಾಜ್ಯಗಳ ಪಟ್ಟಿ ಮತ್ತು ಸಹವರ್ತಿ ಪಟ್ಟಿ (ಅಂದರೆ, ಕೇಂದ್ರ ಮತ್ತು ರಾಜ್ಯಗಳ ಜಂಟಿ ಹಕ್ಕಿನ ಪಟ್ಟಿ). ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ, ಕೇಂದ್ರದ(ಅಂದರೆ, ರಾಜ್ಯಗಳ ಒಕ್ಕೂಟದ)ವ್ಯಾಪ್ತಿಗೆ ಒಳಪಟ್ಟ ವಿಷಯಗಳು, ರಾಜ್ಯಗಳ ವ್ಯಾಪ್ತಿಗೆ ಒಳಪಟ್ಟ ವಿಷಯಗಳು ಮತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಜೊತೆಯಾಗಿ ನಿರ್ಧರಿಸುವ ವಿಷಯಗಳು ಯಾವುವು ಎಂಬುದನ್ನು ಸಂವಿಧಾನದಲ್ಲಿ ಸ್ಪಷ್ಟಪಡಿಸಲಾಗಿದೆ. ದೇಶ ರಕ್ಷಣೆಯ ನಿರ್ವಹಣೆಯು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿದೆ ಎಂಬುದನ್ನು ಸಂವಿಧಾನದಲ್ಲಿ ಸ್ಪಷ್ಟಪಡಿಸಲಾಗಿದೆ. ಆದರೆ, ಕೇಂದ್ರ ಸರ್ಕಾರ ಈಗ ಕೇಂದ್ರದ ವ್ಯಾಪ್ತಿಯಲ್ಲಿರುವ ರಕ್ಷಣಾ ವೆಚ್ಚಗಳ ಹೊರೆಯನ್ನು ರಾಜ್ಯಗಳು ಹೊರಬೇಕು. ಎಂದು ಬಯಸುತ್ತಿದೆ. ಸಂವಿಧಾನದಲ್ಲಿ ಇದಕ್ಕೆ ಅನುಮತಿ ಇಲ್ಲ. ಆದರೂ, ಕೇಂದ್ರ ಸರ್ಕಾರವು ಈ ಪ್ರಸ್ತಾಪವನ್ನು ಕಾರ್ಯರೂಪಕ್ಕೆ ತರಲು ಮುಂದಾಗುತ್ತಿದೆ.

ಹಾಗೆ ನೋಡಿದರೆ, ಈ ವಿಷಯ ಹಣಕಾಸು ಆಯೋಗದ ವ್ಯಾಪ್ತಿಯೊಳಗೆ ಬರುವುದೇ ಇಲ್ಲ. ಅಪಾರ ತೆರಿಗೆ ವಸೂಲುಮಾಡುವ ಕೇಂದ್ರ ಸರ್ಕಾರದ ಆದಾಯವು ಅದರ ಖರ್ಚಿಗಿಂತಲೂ ಹೆಚ್ಚಿಗೆ ಇರುವುದರಿಂದ ಮತ್ತು ರಾಜ್ಯ ಸರ್ಕಾರಗಳ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿರುವುದರಿಂದ, ಸಂಪನ್ಮೂಲಗಳು ಕೇಂದ್ರದಿಂದ ಎಷ್ಟು ಪ್ರಮಾಣದಲ್ಲಿ ರಾಜ್ಯಗಳಿಗೆ ಪ್ರಾಪ್ತಿಯಾಗಬೇಕು (ಸಂಪನ್ಮೂಲಗಳ ವಿಕೇಂದ್ರೀಕರಣ) ಎಂಬುದನ್ನು ನಿರ್ಧರಿಸಲು ಐದು ವರ್ಷಕ್ಕೊಮ್ಮೆ ಹಣಕಾಸು ಆಯೋಗವನ್ನು ನಿಯೋಜಿಸಲಾಗುತ್ತದೆ. ಇದು ಸಂವಿಧಾನದ ಆದೇಶ ಮತ್ತು ಹಣಕಾಸು ಆಯೋಗದ ಕರ್ತವ್ಯ. ಆದ್ದರಿಂದ, ಕೇಂದ್ರ ಸರ್ಕಾರವು ತನ್ನ ಮೇಲಿರುವ ಜವಾಬ್ದಾರಿಯನ್ನು ನಿರ್ವಹಿಸಲು ಹೇಗೆ ಹಣ ಒದಗಿಸಿಕೊಳ್ಳಬೇಕು ಎಂಬುದು ಅದರ ಕೆಲಸ. ಅದು ಹಣಕಾಸು ಆಯೋಗದ ಕೆಲಸವಲ್ಲ. ಆದ್ದರಿಂದ, 15ನೇ ಹಣಕಾಸು ಆಯೋಗದ ಪರಾಮರ್ಶೆಯ ವ್ಯಾಪ್ತಿಗೆ ಜುಲೈ 29ರಂದು ಅಧಿಕವಾಗಿ ಸೇರಿಸಿರುವ ಈ ವಿಷಯವು ಸಂವಿಧಾನ ಬಾಹಿರವಾದದ್ದು. ರಾಜ್ಯಗಳ ಖರ್ಚಿನಲ್ಲಿ ತನಗೆ ಸಂಪನ್ಮೂಲ ಒದಗಿಸಿಕೊಳ್ಳಲು ಕೇಂದ್ರ ಸರ್ಕಾರವು ಹಣಕಾಸು ಆಯೋಗವನ್ನು ಬಳಸಿಕೊಳ್ಳುತ್ತಿದೆ.

ಪ್ರಾಸಂಗಿಕವಾಗಿ ಹೇಳುವುದಾದರೆ, ಒಂದು ವೇಳೆ, ಸಂವಿಧಾನಾತ್ಮಕವಾಗಿ ರಾಜ್ಯಗಳಿಗೆ ನಿಗದಿಪಡಿಸಿರುವ ಸಂಪನ್ಮೂಲಗಳಿಂದ ದೇಶದ ರಕ್ಷಣೆ ಮತ್ತು ಆಂತರಿಕ ಭದ್ರತೆಯ ವೆಚ್ಚಗಳನ್ನು ಒದಗಿಸಿಕೊಳ್ಳುವುದಾದರೆ, ಆಗ, ತರ್ಕದ ಪ್ರಕಾರವಾಗಿ, ರಕ್ಷಣೆ ಮತ್ತು ಆಂತರಿಕ ಭದ್ರತೆಯ ವಿಷಯಗಳನ್ನು ಕೇಂದ್ರದ ವ್ಯಾಪ್ತಿಗೆ ಒಳಪಟ್ಟ ವಿಷಯಗಳ ಪಟ್ಟಿಯಿಂದ ರಾಜ್ಯಗಳನ್ನೂ ಒಳಗೊಳ್ಳುವ ಸಹವರ್ತಿ ಪಟ್ಟಿಗೆ ಸೇರಿಸಬೇಕಾಗುತ್ತದೆ. ಅಂದರೆ, ರಫೇಲ್‌ನಂತಹ ರಕ್ಷಣಾ ಸಾಮಗ್ರಿಗಳನ್ನು ಕೊಳ್ಳುವ ಎಲ್ಲ ವ್ಯವಹಾರಗಳನ್ನು ನಿರ್ಧರಿಸುವ ಸಮಿತಿಗಳಲ್ಲಿ ರಾಜ್ಯ ಸರ್ಕಾರಗಳ ಪ್ರತಿನಿಧಿಗಳು ಇರಬೇಕಾಗುತ್ತದೆ: ಅವುಗಳ ಅವಶ್ಯಕತೆ ಇದೆಯೇ, ಅವುಗಳನ್ನು ಯಾವ ಯಾವ ಶರತ್ತುಗಳ ಮೇಲೆ ಎಲ್ಲಿ ತಯಾರಿಸಬೇಕು, ಅವುಗಳ ಖರ್ಚು ವೆಚ್ಚಗಳು ಮತ್ತು ಕಾರ್ಯ–ಬಳಕೆ ಮುಂತಾದ ವಿವರಗಳನ್ನು ಪರಿಶೀಲಿಸಬೇಕಾಗುತ್ತದೆ. ಆದರೆ, ರಕ್ಷಣೆಗೆ ಸಂಬಂಧಿಸಿದ ವಿಷಯಗಳನ್ನು ತನ್ನ ವಿಶೇಷ ಹಕ್ಕಾಗಿ ಕೇಂದ್ರ ಸರ್ಕಾರವೇ ನಿರ್ಧರಿಸುವಾಗ, ರಾಜ್ಯ ಸರ್ಕಾರಗಳ ಸಂಪನ್ಮೂಲಗಳಿಗೆ ಕೈ ಹಾಕುವ ಕ್ರಮವು ಹಕ್ಕುಗಳ ಮೂಲ ತತ್ವಗಳಿಗೆ ವಿರುದ್ಧವಾಗುತ್ತದೆ.

"ನಮಗೆ ಪ್ರಾತಿನಿಧ್ಯವಿಲ್ಲ ಎಂದರೆ ನಿಮಗೆ ತೆರಿಗೆ ಕೊಡುವುದಿಲ್ಲ" ಎಂಬ ಘೋಷಣೆಯ ಮೇಲೆ ಬ್ರಿಟಿಷ್ ಸಾಮ್ರಾಜ್ಯವಾದದ ವಿರುದ್ಧವಾಗಿ ಅಮೇರಿಕಾದ ಸ್ವಾತಂತ್ರ್ಯ ಸಂಗ್ರಾಮ ನಡೆದಿತ್ತು. ಈ ಹೋಲಿಕೆಯನ್ನು, ಭಾರತದಲ್ಲಿ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಸೇರಿದ ಸಂಪನ್ಮೂಲಗಳನ್ನು ಕಿತ್ತುಕೊಳ್ಳುವ ಪರಿಸ್ಥಿತಿಗೆ ಅನ್ವಯಿಸಿ, "ನಮ್ಮನ್ನು ಕೇಳದೆ ನೀವು ಮಾಡುವ ಖರ್ಚುಗಳಿಗೆ ನಮ್ಮ ಸಂಪನ್ಮೂಲಗಳು ನಿಮಗಿಲ್ಲ" ಎಂದು ರಾಜ್ಯಗಳು ಹೇಳುವುದು ಸರಿಯೇ. ಆದರೆ, ಅಂತಹ ಅಭಿಪ್ರಾಯಗಳನ್ನು ಕೇಂದ್ರವು ಸಹಿಸುವುದಿಲ್ಲ. ಅಮೇರಿಕಾದ ವಸಾಹತುಗಳೊಂದಿಗೆ ಬ್ರಿಟಿಷ್ ಸಾಮ್ರಾಜ್ಯವಾದವು ವರ್ತಿಸಿದ ರೀತಿಯಲ್ಲಿಯೇ ಕೇಂದ್ರವು ರಾಜ್ಯಗಳ ಸಂಪನ್ಮೂಲಗಳನ್ನು ಕಿತ್ತುಕೊಂಡು ಖರ್ಚುಮಾಡುವ ವಿಶೇಷ ಹಕ್ಕು ತನಗಿದೆ ಎಂದು ಭಾವಿಸಿದೆ.

ತೆರಿಗೆ ದರಗಳನ್ನು ಹೆಚ್ಚಿಸುವುದರ ಬದಲಾಗಿ ಸೆಸ್ ಮತ್ತು ಸರ್ಚಾರ್ಜ್ ದರಗಳನ್ನು ಬದಲಾಯಿಸಿ ಅಧಿಕ ಸಂಪನ್ಮೂಲ ಕ್ರೋಢೀಕರಿಸುವ ಮೂಲಕ ಕೇಂದ್ರ ಸರ್ಕಾರವು ಈಗಾಗಲೇ ರಾಜ್ಯ ಸರ್ಕಾರಗಳನ್ನು ವಂಚಿಸುತ್ತಿದೆ. ಈಗಿರುವ ಪದ್ಧತಿಯ ಪ್ರಕಾರ ಕೇಂದ್ರ ಸರ್ಕಾರವು ತೆರಿಗೆ ಆದಾಯವನ್ನು ಮಾತ್ರವೇ ರಾಜ್ಯಗಳೊಂದಿಗೆ ಹಂಚಿಕೊಳ್ಳುತ್ತದೆ; ಸೆಸ್ ಮತ್ತು ಸರ್ಚಾರ್ಜ್ ಮೂಲಕ ಪಡೆದ ಆದಾಯವನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳುವುದಿಲ್ಲ. ಈ ಅಂಶವನ್ನು ಒಂದು ಸಣ್ಣ ಉದಾಹರಣೆಯ ಮೂಲಕ ಸ್ಪಷ್ಟಪಡಿಸುವುದಾದರೆ, ಕೇಂದ್ರ ಸರ್ಕಾರವು ಒಂದು ವೇಳೆ ವರಮಾನ ತೆರಿಗೆಯ ದರಗಳನ್ನಷ್ಟೇ ಏರಿಸಿದಾಗ ಬರುವ ಆದಾಯವನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳಲೇ ಬೇಕಾಗುತ್ತದೆ. ಬದಲಿಗೆ, ಅಷ್ಟೇ ಆದಾಯವನ್ನು ಸೆಸ್ ಮತ್ತು ಸರ್ಚಾರ್ಜ್ ಮೂಲಕ ಪಡೆದುಕೊಂಡಾಗ ಆ ಆದಾಯವನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳಬೇಕಾಗಿಲ್ಲ.

ಕೇಂದ್ರ ಸರ್ಕಾರದ ಒಟ್ಟು ತೆರಿಗೆ ಆದಾಯದ ಶೇ.42ರಷ್ಟನ್ನು ರಾಜ್ಯಗಳಿಗೆ ಹಂಚಬೇಕೆಂದು 14ನೇ ಹಣಕಾಸು ಆಯೋಗವು ಶಿಫಾರಸು ಮಾಡಿತ್ತು. ಆದರೆ, ಕೇಂದ್ರವು ಅನೇಕ ರೀತಿಯ ಸೆಸ್ ಮತ್ತು ಸರ್ಚಾರ್ಜ್‌ಗಳ ಮೂಲಕ ಆದಾಯ ಹೆಚ್ಚಿಸಿಕೊಂಡ ಕಾರಣದಿಂದಾಗಿ ರಾಜ್ಯಗಳಿಗೆ ತಮ್ಮ ಪಾಲಿನ ಬಾಬ್ತು ವಾಸ್ತವಿಕವಾಗಿ ತಲುಪಿದ್ದು ಶೇ.32ರಷ್ಟೇ ಎಂದು ಅಂದಾಜು ಮಾಡಲಾಗಿದೆ. ಹಾಗಾಗಿ, ಕೇಂದ್ರ ಸರ್ಕಾರದ ಆದಾಯದ ಒಂದು ದೊಡ್ಡ ಭಾಗವು ರಾಜ್ಯಗಳ ಪಾಲಿಗೆ ಸಿಗುತ್ತಿಲ್ಲ.

ರಾಜ್ಯಗಳಿಗೆ ಎಸಗಿದ ಇಂತಹ ಮೋಸ ಮತ್ತು ಅದರ ಜೊತೆಯಲ್ಲಿ ರಾಜ್ಯಗಳನ್ನು ಆತುರಾತುರವಾಗಿ ಜಿಎಸ್‌ಟಿ ಆಳ್ವಿಕೆಗೆ ನೂಕಿರುವುದರಿಂದಾಗಿ ರಾಜ್ಯಗಳ ಆದಾಯಕ್ಕೆ ಭಾರಿ ಹೊಡೆತ ಬಿದ್ದಿದೆ. (ಜಿಎಸ್‌ಟಿ ಆಳ್ವಿಕೆಗೆ ಸ್ಥಿತ್ಯಂತರ ಹೊಂದುವುದು ಒಂದು ತಪ್ಪಿಸಿಕೊಳ್ಳಲಾರದ ಅನಿವಾರ್ಯತೆ ಎಂದು ಬಿಂಬಿಸಲಾಗಿದೆ. ಆದರೆ, ವಿಶ್ವದ ಅತಿ ದೊಡ್ಡ ಬಂಡವಾಳಶಾಹಿ ದೇಶ ಅಮೇರಿಕಾ ನಿರ್ಭಯವಾಗಿ ಜಿಎಸ್‌ಟಿ ಆಳ್ವಿಕೆಗೆ ಸ್ಥಿತ್ಯಂತರಗೊಳ್ಳದೆ ತಪ್ಪಿಸಿಕೊಂಡಿದೆ) ಇಂತಹ ಪರಿಸ್ಥಿತಿಯಲ್ಲಿ, ಕೇಂದ್ರ ಸರ್ಕಾರದ ಒಟ್ಟು ತೆರಿಗೆ ಆದಾಯದಲ್ಲಿ, ರಕ್ಷಣೆ ಮತ್ತು ಆಂತರಿಕ ಭದ್ರತೆಯ ವೆಚ್ಚಗಳನ್ನು ಬದಿಗಿರಿಸಿ ಉಳಿದದ್ದನ್ನು ರಾಜ್ಯಗಳಿಗೆ ಹಂಚಿದರೆ, ರಾಜ್ಯಗಳನ್ನು ತಿರುಕರ ಸ್ಥಿತಿಗೆ ಇಳಿಸಿದಂತಾಗುತ್ತದೆ.

ರಾಜ್ಯಗಳನ್ನು ಭಿಕ್ಷೆ ಎತ್ತುವ ಪರಿಸ್ಥಿತಿಗೆ ಇಳಿಸಿದಾಗ, ಅವು ಭಿಕ್ಷಾಪಾತ್ರೆ ಹಿಡಿದು ಸಹಜವಾಗಿ ಕೇಂದ್ರದ ಬಳಿ ಭಿಕ್ಷೆ ಕೇಳಲು ಬರುತ್ತವೆ. ಆಗ, ನೇರವಾಗಿ ಅಲ್ಲದಿದ್ದರೂ ಸೂಚ್ಯವಾಗಿ "ಶರತ್ತುಗಳು" ಬಳಕೆಯಾಗುತ್ತವೆ: 370ನೇ ವಿಧಿಯ ರದ್ದತಿಯ ಬಗ್ಗೆ ನೀವು ನಮಗೆ ಬೆಂಬಲ ಕೊಡಿ, ನಾವು ನಿಮಗೆ ಹಣ ಕೊಡುತ್ತೇವೆ; ವಿರೋಧ ಪಕ್ಷಗಳೊಂದಿಗಿನ ನಿಮ್ಮ ಸಂಬಂಧ ಕಡಿದುಕೊಳ್ಳಿ, ನಾವು ನಿಮಗೆ ಹಣ ಕೊಡುತ್ತೇವೆ; ಇತ್ಯಾದಿ.

ವಿಷಾದ ಹುಟ್ಟಿಸುವ ರೀತಿಯಲ್ಲಿ ಬಲಗೊಂಡಿರುವ ಹಿಂದುತ್ವದ ಕಥಾನಕದಲ್ಲಿ, ಧರ್ಮನಿರಪೇಕ್ಷತೆಯ ಮೇಲೆ ಅದು ನಡೆಸಿರುವ ದಾಳಿ ಮತ್ತು ಅದರೊಟ್ಟಿಗೆ ಪ್ರಜಾಪ್ರಭುತ್ವದ ಮತ್ತು ನಾಗರಿಕ ಹಕ್ಕುಗಳ ಮೊಟಕುಗೊಳಿಸುವಿಕೆಯೂ ಹಿಂಬಾಲಿಸಿದೆ ಎಂಬ ಅಂಶವನ್ನು ಟೀಕಾಕಾರು ಗುರುತಿಸುತ್ತಾರೆ. ಈ ಅಂಶಗಳ ಜೊತೆಯಲ್ಲಿ ಮತ್ತು ಅದೇ ಸಮಯದಲ್ಲಿ ದೇಶದ ಒಕ್ಕೂಟ ವ್ಯವಸ್ಥೆಯ ಮೇಲೆ ನಡೆದ ದಾಳಿಗಳು ಬಹುಪಾಲು ಗಮನಕ್ಕೆ ಬಾರದೆ ಹೋಗಿವೆ. ಈ ದಾಳಿಯ ಗಂಭೀರತೆ ಸಣ್ಣದೇನಲ್ಲ, ಏಕೆಂದರೆ, ಒಕ್ಕೂಟ ವ್ಯವಸ್ಥೆಯೇ ನಮ್ಮ ಸಂವಿಧಾನದ "ಮೂಲ ಸಂರಚನೆ".


ಒಕ್ಕೂಟ ವ್ಯವಸ್ಥೆಯ ಅಥವಾ ರಾಜ್ಯಗಳ ಹಕ್ಕುಗಳ ಮೇಲೆ ನಡೆದ ದಾಳಿ ಗಮನಕ್ಕೆ ಬಾರದಿರಲು (ತೀರ ಇತ್ತೀಚೆಗೆ ಮತ್ತು ಅದೂ ಸಹ ರಾಜಕೀಯ ವಲಯದಲ್ಲಿ ಮಾತ್ರ ಎಂಬುದನ್ನು ಹೊರತುಪಡಿಸಿದರೆ) ಒಂದು ಕಾರಣವಿದೆ. ಏನೆಂದರೆ, 14ನೇ ಹಣಕಾಸು ಆಯೋಗದ ಶಿಫಾರಸುಗಳ ನಂತರ ರಾಜ್ಯಗಳು ತಮಗೆ ಅನ್ಯಾಯವಾಗಿದೆ ಎಂದು ಇನ್ನು ಮುಂದೆ ದೂರುವಂತಿಲ್ಲ ಎನ್ನುವ ಸುಖ ಭಾವನೆ ಇತ್ತು. 14ನೇ ಹಣಕಾಸು ಆಯೋಗವು, ಅಲ್ಲಿಯ ತನಕ ಜಾರಿಯಲ್ಲಿದ್ದ, ಹಂಚಬಹುದಾದ ಹಣದ ಒಟ್ಟು ರಾಶಿಯಲ್ಲಿ (ಕೇಂದ್ರದ ಆದಾಯದ) ರಾಜ್ಯಗಳ ಪಾಲನ್ನು ಶೇ.32ಕ್ಕೆ ಬದಲಾಗಿ ಶೇ.42ಕ್ಕೆ ಏರಿಸಿತ್ತು. ಇದೊಂದು ಧಾರಾಳತನದ ಕೊಡುಗೆ ಎಂದು ಭಾವಿಸಲಾಗಿತ್ತು: ಇಷ್ಟೊಂದು ಪಾಲು ದೊರೆತ ಬಳಿಕವೂ ರಾಜ್ಯಗಳಿಗೆ ಹಣಕಾಸಿನ ತೊಂದರೆ ಇದ್ದರೆ ಅದು ಸಂಪನ್ಮೂಲಗಳ ಸಾಮಾನ್ಯ ಕೊರತೆಗೆ ಸಂಬಂಧಿಸುತ್ತದೆಯೇ ವಿನಃ, ಕೇಂದ್ರದ ಜಿಪುಣತನದಿಂದಾಗಿ ಅಲ್ಲ. ಕಡ್ಡಿಯನ್ನು ಗುಡ್ಡ ಮಾಡುವಷ್ಟು ಹುರುಪಿನಿಂದ 14ನೇ ಹಣಕಾಸು ಆಯೋಗದ ವರದಿಯನ್ನು ಮೋದಿ ಸರ್ಕಾರವು ಹಾಡಿ ಹೊಗಳಿತ್ತು.

ಸಂಪನ್ಮೂಲಗಳ ವಿಕೇಂದ್ರೀಕರಣದ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಕೇಂದ್ರವು ವಿವೇಚನೆಯ ಮೇರೆಗೆ ಕೊಡಮಾಡಿದ ಅನೇಕ ರೀತಿಯ ವರ್ಗಾವಣೆಗಳೂ ಸೇರಿದಂತೆ, 14ನೇ ಹಣಕಾಸು ಆಯೋಗದ ಶಿಫಾರಸುಗಳ ಮಾರ್ಗವಾಗಿ ಶೇ.42ರಷ್ಟು ವರ್ಗಾವಣೆಯಾಗಿದ್ದರೂ, ಕೇಂದ್ರದಿಂದ ರಾಜ್ಯಗಳಿಗೆ ವರ್ಗಾವಣೆಯಾದ ಸಂಪನ್ಮೂಲಗಳನ್ನು ಜಿಡಿಪಿಯ ಅನುಪಾತಕ್ಕೆ ಹೋಲಿಸಿದರೆ, ಸಂಪನ್ಮೂಲಗಳ ವರ್ಗಾವಣೆಯಲ್ಲಿ ಇಳಿಕೆಯಾಗಿದೆ. ಅಂದರೆ, ವರ್ಗಾವಣೆಗೆ ಸಂಬಂಧಿಸಿದ ಹಣಕಾಸು ಆಯೋಗದ ಆದೇಶವನ್ನು ಒಪ್ಪಿಕೊಂಡ ಸಮಯದಲ್ಲೇ ಕೇಂದ್ರವು ಬೇರೆ ಕೆಲವು ವರ್ಗಾವಣೆಗಳಿಗೆ ಕತ್ತರಿ ಹಾಕಿದೆ. ಮೋದಿ ಸರ್ಕಾರವು "ಸಹಕಾರಿ ಒಕ್ಕೂಟ ವ್ಯವಸ್ಥೆ"ಯ ತತ್ವಗಳನ್ನು ಅನುಸರಿಸುವುದಾಗಿ ಭಾರಿ ಗದ್ದಲ ಎಬ್ಬಿಸಿತು; 14ನೇ ಹಣಕಾಸು ಆಯೋಗದ ಶಿಫಾರಸುಗಳನ್ನು ತಾನು ಪ್ರಶ್ನಾತೀತವಾಗಿ ಒಪ್ಪಿಕೊಂಡಿರುವುದಾಗಿ ತನ್ನ ಪರಹಿತಚಿಂತನೆಯ ಬಗ್ಗೆ ಡಂಗುರ ಹೊಡೆಯಿತು; ಆದರೆ, ಯಾರಿಗೂ ಗೊತ್ತಾಗದಂತೆ ಒಳಗೊಳಗೇ ರಾಜ್ಯ ಸರ್ಕಾರಗಳನ್ನು ಹಿಂಡುತ್ತಿದೆ. ಈ ಹಿಂಡುವಿಕೆಯು, ಈಗ ಪ್ರಸ್ತಾಪಿಸಿರುವಂತೆ ರಾಜ್ಯಗಳ ಖರ್ಚಿನಲ್ಲಿ ದೇಶದ ರಕ್ಷಣೆ ಮತ್ತು ಆಂತರಿಕ ಭದ್ರತೆಯ ವೆಚ್ಚಗಳನ್ನು ಒದಗಿಸಿಕೊಂಡರೆ, ಮತ್ತಷ್ಟು ತೀವ್ರಗೊಳ್ಳಲಿದೆ.

ಹಂಚಬಹುದಾದ ಹಣದ ಒಟ್ಟು ರಾಶಿಯಿಂದ ತೆಗೆದು ಬದಿಗಿರಿಸಿದ ಹಣದಿಂದ ರಕ್ಷಣೆ ಮತ್ತು ಆಂತರಿಕ ಭದ್ರತೆಯ ವೆಚ್ಚಗಳಿಗಾಗಿ ಒಂದು ನಿಧಿಯನ್ನು ಹೊಂದುವ ಚಿಂತನೆಗೆ ಒಪ್ಪಿಗೆ ದೊರೆತರೆ, ಭುಜಬಲವನ್ನು ಪ್ರದರ್ಶಿಸುವ "ರಾಷ್ಟ್ರವಾದ"ದ ಬಗ್ಗೆ ಬಿಜೆಪಿಗೆ ಇರುವ ಗೀಳಿನ ಪರಿಸ್ಥಿತಿಯಲ್ಲಿ, ಈ ನಿಧಿಯ ಗಾತ್ರವು ವಿಸ್ತರಿಸುತ್ತಾ ಹೋಗುತ್ತದೆ. ಇಂತಹ ವಿಸ್ತರಣೆಗೆ, ಬಡವರ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಖರ್ಚುಗಳು ಹಿಂಡಿಕೆಯಾಗುತ್ತವೆ ಎಂಬ ನೆಲೆಯಲ್ಲಿ ಯಾರೇ ವಿರೋಧಿಸಿದರೂ ಅವರನ್ನು "ರಾಷ್ಟ್ರ–ವಿರೋಧಿ" ಎಂದು ಬಣ್ಣಿಸಲಾಗುತ್ತದೆ.

ಇಂತಹ ಒಂದು ಏರ್ಪಾಟು ಬಿಜೆಪಿಗೆ ಬಹಳ ಅನುಕೂಲಕರವಾಗುತ್ತದೆ. "ದೇಶದ ಬಗ್ಗೆ ಕಾಳಜಿ" ಹೊಂದಿರುವ ಕೀರ್ತಿ ತನಗೆ ಸಲ್ಲುತ್ತದೆ ಎಂದು ಅದು ಬಡಾಯಿ ಕೊಚ್ಚಿಕೊಳ್ಳಬಹುದು; "ದೇಶಪ್ರೇಮ"ದ ವೇಷ ತೊಟ್ಟು ಅದು ತನ್ನ ಲೋಪವನ್ನು ಮುಚ್ಚಿಹಾಕಿಕೊಳ್ಳಬಹುದು. ಆದರೆ, ಅವರ ಈ "ದೇಶಪ್ರೇಮ"ದ ಖರ್ಚನ್ನು ಬೇರೆ ಬೇರೆ ಪಕ್ಷಗಳಿಗೆ ಸೇರಿದ ರಾಜ್ಯ ಸರ್ಕಾರಗಳು ಭರಿಸಬೇಕಾಗುತ್ತದೆ.

ಸಂವಿಧಾನದ ಔಚಿತ್ಯವನ್ನು ಅಲ್ಪ ಸ್ವಲ್ಪವಾದರೂ ಉಳಿಸಿಕೊಳ್ಳಲು, ಸ್ವಾರ್ಥಸಾಧನೆಗಾಗಿ ಹಣಕಾಸು ಆಯೋಗದಂತಹ ಮತ್ತೊಂದು ಸಾಂವಿಧಾನಿಕ ಸಂಸ್ಥೆಯನ್ನು ಬಿಜೆಪಿಯ ಅಪಹರಣದಿಂದ ತಪ್ಪಿಸಲು ಮತ್ತು "ಅತಿರೇಕದ ರಾಷ್ಟ್ರವಾದ"ದ ಉತ್ತೇಕ್ಷಿತ ಬೇಡಿಕೆಗಳಿಂದ ಜನ ಸಾಮಾನ್ಯರ ಕಲ್ಯಾಣ ಕಾರ್ಯಕ್ರಮಗಳಿಗೆ ಧಕ್ಕೆಯಾಗುವುದನ್ನು ತಡೆಯುವ ಸಲುವಾಗಿ, ಕೇಂದ್ರದ ಈ ಮಹಾ ಪಾತಕದ ಕೃತ್ಯವನ್ನು ತಡೆಯುವುದು ಅತ್ಯಂತ ಅವಶ್ಯವಾದ ಕೆಲಸ.



ಜೀವ ವಿಮೆಯನ್ನು ರಾಷ್ಟ್ರೀಕೃತ ಉದ್ಯಮವಾಗಿ ಉಳಿಸೋಣ

ಭಾರತೀಯ ಜೀವ ವಿಮಾ ನಿಗಮ –ಎಲ್.ಐ.ಸಿ, ಇದೇ ಸೆಪ್ಟೆಂಬರ್ 1, 2019 ಕ್ಕೆ ತನ್ನ 'ರಾಷ್ಟ್ರೀಕೃತ ಜೀವ ವಿಮಾ ಅಸ್ತಿತ್ವ' ದ 64 ನೇ ವಸಂತ ಕ್ಕೆ ಕಾಲಿಟ್ಟಿದೆ. ಈ ಸಂಧರ್ಭದಲ್ಲಿ ಸೆಪ್ಟೆಂಬರ್ ಮೊದಲ ವಾರ " ವಿಮಾ ಸಪ್ತಾಹ " ವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಣೆ ಮಾಡಲಾಗುತ್ತದೆ. ರಾಷ್ಟೀ ಕೃತ ಜೀವ ವಿಮಾ ಸಂಸ್ಥೆಗೆ ಈ ಆಚರಣೆ ಸಂಭ್ರಮಣೋತ್ಸವು ಹೌದು. ಈ ಸಂಭ್ರಮದ ಸಮಯದಲ್ಲಿ ಇದರ ಅಭಿವೃದ್ಧಿಗೆ ಕಾರಣರಾದ, ಪ್ರಮುಖವಾಗಿ, ಪಾಲಿಸಿದಾರರು, ಪ್ರತಿನಿಧಿಗಳು, ಅಭಿವೃದ್ಧಿ ಅಧಿಕಾರಿಗಳು, ಹಾಗೂ ಸೇವಾ ನಿರತ ನೌಕರ ವರ್ಗ ಎಲ್ಲರೂ ಪಾಲ್ಗೊಂಡಿರುತ್ತಾರೆ. ಈ ವರ್ಷದ ಘೋಷಣೆ " ನಿಮ್ಮ ನಂಬಿಕೆ–ಸಂಸ್ಥೆಯ ನಿಧಿಯಾಗಿದೆ. (We Treasure, Your Trust)

ಈ ಸಂಭ್ರಮದ ಸಂದರ್ಭದಲ್ಲಿ, ಕಳೆದ 63 ವರ್ಷಗಳ ಕಾಲ ತಾನು ನಡೆದು ಬಂದ ಹಾದಿಯಲ್ಲಿ ಎದುರಾದ ಸವಾಲುಗಳನ್ನು ಹೇಗೆ ಮೆಟ್ಟಿ ನಿಂತು ತನಗೆ ವಹಿಸಿದ್ದ ಗುರುತರವಾದ ಜವಾಬ್ದಾರಿಗಳನ್ನು ಪರಿಣಾಮಕಾರಿ ಯಾಗಿ ನಿರ್ವಹಣೆ ಮಾಡಲಾಯಿತು ಎಂಬುದನ್ನು ವಿಮರ್ಶಾತ್ಮಕ ವಾಗಿ ಮೆಲಕು ಹಾಕುತ್ತಾ, ತನ್ನ ಮುಂದಿರುವ ಬೃಹತ್ತಾದ ಸವಾಲುಗಳಿಗೆ, ಪ್ರತಿ ಸವಾಲು ಒಡ್ಡಲು, ರಾಷ್ಟ್ರೀಕೃತ ಹಣಕಾಸು ಸಂಸ್ಥೆ ಯನ್ನು ಮತ್ತಷ್ಟು ಸಾಧನೆಗಳ ಮೂಲಕ, ರಾಷ್ಟದ ಅಭಿವೃದ್ಧಿ ಯಲ್ಲಿ ತನ್ನ ಮಹೋನ್ನತ ಕೊಡುಗೆಯನ್ನು ಸಮರ್ಪಕವಾಗಿ ಅರ್ಪಿಸುತ್ತಾ, ಆ ನಿಟ್ಟಿನಲ್ಲಿ, ಜನತೆಯ ನಂಬಿಕೆ ಮತ್ತು ರಾಷ್ಟ್ರದ ವಿಶ್ವಾಸಾರ್ಹತೆ ಯ ಸುವರ್ಣ ಸಂಸ್ಥೆ ಯಾಗಿ, ತನ್ನ ಅಸ್ತಿತ್ವದ 64 ನೇ ವಸಂತಕ್ಕೆ ದಾಪುಗಾಲಿಟ್ಟಿದೆ.

ಜೀವ ವಿಮೆಯ ರಾಷ್ಟ್ರೀಕರಣ

1956 ರ, ಜನವರಿ 19 ರಂದು, ಅಂದಿನ ಹಣಕಾಸು ಮಂತ್ರಿ, ಸಿ.ಡಿ.ದೇಶ್ ಮುಖ್ ರವರ ನೇತೃತ್ವದಲ್ಲಿ ಪಾರ್ಲಿಮೆಂಟ್ ನಲ್ಲಿ ಕಾಯಿದೆ' ಯನ್ನು ರೂಪಿಸಲಾಯಿತು. ಆ ಮೂಲಕ ಜೀವ ವಿಮಾ ವ್ಯವಹಾರವನ್ನು ರಾಷ್ಟ್ರೀಕರಣ ಮಾಡಿ, ಈ ರಾಷ್ಟ್ರೀಕೃತ ಭಾರತೀಯ ಜೀವ ವಿಮಾ ನಿಗಮ (ಎಲ್.ಐ.ಸಿ) ವನ್ನು ಸ್ಥಾಪಿಸಲು ಅನುವು ಮಾಡಿಕೊಡಲಾಯಿತು. ಸೆಪ್ಟೆಂಬರ್ 1, 1956 ರಂದು " ಎಲ್.ಐ.ಸಿ. ಆಫ್ ಇಂಡಿಯಾ " ಅಸ್ತಿತ್ವಕ್ಕೆ ಬಂದಿತು. ಇದಕ್ಕೆ ಮುನ್ನಾ, ಸುಮಾರು 246 ಕ್ಕೂ ಹೆಚ್ಚು ಖಾಸಗಿ ಕಂಪನಿಗಳು ಈ ವಿಮಾ ವ್ಯವಹಾರದಲ್ಲಿ, ಪಾಲಿಸಿದಾರರ ಉಳಿತಾಯದ ಹಣವನ್ನು ವಂಚಿಸಿ, ಮೊಸವೆಸಗುತ್ತಿದ್ದರು. ಆ ಹಿನ್ನೆಲೆಯಲ್ಲಿ ಜೀವ ವಿಮೆ ವ್ಯಾಪಾರ ವಹಿವಾಟು ಗಳನ್ನು ರಾಷ್ಟ್ರೀಕರಣ ತೆಕ್ಕೆಗೆ ತರಲಾಯಿತು ಎಂಬುದನ್ನು ಮರೆಯಬಾರದು.

ಈ ರಾಷ್ಟ್ರೀಕೃತ ಭಾರತೀಯ ಜೀವ ವಿಮಾ ನಿಗಮ ಸ್ಥಾಪನೆಯಾದ ಅಂದಿನಿಂದ– ಇಲ್ಲಿಯವರೆಗೂ ಇದೊಂದು ನಮ್ಮ ಭಾರತ ದೇಶದ ಸಾರ್ವಜನಿಕ ಸಂಸ್ಥೆ ಯಾಗಿಯೇ ಅಸ್ತಿತ್ವದಲ್ಲಿರುವ ಏಕೈಕ "ಸುವರ್ಣ ಸಂಸ್ಥೆ" ಭಾರತೀಯರ ಅಂದರೆ, ನಮ್ಮ ನಿಮ್ಮೆಲ್ಲರ ಅಚ್ಚು ಮೆಚ್ಚಿನ ವಿಶ್ವಾಸಾರ್ಹ ಸರಕಾರಿ ಸಂಸ್ಥೆಯಾಗಿ ಉಳಿದಿದೆ.

ಎಲ್.ಐ.ಸಿ ಸ್ಥಾಪನೆಯ ಸಂದರ್ಭದಲ್ಲಿ, ಅಂದಿನ ಪ್ರಧಾನಿ ಜವಹಾರ್ ಲಾಲ್ ನೆಹರು ಅವರು, "ಸಾರ್ವಜನಿಕ ಸಂಸ್ಥೆಗಳು ನಮ್ಮ ರಾಷ್ಟ್ರದ ಆಧುನಿಕ ದೇವಾಲಯಗಳು, ಪ್ರಮುಖ ವಾಗಿ ಭಾರತದ ಆರ್ಥಿಕ ತೆಯ ಬೆನ್ನೆಲೆಬುಗಳಾಗಿ ಕಾರ್ಯನಿರ್ವಹಿಸುತ್ತವೆ." ಎಂಬ ನಂಬಿಕೆಯನ್ನು ವ್ಯಕ್ತಪಡಿಸಿದರು.

ಆ ನಿಟ್ಟಿನಲ್ಲಿ, ಜೀವ ವಿಮೆಯು ತನ್ನ ಸಂದೇಶ ವನ್ನು ದೇಶದ ಮೂಲೆ ಮೂಲೆಗೂ ಪಸರಿಸುವ ಮೂಲಕ, ಜನತೆಯ ಸಣ್ಣ ಉಳಿತಾಯವನ್ನು' ಜೀವ ವಿಮಾ ಪ್ರೀಮಿಯಂ ಮೂಲಕ ಸಂಗ್ರಹಿಸಿ, ಜನತೆಯ ಜೀವಕ್ಕೆ ಭದ್ರತೆ ಯನ್ನು ಒದಗಿಸಿ ಎಲ್ಲಾ ಮನೆ–ಮನಸ್ಸು ಗಳನ್ನು ಬೆಳಗಿಸುವಂತಾಗ ಬೇಕು. ಜೊತೆಗೆ, ಇದರ ದೀರ್ಘಕಾಲದ ಪ್ರೀಮಿಯಂ ಅನ್ನು ಕ್ರೋಢೀಕರಿಸಿ, ರಾಷ್ಟ್ರದ ಅಭಿವೃದ್ಧಿಗೆ ತೊಡಗಿಸುವ ದೊಡ್ಡ ಜವಾಬ್ದಾರಿಗಳನ್ನು ಪಾರ್ಲಿಮೆಂಟಿನ ಕಾಯಿದೆಯ ಮೂಲಕ ಎಲ್.ಐ.ಸಿ ಗೆ ವಹಿಸಿ ಕೊಡಲಾಯಿತು.

ಈ ಎಲ್ಲಾ ಜವಾಬ್ದಾರಿಗಳನ್ನು ಇಲ್ಲಿಯವರೆಗೂ ಎಲ್.ಐ.ಸಿ ಪರಿಪೂರ್ಣ ವಾಗಿ ಸಾಕಾರಗೊಳಿಸಿಕೊಂಡು ಬಂದಿದೆ ಎಂದು ದಾಖಲಿಸಲು ಹೆಮ್ಮೆಯಾಗುತ್ತದೆ.

ಆರಂಭದಲ್ಲಿ, ಎಲ್ .ಐ.ಸಿ. ಯು, ರೂ.5 ಕೋಟಿ ಸಣ್ಣದಾದ ಸರ್ಕಾರದ ಬಂಡವಾಳ ಹೂಡಿಕೆಯ ಮೂಲಕ, ಜೀವ ವಿಮೆಯ ವಹಿವಾಟು ಆರಂಭಿಸಿತು. ಕಳೆದ 63 ವರ್ಷಗಳಲ್ಲಿ, ಸುಮಾರು ರೂ.30 ಲಕ್ಷ ಕೋಟಿ ಹಣವನ್ನು ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಯ ಯೋಜನೆ ಗಳಲ್ಲಿ ವಿನಿಯೋಗಿಸಿದೆ. ಇದನ್ನು ಚಿನ್ನದ ಮೊಟ್ಟೆ ಇಡುವ ಬಾತು ಕೋಳಿಯೆಂದು ಕರೆಯುತ್ತಾರೆ.

ಎಲ್.ಐ.ಸಿ ಯ ಅದ್ಭುತ ಸಾಧನೆಗಳಿಗೆ : ಎಲ್.ಐ.ಸಿ.ಯೇ ಸರಿಸಾಟಿ

ರಾಷ್ಟ್ರೀಕರಣ ಗೊಂಡ ಸಂದರ್ಭದಲ್ಲಿ ಇದರ ಒಟ್ಟು ಜೀವ ನಿಧಿ ರೂ.440 ಕೋಟಿಯಿತ್ತು. ಇಂದು ರೂ.31.11 ಲಕ್ಷ ಕೋಟಿಗಳಷ್ಟು ಜೀವ ನಿಧಿಯನ್ನು ಹೊಂದಿರುವ ಅತಿ ದೊಡ್ಡ ಹಣಕಾಸು ಸಂಸ್ಥೆಯಾಗಿ ಈ 63 ಸಂವತ್ಸರ ಗಳಲ್ಲಿ ಹೆಮ್ಮರವಾಗಿ ಬೆಳೆದು ಅಭಿವೃದ್ಧಿ ಹೊಂದಿದೆ. 1957 ರಲ್ಲಿ 55 ಲಕ್ಷ ಪಾಲಿಸಿಗಳನ್ನು ಹೊಂದಿದ್ದ ಎಲ್.ಐ.ಸಿ. ಪ್ರಸ್ತುತ ಸುಮಾರು 30 ಕೋಟಿ ವೈಯಕ್ತಿಕ ಪಾಲಿಸಿಗಳು ಹಾಗೂ 12 ಕೋಟಿ ಗುಂಪು ವಿಮಾ ಪಾಲಿಸಿಗಳನ್ನು ಹೊಂದಿದ್ದು, ಒಟ್ಟು ಸುಮಾರು 42 ಕೋಟಿ ಪಾಲಿಸಿಗಳನ್ನು ಹೊಂದಿದೆ. ಇದು ಜಗತ್ತಿನ ಭೂಪಟದ ರಾಷ್ಟಗಳಲ್ಲಿ 4 ನೇ ಅತಿ ದೊಡ್ಡ ಜನಸಂಖ್ಯೆ ಹೊಂದಿರುವ ಬೃಹತ್ ಸಂಸ್ಥೆ ಯಾಗಿದೆ. ಪ್ರಸ್ತುತ ಭಾರತದಲ್ಲಿ ಶೇ.50 ರಷ್ಟು ಜನ ಸಂಖ್ಯೆ ಮಾತ್ರವೇ, ತಮ್ಮ ಉಳಿತಾಯದ ಹಣದಿಂದ ವಿಮೆ ಕೊಂಡುಕೊಳ್ಳುವ ಸಾಮಾರ್ಥ್ಯ ಹೊಂದಿದ್ದಾರೆ ಎಂಬ ಒಂದು ಸಮೀಕ್ಷೆಯ ಅಂದಾಜಿದೆ. ಇಂತಹ ಪರಿಸ್ಥಿತಿ ಯಲ್ಲಿಯೂ, ಸುಮಾರು 42 ಕೋಟಿ ಜನರಿಗೆ ಜೀವ ವಿಮೆಯ ಸೌಲಭ್ಯವನ್ನು ತಲುಪುವಂತೆ ಕಾರ್ಯನಿರ್ವಹಿಸಿರುವ ಎಲ್.ಐ.ಸಿ ಯ, ಅದ್ಬುತ ಸಾಧನೆಗೆ, ಎಲ್.ಸಿ.ಐ ಅಲ್ಲದೆ ಬೇರೆ ಯಾವುದೇ ಸಂಸ್ಥೆ ಇದಕ್ಕೆ ಸರಿಸಾಟಿಯಾಗಲಾರದು. ಎಂದಿಗೂ ಪಾಲಿಸಿಗಳ ಇತ್ಯರ್ಥ ದಲ್ಲಿ ಹಿಂದೆ ಬಿದ್ದಿಲ್ಲ. ಶೇ.99 ರಷ್ಟು ಪಾಲಿಸಿ ಇತ್ಯರ್ಥ ಇದರ ದಕ್ಷತೆಗೆ ಹಿಡಿದ ಕನ್ನಡಿ. ಕಿಂಚಿತ್ತು ಭ್ರಷ್ಟಾಚಾರ ವಿಲ್ಲದ, ವಿಶ್ವದಲ್ಲೇ ಅತ್ಯಂತ ದೊಡ್ಡ ಸಾಧನೆಗೈದಿರುವ ಏಕೈಕ ರಾಷ್ಟ್ರೀಕೃತ ಜೀವ ವಿಮಾ ಸಂಸ್ಥೆ ಈ ಎಲ್.ಐ.ಸಿ.

1999 ರಲ್ಲಿ ಮುಕ್ತ ಮಾರುಕಟ್ಟೆಗೆ :
ವಿಮಾ ವಹಿವಾಟು ಪುನಃ ತೆರವು

ಬಿಜೆಪಿ ನೇತೃತ್ವದ ಪ್ರಧಾನಿ ವಾಜಪೇಯಿ ಸರ್ಕಾರ 1999 ರಲ್ಲಿ ದೇಶಿಯ ಬಂಡವಾಳಶಾಹಿ ಹಾಗೂ ವಿದೇಶಿ ಬಹುರಾಷ್ಟ್ರೀಯ ಬಂಡವಾಳಿಗರ ಒತ್ತಡಕ್ಕೆ ಮಣಿದು " ವಿಮಾ ನಿಯಂತ್ರಣ ಅಭಿವೃದ್ಧಿ ಪ್ರಾಧಿಕಾರ " (ಐ.ಆರ್.ಡಿ.ಎ) ಕಾಯಿದೆಯನ್ನು ಅನುಷ್ಟಾನಕ್ಕೆ ತಂದಿತು. ಈ ನಿಟ್ಟಿನಲ್ಲಿ ಪುನಃ ಭಾರತೀಯ ವಿಮಾ ಮಾರುಕಟ್ಟೆ ಯನ್ನು ಮುಕ್ತ ಗೊಳಿಸಲಾಯಿತು. ಶೇ.26 ರಷ್ಟು ವಿದೇಶಿ ನೇರ ಬಂಡವಾಳ (ಎಫ್.ಡಿ.ಐ) ಆಹ್ವಾನಿಸುವ ಮೂಲಕ, ದೇಶಿಯ–ಬಹುರಾಷ್ಟ್ರೀಯ ಕಂಪನಿಗಳನ್ನು ಒಳಗೊಂಡ ಜಂಟೀ ಉದ್ಯಮ ಗಳ ಸ್ಥಾಪನೆಗೆ ಅವಕಾಶವನ್ನು ಕಲ್ಪಿಸಿ ಕೊಡಲಾಯಿತು. 2015 ರಲ್ಲಿ ಮತ್ತೊಮ್ಮೆ, ಎಫ್.ಡಿ.ಐ ಮಿತಿಯನ್ನು ಶೇ.49 ಕ್ಕೆ ಏರಿಸಲಾಯಿತು. ಹಾಗೆಯೇ, ಅಂದಿನ ಯುಎಸ್ ನ ಅಧ್ಯಕ್ಷ ಬರಾಕ್ ಒಬಾಮಾ ರವರಿಗೆ, ಕೆಂಪು ಕಾರ್ಪೆಟ್ ಹಾಸಿ ಆಹ್ವಾನಿಸಲಾಯಿತು.

ಹೀಗೆ ಇಲ್ಲಿಯವರೆಗೂ, 23 ದೇಶಿಯ ಹಾಗೂ ವಿದೇಶಿ ಕಂಪನಿಗಳು ಜಂಟೀ ಉದ್ಯಮಗಳಾಗಿ ಕಳೆದ 19 ವರ್ಷಗಳಿಂದಲೂ, ಭಾರತೀಯ ವಿಮಾ ಮಾರುಕಟ್ಟೆಯಲ್ಲಿ ತಮ್ಮ ವ್ಯಾಪಾರ–ವಹಿವಾಟು ಗಳನ್ನು ನಡೆಸಿಕೊಂಡು ಬರುತ್ತಿವೆ. ಆದರೆ, ವಿಮಾ ಮಾರುಕಟ್ಟೆಯಲ್ಲಿ ಎಲ್.ಐ.ಸಿ.ಯ ಪ್ರಾಬಲ್ಯ ಮಾತ್ರ, ಮೇರು ಪರ್ವತದಂತೆ ಸದೃಡವಾಗಿದೆ. ಪ್ರೀಮಿಯಂ ಆದಾಯದಲ್ಲಿ ಶೇ.73 ರಷ್ಟು ಮಾರುಕಟ್ಟೆ ಯ ಪಾಲನ್ನು ಎಲ್.ಐ.ಸಿಯೇ ಹೊಂದಿದೆ. ಇದಕ್ಕೆ ಕಾರಣ ಎಲ್.ಐ.ಸಿ.ಯ ಉತ್ಪನ್ನಗಳು ಈ ದೇಶದ ಜನರ ಪ್ರಬಲ ಬ್ರಾಂಡ್ ಗಳಾಗಿರುವುದು. ಕಳೆದ ವಾರ್ಷಿಕ 2018–2019 ಅವಧಿಯಲ್ಲಿ, ಎಲ್.ಐ.ಸಿ.ಯ ಮೊದಲ ಪ್ರೀಮಿಯಂ ಆದಾಯ ರೂ.1,42,191.19 ಕೋಟಿಗಳು. ಒಟ್ಟು ಪ್ರೀಮಿಯಂ ಆದಾಯ ರೂ.3,37,185.11 ಕೋಟಿಗಳು. ನಿಗಮದ ಒಟ್ಟು ಆದಾಯ ರೂ.5,23,611.11 ಕೋಟಿಗಳು. ಮಾರುಕಟ್ಟೆ ಪಾಲು ಪ್ರೀಮಿಯಂ ನಲ್ಲಿ ಶೇ.66, ಇದು 2017–2018 ಕ್ಕೆ ಹೋಲಿಸಿದರೆ ಸ್ವಲ್ಪ ಕುಸಿದಿದೆಯಾದರು, ಪ್ರಸಕ್ತ 2019–2020 ರ ವಾರ್ಷಿಕದ ಮೊದಲ ಈ ನಾಲ್ಕು ತಿಂಗಳಲ್ಲಿ ತನ್ನ ಪ್ರೀಮಿಯಂ ಮಾರುಕಟ್ಟೆಯ ಪಾಲನ್ನು ಶೇ.73.17 ರಷ್ಟು ಹೆಚ್ಚಿಸಿಕೊಂಡು, ಮತ್ತೆ ಸ್ಪರ್ಧಾ ಮಾರುಕಟ್ಟೆಯಲ್ಲಿ ತನ್ನ ಪ್ರಬುದ್ಧ ಪ್ರಾಬಲ್ಯ ವನ್ನು ಉಳಿಸಿಕೊಂಡಿದೆ. ಕಳೆದ 19 ವರ್ಷಗಳಲ್ಲಿ ಸ್ಪರ್ಧೆಯಲ್ಲಿರುವ 23 ಖಾಸಗಿ ಕಂಪನಿಗಳಲ್ಲಿ ಎಚ್.ಡಿ.ಎಫ್.ಸಿ ಲೈಫ್ ಮತ್ತು ಇದರ ವಿದೇಶಿ ಜೊತೆಗಾರ ಸಂಸ್ಥೆ ಸ್ಟಾಂಡರ್ಡ್ ಲೈಫ್ ಶೇ.6.56 ಮಾರುಕಟ್ಟೆ ಪಾಲನ್ನು ಹೊಂದಿದ್ದು. ಎಲ್.ಐ.ಸಿ.ಯ ನಂತರದ ಎರಡನೇ ಸ್ಥಾನದಲ್ಲಿದೆ. ಉಳಿದಂತೆ, 7 ಖಾಸಗಿ ಕಂಪನಿಗಳು ಮಾತ್ರವೇ ಶೇ.1 ರಷ್ಟು ಮಾರುಕಟ್ಟೆ ಪಾಲುದಾರಿಕೆ ದಾಟಿವೆ. ಮಿಕ್ಕುಳಿದ 15 ಕಂಪನಿಗಳು ತೀವ್ರ ನಿಗಾ ಘಟಕ (ಐ.ಸಿ.ಯು) ಗಳಲ್ಲಿದ್ದು, ಮುಂದಿನ ದಿನಗಳಲ್ಲಿ ನೆಲ ಕಚ್ಚುವ ಸ್ಥಿತಿಯಲ್ಲಿವೆ. ಈ ಕಾರಣದಿಂದಲೇ, ಎಲ್.ಐ.ಸಿ ಯನ್ನು ಶೇರು ಮಾರುಕಟ್ಟೆಯಲ್ಲಿ ಪಟ್ಟಿ ಮಾಡುವ ಹುನ್ನಾರ ನಡೆಯುತ್ತಿದೆ.

ಸ್ಪರ್ದಾ ಅಥವಾ ಮುಕ್ತ ಮಾರುಕಟ್ಟೆಗೆ , ಜೀವ ವಿಮೆಯನ್ನು ತೆರೆಯವ ಸಂದರ್ಭದಲ್ಲಿ, ಅಂದಿನ ಆಳುವ ವರ್ಗಗಳು ನೀಡಿದ ಕಾರಣಗಳೆಂದರೆ, ಎಲ್.ಐ.ಸಿ ಒಂದೇ ಸಂಸ್ಥೆ ಜೀವ ವಿಮಾ ಮಾರುಕಟ್ಟೆಯಲ್ಲಿ ಏಕಸ್ವಾಮ್ಯತೆ ಹೊಂದಿರುವುದರಿಂದ, ದೇಶದ ಒಟ್ಟಾರೆಯ ವಿಮಾ ಮಾರುಕಟ್ಟೆ ಒಳಗೆ " ನುಗ್ಗಲು ಮತ್ತು ಅದರ ಸಾಂದ್ರತೆಯ" ಆಳವನ್ನು ಅಳೆಯಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ, ವಿಮಾ ಮಾರುಕಟ್ಟೆ ವಿಸ್ತರಣೆಗಾಗಿ ಮುಕ್ತ ಮಾರುಕಟ್ಟೆಗೆ ತೆರಯಲಾಗುತ್ತಿದೆ ಎಂಬ ತಮ್ಮ ವಾದವನ್ನು ಸಮರ್ಥಿಸಿಕೊಂಡಿದ್ದರು. ಸರಳವಾಗಿ ಅರ್ಥೈಸಿಕೊಳ್ಳ ಬೇಕೆಂದರೆ, ವಿಮೆ ಕೊಳ್ಳುವ ಸಾಮರ್ಥ್ಯ ಹೊಂದಿರುವ ಎಲ್ಲರಿಗೂ ಎಲ್.ಐ.ಸಿ ಒಂದೇ ಸಂಸ್ಥೆ ಯಿಂದ ವಿಮೆ ತಲುಪಿಸಲು ಅಸಾಧ್ಯ. ಎಲ್.ಐ.ಸಿ. ಯ ಬಗ್ಗೆ ಇದೊಂದು ' ಮುದಿ ಬಿಳಿ ಆನೆ ' ಸ್ಪರ್ಧಾ ಮಾರುಕಟ್ಟೆಯಲ್ಲಿ ನೃತ್ಯವಾಡಲು ಇದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ವಿಮಾ ಮಾರುಕಟ್ಟೆ ಯಲ್ಲಿ ಹಲವು ಬಗೆಯ ಖಾಸಗಿ ಮತ್ತು ವಿದೇಶಿ ಕಂಪನಿಗಳನ್ನು ತೆರೆಯುವುದು ಅಗತ್ಯವಿದೆ ಎಂದು ವಾದಿಸಿದರು. ಈ ಎಲ್ಲಾ ವಾದಗಳನ್ನು ರಾಷ್ಟ್ರೀಕೃತ ಎಲ್.ಐ.ಸಿ.ಯು ತನ್ನ ಅಭೂತಪೂರ್ವ ಸಾಧನೆಯ ಮೂಲಕ ಇವರಿಗೆ ಉತ್ತರ ನೀಡುತ್ತಲಿದೆ.

ವಿಮಾ ಕ್ಷೇತ್ರದ ವಿಸ್ತಾರ ಅಂದರೆ, ಆಳ–ಉದ್ದ–ಸಾಂದ್ರತೆಯ ಬೆಳವಣಿಗೆ ಯನ್ನು ಹೆಚ್ಚಿಸಲು ಮತ್ತು ದೇಶದ ಮೂಲ ಸೌಕರ್ಯ ಅಭಿವೃದ್ಧಿಗೆ ಸಹಾಯ ಮಾಡಲು, ಎಫ್.ಡಿ.ಐ ಮಿಲಿಯನ್ ಡಾಲರ್ ಗಳಲ್ಲಿ ಹರಿದು ಬರತ್ತದೆ ಎಂಬ ಎಲ್ಲಾ ವಾದಗಳು ಇಂದು ಟೊಳ್ಳಾಗಿವೆ. ನುಗ್ಗುವ ಮತ್ತು ಸಾಂದ್ರತೆಯ ವಿಸ್ತಾರವಿರಲಿ, ಇದ್ದಂತಹ ಮಾರುಕಟ್ಟಯನ್ನೇ ಕಬಳಿಸುವ ಕಾರ್ಯ ದಲ್ಲಿ ಖಾಸಗಿ ಕಂಪನಿಗಳು

ಪುಟ 15 ಕ್ಕೆ

ಜೀವ ವಿಮೆಯನ್ನು ರಾಷ್ಟ್ರೀಕೃತ ಉದ್ಯಮವಾಗಿ ಉಳಿಸೋಣ...... ಪುಟ 14 ರಿಂದ

ನಿರತವಾಗಿವೆ. ವಿಮಾ ವಲಯವನ್ನು ತೆರೆದಾಗ, ನಮ್ಮ ದೇಶಕ್ಕೆ ಇಲ್ಲಿಯ ವರೆವಿಗೂ ಬಂದ ಒಟ್ಟು ಎಫ್.ಡಿ.ಐ. ರೂ.13,068 ಕೋಟಿಗಳು. ಅದರಲ್ಲಿ ಜೀವ ವಿಮೆಯಲ್ಲಿ ರೂ.9,566 ಕೋಟಿ. ಸಾಮಾನ್ಯ ವಿಮೆ ಯಲ್ಲಿ ರೂ.3,503 ಕೋಟಿಗಳು ಮಾತ್ರ. ಆದರೆ, ಈ ಹಣವನ್ನು ದೇಶದ ಅಭಿವೃದ್ಧಿ ಕಾರ್ಯಗಳಿಗೆ ನೀಡಿಲ್ಲ. ಬದಲಿಗೆ, ಆಯಾ ಖಾಸಗಿ ಕಂಪನಿಗಳ ಸ್ಥಾಪನೆಗಾಗಿ ಮತ್ತು ಅವುಗಳ ಇನ್ನಿತರೆ ವೆಚ್ಚಗಳಿಗಾಗಿ ವಿನಿಯೋಗಿಸಿ ಕೊಳ್ಳಲಾಗಿದೆ. ಹೆಚ್ಚಿನ ಎಫ್.ಡಿ.ಐ. ಹೂಡಿಕೆ ಶೇರು ಮಾರುಕಟ್ಟೆಯ ಜೂಜುಗಾರಿಕೆ ಯಲ್ಲಿ ಹೂಡಲಾಗಿದೆ. ಇದು, ನೀರಿನ ಮೇಲಿನ ಗುಳ್ಳೆ ಇದ್ದ ಹಾಗೆ ವಿನಹ, ಅಭಿವೃದ್ಧಿ ಕಾರ್ಯಗಳಿಗೆ ಹೂಡಿಕೆಯಾಗುವುದಿಲ್ಲ. ಇದು, ವ್ಯೂಹಾತ್ಮಕ ಹೂಡಿಕೆಗಳಲ್ಲಿ, ತೊಡಗಿಸಿ ಕೊಳ್ಳುತ್ತವೆ. ಆನಂತರ, ವಿಲೀನ ಮತ್ತು ಸ್ವಾದೀನ ಪ್ರಕ್ರಿಯೆಯ ಮೂಲಕ, ಭಾರತೀಯ ಸಂಸ್ಥೆಗಳನ್ನು ನಾಶಗೊಳಿಸಿ, ಮಾರುಕಟ್ಟೆ ಯನ್ನು ಸಂಪೂರ್ಣವಾಗಿ ತಮ್ಮ ಸ್ವಾದೀನಕ್ಕೆ ತೆಗೆದುಕೊಳ್ಳುವ ಹುನ್ನಾರವಾಗಿರುತ್ತದೆ.

ಎಲ್.ಐ.ಸಿ. ಈಗಾಗಲೇ ರೂ. 7.02 ಲಕ್ಷ ಕೋಟಿ ರೂಗಳನ್ನು ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳಿಗೆ ನೀಡಿದೆ.

ಇದೀಗ, ಮತ್ತೆ, ಎಲ್.ಐ.ಸಿ ಯನ್ನು ಖಾಸಗೀಕರಣ ಮಾಡುವ ಮೊದಲ ಹೆಜ್ಜೆಯಾಗಿ, ಶೇರು ಮಾರುಕಟ್ಟೆಯಲ್ಲಿ ಪಟ್ಟಿ ಮಾಡುವುದಾಗಿ ಹೇಳಿಕೆ ನೀಡಿದ್ದಾರೆ. ಇದು ಅಶುಭ ಸಂಕೇತವಾಗಿದೆ. ಇಂತಹ ನಿರ್ಧಾರ ಗಳು ಪಾಲಿಸಿದಾರರ ಹಿತಾಸಕ್ತಿಯನ್ನು ಅಪಾಯಕ್ಕೆ ದೂಡುತ್ತದೆ ಹಾಗೂ ದೇಶದ ಅಭಿವೃದ್ಧಿಗೆ ಧಕ್ಕೆಯುಂಟಾಗುತ್ತದೆ. 1980 ರಿಂದಲೂ, ಭಾರತೀಯ ವಿಮಾ ಉದ್ಯಮವನ್ನು ಸಡಿಲಗೊಳಿಸಲು, ಅಂತರಾಷ್ಟ್ರೀಯ ಹಣಕಾಸು ಬಂಡವಾಳದಿಂದ ಹತಾಶ ಪ್ರಯತ್ನ ಗಳು ನಡೆಯುತ್ತಲೇ ಇವೆ. ಆನಂತರ, 1989 ರಲ್ಲಿ, ಯುಎಸ್ ಪ್ರತಿನಿಧಿ ಕಾರ್ಲಾಸ್ ಹಿಲ್ಸ್, ಸೂಪರ್ 301 ವಿಶೇಷ ವ್ಯಾಪಾರ ಕಾಯಿದೆಯ ನಿರ್ಬಂಧಗಳ ಮೂಲಕ ಭಾರತ ಸರ್ಕಾರ ಕ್ಕೆ ಬೆದರಿಕೆ ಹಾಕಿದ್ದರು. ಅಂದು, ಎಡ ಪಕ್ಷಗಳ ಬೆಂಬಲ ದೊಂದಿಗೆ ಸಮ್ಮಿಶ್ರ ಸರಕಾರ ಮುನ್ನೆಡೆಸುತ್ತಿದ್ದ, ಪ್ರಧಾನ ಮಂತ್ರಿ ವಿ.ಪಿ.ಸಿಂಗ್ ಯುಎಸ್ ನ ಬೆದರಿಕೆಯನ್ನು ಬದಿಗೊತ್ತಿದ್ದರು. ಏನೇ ಆದರೂ, ವಿಮಾ ಕ್ಷೇತ್ರವನ್ನು ಖಾಸಗೀಕರಣ ಮಾಡುವುದಿಲ್ಲ ಎಂದು ದೃಡವಾಗಿ ಘೋಷಿಸಿದ್ದರು. ಇಂದು ದೇಶ ಭಕ್ತಿಯ ಸೋಗಿನಲ್ಲಿ " ಜಿಂಗೊಯಿಸ್ಟಿಕ್ ಉತ್ಸಾಹ" ಕ್ಕಿಂತ, ಬಿನ್ನವಾಗಿ ನೈಜ ಪರಿಭಾಷೆಯಲ್ಲಿ ದೇಶ ಪ್ರೇಮವನ್ನು, ಅಂದು ವಿ.ಪಿ.ಸಿಂಗ್ ಪ್ರದರ್ಶಿಸಿದ್ದರು ಎಂಬುದಕ್ಕೆ ಇದೊಂದು ಸಾಕ್ಷಿಯಾಗಿದೆ.

ಪ್ರಸಕ್ತ ಸರಕಾರವು, ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತ ವಾಗಿ ಬಾಗಿಲು ತೆರೆದಿದ್ದರೂ ಸಹಾ, ಈ ದೇಶದ ಜನರು ಎಲ್.ಐ.ಸಿ ಯ ಹಿಂದೆಯೇ ದೃಡಚಿತ್ತರಾಗಿ ಇದ್ದಾರೆ ಎಂಬುದಕ್ಕೆ ಇದರ ಸಾಧನೆಗಳು ಸಾಕ್ಷಿಭೂತವಾಗಿವೆ. ವಿಮೆ ಎಂಬುದು, ಪಾಲಿಸಿಕೊಳ್ಳುವ ಸಂದರ್ಭದಲ್ಲಿ, ಅವರಿಗೆ ನೀಡಿದ್ದ " ಭರವಸೆ" ಯನ್ನು ಮಾತ್ರ ಮಾರಟ ಮಾಡುವುದು. ಯಾವುದೇ ಸರಕನ್ನಲ್ಲ. ಇಲ್ಲಿ ನಂಬಿಕೆ, ಮತ್ತು ವಿಶ್ವಾಸಾರ್ಹತೆ ಮಾತ್ರ ಜೀವಂತ. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಪ್ರಕಾರ, " ವಿಮೆ ಯ ವ್ಯಾಪಾರ-ವಹಿವಾಟು ರಾಜ್ಯ ಏಕಸ್ವಾಮ್ಯತೆ ಹೊಂದಿರಬೇಕು ಎಂದು ಬಯಸಿದ್ದರು. ಏಕೆಂದರೆ, ಇದನ್ನು ಇತರೆ, ಹಣಕಾಸು ಉತ್ಪನ್ನಗಳೊಂದಿಗೆ ಸಮೀಕರಿಸುವುದು ಸಾಧ್ಯವಿಲ್ಲ ಎಂದಿದ್ದರು.

ಎಲ್.ಐ.ಸಿ. ಯನ್ನು ಶೇರು ಮಾರುಕಟ್ಟೆ ಯಲ್ಲಿ ಪಟ್ಟಿ ಮಾಡುವವರ ವಾದಗಳಲ್ಲಿ ಯಾವುದೇ, ಹುರುಳಿಲ್ಲ ಎಲ್ಲ ಟೊಳ್ಳು ವಾದಗಳೆಂದು, ಈ ವಾದಗಳನ್ನು ಹಿಮ್ಮೆಟ್ಟಿಸುವುದಾಗಿ, ವಿಮಾ ಸಂಸ್ಥೆಯಲ್ಲಿರುವ ನೌಕರರನ್ನು ಪ್ರತಿನಿಧಿಸುವ, "ಅಖಿಲ ಭಾರತ ವಿಮಾ ನೌಕರರ ಸಂಘ "(ಎ.ಐ.ಐ.ಇ.ಎ) ವಿಶ್ವಾಸದಿಂದ ಹೇಳುತ್ತದೆ. 1951 ರಲ್ಲಿಜನ್ಮತಾಳಿದ ಈ ನೌಕರರ ಸಂಘ, ಅಂದಿನಿಂದ ತನ್ನ ಸದಸ್ಯರನ್ನು, ಸೈದ್ಧಾಂತಿಕವಾಗಿ ಜಾಗೃತಗೊಳಿಸಿಕೊಂಡು ಬಂದಿದೆ. 1994 ರಲ್ಲಿ ಮಲ್ಹೋತ್ರ ಸಮಿತಿ ವಿಮಾ ಕ್ಷೇತ್ರವನ್ನು ಖಾಸಗೀಕರಣ ಮಾಡಬೇಕೆಂದು ನೀಡಿದ್ದ ಶಿಫಾರಸ್ಸು ಗಳನ್ನು ದೃಡವಾಗಿ ತಿರಸ್ಕರಿಸಿತ್ತು. ಅಂದಿನಿಂದ ಸುಮಾರು 25 ವರ್ಷಗಳ ಕಾಲ, ಸುದೀರ್ಘವಾದ ಹೋರಾಟಗಳನ್ನು ಸೈದ್ಧಾಂತಿಕ ವಾಗಿ ನಡೆಸಿಕೊಂಡು ಬರುತ್ತಿದೆ. ಇಂದು ಜೀವ ವಿಮೆ ಅಥವಾ ಸಾಮಾನ್ಯ ವಿಮೆ ಇನ್ನೂ ರಾಷ್ಟ್ರೀಕೃತ ವಿಮಾ ಉದ್ಯಮದ ಅಸ್ತಿತ್ವದ ಲ್ಲಿಯೇ ಉಳಿದಿದೆ ಎಂದಾದರೆ, ಅದಕ್ಕೆ ಎ.ಐ.ಐ.ಇ.ಎ. ನೇತೃತ್ವದಲ್ಲಿ ಅಲ್ಲಿನ ನೌಕಕರ ವರ್ಗ ನಡೆಸಿದ ಸಮರಶೀಲ ಹಾಗೂ ಸುದೀರ್ಘ ಚಳುವಳಿ ಪ್ರಮುಖ ಪಾತ್ರವಹಿಸಿದೆ.

ಎಲ್.ಐ.ಸಿ ಯ ಮುಂದೆ ಸಾಕಷ್ಟು ದೊಡ್ಡ ಪ್ರಮಾಣದ ಸವಾಲುಗಳಿವೆ. ಭಾರತೀಯ ವಿಮಾ ಮಾರುಕಟ್ಟೆ ಈಗಾಗಲೇ ಮೂರು ಹಂತದ ಸವಾಲುಗಳನ್ನು ಎದುರುಸಿ, ದೃಡಚಿತ್ತದಿಂದ ತನ್ನ ಅದ್ಭುತವಾದ ಸಾಧನೆಗಳನ್ನು ಇತಿಹಾಸದಲ್ಲಿ ದಾಖಲಿಸುತ್ತಾ, ಮುಂದುವರಿಯುತ್ತಿದೆ. ಮೊದಲ ಹಂತದಲ್ಲಿ, ರಾಷ್ಟ್ರೀಕರಣ ಕ್ಕೆ ಮುನ್ನ ಖಾಸಗಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಆಕ್ರಮಣಗಳನ್ನು ಎದುರಿಸಿ ಜೀವ ವಿಮೆಯನ್ನು 1956 ರಲ್ಲಿ ರಾಷ್ಟ್ರೀಕರಣ ಮಾಡಲಾಯಿತು. ಅಲ್ಲಿಂದ ಎರಡನೇ ಹಂತದಲ್ಲಿ, ರಾಷ್ಟ್ರೀಕೃತ ಉದ್ಯಮವಾಗಿ 33 ವರ್ಷ ಗಳ ಅವಧಿಯಲ್ಲಿ, ತನಗೆ ವಹಿಸಿದ್ದ ಉದ್ದೇಶಗಳ ಯಶೋಗಾಥೆಯನ್ನು ಪರಿಪೂರ್ಣ ಗೊಳಿಸಿಕೊಂಡು ಬಂದಿದೆ. ಆ ನಂತರ, 1989 ರಿಂದ ಇಲ್ಲಿಯವರೆಗೂ, ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ " ತನ್ನ ಪ್ರಾಬಲ್ಯ"' ವನ್ನು ಮೇಲೆತ್ತಿ ಮೆರೆದಿದೆ. ಈ ಎಲ್ಲಾ ಹಂತಗಳಲ್ಲೂ ಅಖಿಲ ಭಾರತ ವಿಮಾ ನೌಕರರ ಸಂಘವು, ತನ್ನ ಸೈದ್ಧಾಂತಿಕ ಹೋರಾಟಗಳ ಮೂಲಕ ಸಂಸ್ಥೆಯನ್ನು ರಕ್ಷಿಸುವ ಹೊಣೆಯನ್ನು ಯಶಸ್ವಿಯಾಗಿ ನಿಭಾಯಿಸಿದೆ ಎಂಬ ಅಂಶವನ್ನು ಯಾರು ಮರೆಯುವಂತ್ತಿಲ್ಲ. ಮುಂದಿರುವ ಸವಾಲುಗಳನ್ನು ಎದುರಿಸುವಲ್ಲಿಯೂ ಅದು ಯಶಸ್ಸು ಕಾಣಲಿ ಎಂದು ಆಶಿಸೋಣ. ಸೈದ್ಧಾಂತಿಕ ಹೋರಾಟಕ್ಕೆ ಎಂದೆಂದಿಗೂ ಬೆಲೆ ಸಿಕ್ಕೇ ಸಿಗುತ್ತದೆ ಎಂಬುದರಲ್ಲಿ ನಂಬಿಕೆಯಿಡೋಣ.

– ನಾಗರಾಜ ನಂಜುಂಡಯ್ಯ

ಹವಾಮಾನ ಬದಲಾವಣೆ ತಡೆಯಲು ತಾಳಬಲ್ಲ ಕೃಷಿಗೆ............ ಪುಟ 16 ರಿಂದ

ಹೊಂದಿದ ಮತ್ತು ಮರುಭೂಮೀಕರಣಕ್ಕೆ ಒಳಗಾದ ಪ್ರದೇಶದಲ್ಲಿ ವಾಸಿಸುತ್ತಿರುವ ಮಿಲಿಯಾಂತರ ಜನರು ಹವಾಮಾನ ಬದಲಾವಣೆಗಳಿಂದ ಇನ್ನಷ್ಟು ಸಂಕಷ್ಟಕ್ಕೊಳಗಾಗುತ್ತಾರೆ ಎನ್ನುತ್ತದೆ ವರದಿ. ಭಾರತದ ಭೂಸವೆತದಿಂದ ಆದ ನಷ್ಟ 2014–15ರ ಭಾರತದ ಜಿಡಿಪಿಯ ಶೇ. 2.5 ರಷ್ಟು. ಅದು ಕೃಷಿ, ಅರಣ್ಯ ಮತ್ತು ಮೀನುಗಾರಿಕೆ ಕ್ಷೇತ್ರದಲ್ಲಿ ಸೇರಿಸಲಾದ ಒಟ್ಟು ಮೌಲ್ಯದ ಶೇ. 15ರಷ್ಟು, ಎಂದು ಕೆಲವು ಅಧ್ಯಯನಗಳು ಅಂದಾಜಿಸಿವೆ. ಭೂಬಳಕೆಯ ತೀವ್ರತೆಯ ಹೆಚ್ಚಳ, ವಾಣಿಜ್ಯ ಬೆಳೆಗಳ ಉತ್ಪಾದನೆ ಮತ್ತು ಪಶುಸಂಗೋಪನೆಗೆ ಭೂಬಳಕೆಯ ಪರಿವರ್ತನೆ, ಅರಣ್ಯನಾಶ ಮತ್ತು ಭೂಸವೆತ – ಇವುಗಳು ಹಸಿರುಮನೆ ಅನಿಲಗಳ ಸೂಸುವಿಕೆಯ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ವರದಿ ಹೇಳುತ್ತದೆ.

ಮಾನವ ಚಟುವಟಿಕೆಗಳಿಂದ ಉಂಟಾಗುವ ಇಂಗಾಲದ ಡೈ ಆಕ್ಸೈಡ್, ಮಿಥೇನ್ ಮತ್ತು ನೈಟ್ರಸ್ ಆಕ್ಸೈಡ್ ಅನಿಲಗಳ ಸೂಸುವಿಕೆಯ ಶೇ. 23ರಷ್ಟು ಕೃಷಿ, ಅರಣ್ಯ ಮತ್ತು ಭೂಬಳಕೆಯ ಬದಲಾವಣೆಗಳಿಂದ ಆಗುತ್ತದೆ ಎಂದು ಅಂದಾಜಿಸಲಾಗಿದೆ. ಭೂಸವೆತವನ್ನು ತಿರುವುಮುರುವು ಮಾಡುವ ಮತ್ತು ತಾಳಬಲ್ಲ ಕೃಷಿಗೆ ಕ್ರಮಗಳು ಈ ಪರಿಸ್ಥಿತಿಗೆ ಸ್ಪಂದಿಸಬಲ್ಲ ಅತ್ಯಾವಶ್ಯಕ ಕ್ರಮಗಳು ಎಂದು ವರದಿಯಲ್ಲಿ ಗುರುತಿಸಲಾಗಿದೆ. ವ್ಯಾಪಕ 'ಸಮೀಪಗಾಮಿ' ಕ್ರಮಗಳಿಂದ ಸಾಕಷ್ಟು ಪ್ರಯೋಜನಗಳು ಲಭಿಸಲಿವೆ ಎಂದು ವರದಿ ಒತ್ತಿ ಹೇಳುತ್ತದೆ.

ಈ ವರದಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಕಾಳಜಿಯಾಗಿರಬೇಕಾದ್ದನ್ನು ಎತ್ತಿ ಹಿಡಿಯುವಂತೆ ಕಾಣುತ್ತದೆ. ಆದರೆ ವರದಿಯಲ್ಲಿ ಸರಕಾರಗಳಿಗೆ ಅತ್ಯಾವಶ್ಯಕ ನೀತಿಗಳ ಶಿಫಾರಸು ಮಾಡುವ 'ನೀತಿ ನಿರ್ಧಾರಕರಿಗೆ ಸಾರಾಂಶ' ಭಾಗದ ಪ್ರಮುಖ ಲಕ್ಷಣ ವಿಭೇಧೀಕರಣದ ಪೂರ್ಣ ಕೊರತೆ ಎನ್ನಬಹುದು. ಹಳೆಯ ಹಾನಿಕಾರಕ ಕ್ರಮವನ್ನು ಮಿತಗೊಳಿಸುವ ತಗ್ಗಿಸುವ ಮತ್ತು ಹೊಸ ಕ್ರಮವನ್ನು ಅಳವಡಿಸುವುದರ ಮಧ್ಯೆ ವರದಿ ವ್ಯತ್ಯಾಸವನ್ನು ಕಾಣುವುದಿಲ್ಲ. ಇವನ್ನು ಒಟ್ಟಾಗಿಯೇ ತೆಗೆದುಕೊಳ್ಳುತ್ತದೆ. ಹಳೆಯ ಹಾನಿಕಾರಕ ಕ್ರಮವನ್ನು ಮಿತಗೊಳಿಸುವ ತಗ್ಗಿಸುವ ಸಾಧ್ಯತೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅತ್ಯಧಿಕವಿದೆ. ಮಿಲಿಯಾಂತರ ಸಣ್ಣ ಮತ್ತು ಬಡ ರೈತರಿರುವ ಹಾಗೂ, ಹಾನಿಕಾರಕ ಅನಿಲಗಳು ಈಗಾಗಲೇ ಕಡಿಮೆ ಇರುವ ಪಶುಸಂಗೋಪನೆಯಲ್ಲಿ ತೊಡಗಿರುವ ಸಣ್ಣ ಉತ್ಪಾದಕರಿರುವ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಹೊಸ ಕ್ರಮಗಳನ್ನು ಅಳವಡಿಸುವುದು ನಿಜವಾಗಿಯೂ ಸವಾಲು. ಅಲ್ಲದೆ ಈ ದೇಶಗಳಲ್ಲಿ ಅವರು ಮರುಭೂಮೀಕರಣ ಮತ್ತು ಭೂಸವೆತಗಳಿಂದ ತೀವ್ರವಾಗಿ ಬಾಧಿತರಾಗಿದ್ದಾರೆ.

ಕೃಷಿ ಅರಣ್ಯ ಹಾಗೂ ಭೂಬಳಕೆಯ ಬದಲಾವಣೆಯ ಕ್ಷೇತ್ರದ ಅನಿಲ ಸೂಸುವಿಕೆಯ ವಿಶ್ಲೇಷಣೆಯಲ್ಲಿ ವರದಿಯು "ಜಾಗತಿಕ ಆಹಾರ ವ್ಯವಸ್ಥೆ" ಎಂಬ ಪರಿಕಲ್ಪನೆಯನ್ನು ಮುಂದೆ ಮಾಡಿ, ಉತ್ಪಾದನೆಯ ಮೊದಲಿನ ಮತ್ತು ನಂತರದ (ಬಿಸಿಲಲ್ಲಿ ಒಣಗಿಸುವ, ಶೇಖರಿಸುವ, ಮಾರುಕಟ್ಟೆಗೆ ಸಾಗಾಣಿಕೆ ಮಾಡುವ) ಎಲ್ಲಾ ಚಟುವಟಿಕೆಗಳನ್ನು ಸೇರಿಸಿ ಈ ಕ್ಷೇತ್ರದ 'ಇಂಗಾಲದ ಹೆಜ್ಜೆ–ಗುರುತ'ನ್ನು (ಒಟ್ಟು ಸೂಸುವಿಕೆಯ ಮೂಲಕ ಭೂ–ತಾಪಮಾನ ಏರಿಕೆಯಲ್ಲಿ ಪಾಲಿನ ಸೂಚಕ) ಹೆಚ್ಚಿಸಿದೆ. ಇಂತಹ 'ಒಟ್ಟು ವ್ಯವಸ್ಥೆ'ಯ ಮಟ್ಟದಲ್ಲಿ ಸೂಸುವಿಕೆಯನ್ನು ಅಂದಾಜಿಸುವ ವಿಧಾನವನ್ನು ಇನ್ಯಾವುದೇ ಕ್ಷೇತ್ರದಲ್ಲಿ ಐ.ಪಿ.ಸಿ.ಸಿ. ಇದುವರೆಗೆ ಮಾಡಿಲ್ಲ ಎಂಬುದನ್ನು ಗಮನಿಸಬೇಕು. ಇತರ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ಸೂಸುವಿಕೆಯ ದೊಡ್ಡ ಪಾಲು ಎಂಬುದು ಕಾರಣವಿರಬಹುದೇ? ಕೃಷಿ ಅರಣ್ಯ ಕ್ಷೇತ್ರದ ಇಂತಹ 'ಒಟ್ಟು ವ್ಯವಸ್ಥೆ'ಯ ಅಧ್ಯಯನದ ಅಂಕೆ–ಸಂಖ್ಯೆಗಳನ್ನು ಎಫ್.ಎ.ಒ.(ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆ) ಪ್ರಕಟಿಸಿದಾಗ ಜಾಗತಿಕ ಮಾಧ್ಯಮಗಳಲ್ಲಿ 'ಹಸುಗಳ ಸೂಸುವಿಕೆ ಕಾರುಗಳಿಗಿಂತ ಹೆಚ್ಚು' ಎಂಬ ತಲೆಬರಹಗಳು ಕಾಣಿಸಿಕೊಂಡವು! ಐ.ಪಿ.ಸಿ.ಸಿ.ಯ "ಹವಾಮಾನ ಬದಲಾವಣೆ ಮತ್ತು ಭೂಮಿ"ಯ ಕುರಿತು ವರದಿ ಇದೇ ಎಫ್.ಎ.ಒ ವರದಿಯ ಅಂಕೆ–ಸಂಖ್ಯೆಗಳ ಮೇಲೆ ಆಧಾರಿತ, ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮಾಂಸಾಹಾರ ಬಳಕೆ ಮತ್ತು ಆಹಾರದ ಪೋಲು ಕಡಿತಗೊಳಿಸುವ ಶಿಫಾರಸಿನಲ್ಲೂ ಇದೇ ರೀತಿಯ ವಿಬೇಧೀಕರಣದ ಕೊರತೆಯನ್ನು ಕಾಣಬಹುದು. ತಲಾ ಜಾಗತಿಕ ಮಾಂಸಾಹಾರದ ಲಭ್ಯತೆಯು 2014ರಲ್ಲಿ ಸುಮಾರು 43 ಕೆ.ಜಿ. ಆದರೆ ಏಶ್ಯಾ ಮತ್ತು ಆಫ್ರಿಕಾದ ಮಾಂಸಾಹಾರದ ಲಭ್ಯತೆಯು ಇದರ ಅರ್ಧ ಸಹ ಇರಲಿಲ್ಲ. ಭಾರತದ್ದು ಕೇವಲ 3.7 ಕೆ.ಜಿ. (ಜಾಗತಿಕ ಸರಾಸರಿಯ ಹತ್ತರಲ್ಲಿ ಒಂದು ಭಾಗಕ್ಕಿಂತಲೂ ಕಡಿಮೆ!) ಅಭಿವೃದ್ಧಿ ಹೊಂದಿದ ಶ್ರೀಮಂತ ದೇಶಗಳ ತಲಾ ಮಾಂಸಾಹಾರದ ಲಭ್ಯತೆಯು 80 ಕೆ.ಜಿ. ಇತ್ತು. ಇಂತಹ ಸ್ಥಿತಿಯಲ್ಲಿ ಮಾಂಸಾಹಾರವನ್ನು ಕಡಿತಗೊಳಿಸುವ ನೀತಿ ಅಭಿವೃದ್ಧಿ ಹೊಂದುತ್ತಿರುವ ಬಡದೇಶಗಳ ಜನತೆಯ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ದುಷ್ಪರಿಣಾಮ ಬೀರುತ್ತದೆ. ಒಂದು ಕಡೆ ಅಗತ್ಯ ಪ್ರಮಾಣದ ಪ್ರೋಟೀನ್ ನ ಕೊರತೆಯಿಂದ ಈಗಾಗಲೇ ಬಳಲುತ್ತಿರುವ ಬಡ ಜನರ ಮೇಲೆ, ಇನ್ನೊಂದು ಕಡೆ ಪಶುಸಂಗೋಪನೆಯೇ ಜೀವನಾಧಾರವಾಗಿರುವ ದೊಡ್ಡ ಪ್ರಮಾಣದ ಸಣ್ಣ ಉತ್ಪಾದಕರ ಮೇಲೆ, ಈ ನೀತಿ ತೀವ್ರ ದುಷ್ಪರಿಣಾಮ ಬೀರುತ್ತದೆ. ಪಶು ಹಿಂಡಿನ ಅತಿ ಸಣ್ಣ ಸಂಖ್ಯೆ, ತಲಾ ಪ್ರಾಣಿಗೆ ಕಡಿಮೆ ಹಾಲಿನ ಇಳುವರಿ, ಮತ್ತು ದೊಡ್ಡ ಸಂಖ್ಯೆಯ ಒಟ್ಟು ಪಶುಗಳು ಇರುವ ಭಾರತದ ಪಶು ಸಂಗೋಪನಾ ಆರ್ಥಿಕದ ಆಧುನಿಕೀಕರಣಕ್ಕೆ, ಪಶುಸಂಗೋಪನಾ ಕ್ಷೇತ್ರದ ಮೇಲೆ ಸೂಸುವಿಕೆಯ ಕಡಿತದ ಗುರಿಯನ್ನು ಹೇರುವುದರಿಂದ ತೀವ್ರ ತಡೆಯೊಡ್ಡಿದಂತಾಗುತ್ತದೆ.


ಇದೇ ಧಾಟಿಯಲ್ಲಿ, ವರದಿಯ 'ನೀತಿ ನಿರ್ಧಾರಕರಿಗೆ ಸಾರಾಂಶ', 'ಆಹಾರದ ನಷ್ಟ' ಮತ್ತು 'ಆಹಾರದ ಪೋಲು' ಗಳ ನಡುವೆ ಯಾವುದೇ ಬೇಧ ಮಾಡದೆ ಅವುಗಳ ಬಗ್ಗೆ ಒಟ್ಟಿಗೆ ಸೂಚನೆ ನೀಡುತ್ತದೆ. 'ಆಹಾರದ ನಷ್ಟ' ಬೆಳೆಯ ಕಟಾವು ಮತ್ತು ಆ ಮೇಲಿನ ಬೆಳೆಯ ನಷ್ಟವನ್ನು ಸೂಚಿಸುತ್ತದೆ. 'ಆಹಾರದ ಪೋಲು' ಬಳಕೆಯಲ್ಲಿ ಆಗುವಂಥದ್ದು. ಇವೆರಡನ್ನು ಒಂದೇ ತಕ್ಕಡಿಯಲ್ಲಿ ತೂಗಿ, ಬಡ ದೇಶಗಳ ರೈತರು ಮತ್ತು ಬಳಕೆದಾರರೀರ್ವರಿಗೂ 'ಆಹಾರದ ನಷ್ಟ'ಕ್ಕೆ ಹೊಸ ಕ್ರಮಗಳನ್ನು ಅಳವಡಿಸುವುದರ ಪ್ರಾಮುಖ್ಯತೆಯನ್ನು ಕಡೆಗಣಿಸುತ್ತದೆ.

ಈ ವರದಿಯಲ್ಲಿ ಇತರ ಆರ್ಥಿಕ ವಿಷಯಗಳ ಬಗ್ಗೆ ಸಹ ಸಮಾನತೆಯ ಮತ್ತು ವಿಬೇಧೀಕರಣದ ದೃಷ್ಟಿಯಿಂದ ಹೆಚ್ಚಿನದನೇನನ್ನೂ ನಿರೀಕ್ಷಿಸುವಂತಿಲ್ಲ. ತೀರಾ ಭಿನ್ನವಾದವುಗಳನ್ನು 'ಸಮಾನವಾಗಿ' ಕಾಣಲಾಗುತ್ತದೆ. ಕೃಷಿ ಬೆಳೆಗಳ ಇಳುವರಿಯಲ್ಲಿ ವ್ಯತ್ಯಾಸವು ಗಂಭೀರ ಅಭಿವೃದ್ಧಿಯ ಕೊರತೆ ಎಂದು ಪರಿಗಣಿಸಲಾಗುವುದಿಲ್ಲ. ಆಹಾರ ಭದ್ರತೆಯ ಅಧ್ಯಾಯದಲ್ಲಿ ಇಳುವರಿಯಲ್ಲಿ ವ್ಯತ್ಯಾಸಗಳನ್ನು ಕಡಿಮೆ ಮಾಡುವುದನ್ನು, ಕೃಷಿಯಲ್ಲಿರುವ ಭೂಮಿಯನ್ನು ಕಡಿತಗೊಳಿಸುವ ಕ್ರಮವಾಗಿ ಮಾತ್ರ ನೋಡಲಾಗಿದೆ. ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವೆ ಅಭಿವೃದ್ಧಿಯ ಮಟ್ಟದಲ್ಲಿ ಅಗಾಧ ವ್ಯತ್ಯಾಸಗಳಿದ್ದರೂ, 2020–25ರ ಅವಧಿಯಲ್ಲಿ ಎರಡೂ ರೀತಿಯ ದೇಶಗಳೂ ಸೂಸುವಿಕೆಯನ್ನು ಕಡಿತ ಆರಂಭಿಸಬೇಕು ಎಂದು ವರದಿ ಸೂಚಿಸುತ್ತದೆ.

ಜಾಗತಿಕ ತಾಪಮಾನ ಏರಿಕೆಯನ್ನು ಮಿತಿಗೊಳಿಸಿದರೆ ತನ್ನಷ್ಟಕ್ಕೇ ತಾನೇ ಎಲ್ಲರ ಉದ್ಧಾರ ಆಗುತ್ತದೆ, ಸಮಾನತೆಯೂ ಸಾಧಿತವಾಗುತ್ತದೆ. ಬಡ ದೇಶಗಳಿಗೆ ಅಭಿವೃದ್ಧಿಗೆ ಬೇಕಾದ – ತಂತ್ರಜ್ಞಾನ ವರ್ಗಾವಣೆ, ಸಾಮರ್ಥ್ಯ ಬೆಳೆಸುವುದು ಮತ್ತು ಇವೆಲ್ಲದಕ್ಕೆ ಬೇಕಾದ ಹಣಕಾಸು – ಇವ್ಯಾವುವೂ ಇಲ್ಲದೆ ಇದು ಆಗುತ್ತದೆ. ಇಂತಹ ಕಾರ್ಯಸಾಧ್ಯವಲ್ಲದ ಧೋರಣೆ ಈ ವರದಿಯ ತುಂಬಾ ಕಂಡು ಬರುತ್ತದೆ.

ಮೇಲೆ ಹೇಳಲಾದ ವಿಬೇಧೀಕರಣ ಮತ್ತು ಸಮಾನತೆಯ ವಿಷಯ ಮುಖ್ಯವಾದುದು. ಏಕೆಂದರೆ ಹವಾಮಾನ ಬದಲಾವಣೆ ತಡೆಯುವ 'ಪ್ಯಾರೀಸ್ ಒಪ್ಪಂದ'ದಲ್ಲಿ ಪ್ರಗತಿ ಸಾಧಿಸಲು ಮತ್ತು ಅದನ್ನು ಅಳೆಯಲು ಐ.ಪಿ.ಸಿ.ಸಿ. ವರದಿಗಳೇ ಆಧಾರ. ಆದರೆ ಐ.ಪಿ.ಸಿ.ಸಿ. ವರದಿ ಈ ವರೆಗಿನ ಹಾಗೂ ಇಂದಿನ ವೈಜ್ಞಾನಿಕ ಮತ್ತು ನೀತಿ–ಧೋರಣೆಗಳ ಸಾಹಿತ್ಯದ ಮೇಲೆ ಅವಲಂಬಿಸಿದೆ. ಹೆಚ್ಚಾಗಿ ಶ್ರೀಮಂತ ದೇಶಗಳಲ್ಲಿ ಸೃಷ್ಟಿಯಾದ ಆ ಸಾಹಿತ್ಯದಲ್ಲಿ ಬಡ ದೇಶಗಳ ಅಭಿವೃದ್ಧಿಯ ಸಮಸ್ಯೆಗಳು, ಅವುಗಳ ಕಣ್ಣೋಟಗಳಿಗೆ ಸ್ಥಾನವಿಲ್ಲ. ಸಮಾನತೆಯನ್ನು ಸಾಧಿಸಲು ಭಿನ್ನತೆಯನ್ನು ಗಮನಿಸಿ ಅದನ್ನು ಕಡಿಮೆ ಮಾಡುವ ಧೋರಣೆಯಂತೂ ದೂರ ಉಳಿಯಿತು. ಹವಾಮಾನ ನೀತಿಯ ಸಮಜೋ–ಆರ್ಥಿಕ ಆಯಾಮಗಳಿಗೆ ವೈಜ್ಞಾನಿಕ ಪರಿಣತಿ ಮತ್ತು ರಾಜಕೀಯ ಕಣ್ಣೋಟ ಎರಡೂ ಬೇಕು. ವಿಜ್ಞಾನವೂ ಬೇಕು, ಪ್ರಜಾಸತ್ತಾತ್ಮಕ ಸಹಮತವೂ ಬೇಕು. ಇವು ಈ ವರದಿಯಲ್ಲಿ ಕಂಡು ಬಂದಿಲ್ಲ. ಇದನ್ನು ಸರಿಪಡಿಸಲು ಬಡದೇಶಗಳು ಒಂದಾಗಿ ಒತ್ತಡ ಹೇರದಿದ್ದರೆ, ಕೃಷಿಯಲ್ಲಿ ಹವಾಮಾನ ನೀತಿಯ ಜಾರಿ ಮತ್ತು ಕಾರ್ಯಾಚರಣೆಯು ಕಾರ್ಯಸಾಧ್ಯವಲ್ಲ. ●

JANASHAKTHI KANNADA VARA PATRIKE September 9-15, 2019 Price: Rs. 10/- Date of Publication: 6 September 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



“ಹವಾಮಾನ ಬದಲಾವಣೆ ಮತ್ತು ಭೂಮಿ”ಯ ಕುರಿತು ರಚಿಸಲಾದ ತಜ್ಞರ ತಂಡದ ವರದಿಯನ್ನು ಇತ್ತೀಚೆಗೆ ಸ್ವಿಟ್ಜರ್‌ಲ್ಯಾಂಡಿನ ಜಿನೇವಾ ನಗರದಲ್ಲಿ ನಡೆದ ಐ.ಪಿ.ಸಿ.ಸಿ.ಯ 50ನೇ ಅಧಿವೇಶನದಲ್ಲಿ ಪ್ರಸ್ತುತ ಪಡಿಸಿ ಅಂಗೀಕರಿಸಲಾಯಿತು. ಈ ವರದಿ ಕೃಷಿ ಮತ್ತು ಅರಣ್ಯ ಭೂಮಿ ಸಂಬಂಧಿ ಮಾನವ ಚಟುವಟಿಕೆಗಳ ಕುರಿತಾಗಿದೆ. ಈ ವರದಿ ಕೊಟ್ಟಿರುವ ಎರಡು ಶಿಫಾರಸುಗಳು ವಿಶೇಷವಾಗಿ ಬಹುಚರ್ಚಿತವಾಗಿವೆ. ಒಂದು ಭೂ–ತಾಪಮಾನ ಏರಿಕೆಗೆ ಕಾರಣವಾಗುವ ‘ಹಸಿರುಮನೆ ಅನಿಲ’ಗಳ ಸೂಸುವಿಕೆ”ಯನ್ನು ಕಡಿಮೆ ಮಾಡುವ ತಾಳಬಲ್ಲ ಕೃಷಿಯಲ್ಲಿನ ಬದಲಾವಣೆಗಳು. ಇನ್ನೊಂದು ಮಾಂಸಾಹಾರವನ್ನು ದೊಡ್ಡ ಪ್ರಮಾಣದಲ್ಲಿ ಕಡಿತ ಮಾಡಿ ಸಸ್ಯಾಹಾರಕ್ಕೆ ಉತ್ತೇಜನ ಕೊಡುವುದು. ಈ ವರದಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಕಾಳಜಿಯಾಗಿರಬೇಕಾದ್ದನ್ನು ಎತ್ತಿ ಹಿಡಿಯುವಂತೆ ಕಾಣುತ್ತದೆ. ಆದರೆ ವರದಿಯಲ್ಲಿ ಸರಕಾರಗಳಿಗೆ ಅತ್ಯಾವಶ್ಯಕ ನೀತಿಗಳ ಶಿಫಾರಸು ಮಾಡುವ ‘ನೀತಿ ನಿರ್ಧಾರಕರಿಗೆ ಸಾರಾಂಶ’ ಭಾಗದ ಪ್ರಮುಖ ಲಕ್ಷಣ, ಶ್ರೀಮಂತ ಮತ್ತು ಬಡ ದೇಶಗಳ ನಡುವೆ ವಿಭೇಧೀಕರಣದ ಮತ್ತು ಸಮಾನತೆಯ ಪೂರ್ಣ ಕೊರತೆ ಎನ್ನಬಹುದು. ಹವಾಮಾನ ನೀತಿಯ ಸಮಜೋ–ಆರ್ಥಿಕ ಆಯಾಮಗಳಿಗೆ ವೈಜ್ಞಾನಿಕ ಪರಿಣತಿ ಮತ್ತು ರಾಜಕೀಯ ಕಣ್ಣೋಟ ಎರಡೂ ಬೇಕು. ವಿಜ್ಞಾನವೂ ಬೇಕು, ಪ್ರಜಾಸತ್ತಾತ್ಮಕ ಸಹಮತವೂ ಬೇಕು. ಇವು ಈ ವರದಿಯಲ್ಲಿ ಕಂಡು ಬಂದಿಲ್ಲ. ಇದನ್ನು ಸರಿಪಡಿಸಲು ಬಡದೇಶಗಳು ಒಂದಾಗಿ ಒತ್ತಡ ಹೇರದಿದ್ದರೆ, ಹವಾಮಾನ ನೀತಿಯ ಜಾರಿ ಮತ್ತು ಕಾರ್ಯಾಚರಣೆಯು ಕಾರ್ಯಸಾಧ್ಯವಲ್ಲ.

ಹವಾಮಾನ ಬದಲಾವಣೆ ತಡೆಯಲು ತಾಳಬಲ್ಲ ಕೃಷಿಗೆ ಮತ್ತು ಮಾಂಸಾಹಾರದಲ್ಲಿ ಕಡಿತಕ್ಕೆ ಕ್ರಮಗಳು?

ವಸಂತರಾಜ ಎನ್.ಕೆ.

ಭಾರತದಲ್ಲಿ ಕೆಲವು ವಾರಗಳಿಂದ ಹಲವು ರಾಜ್ಯಗಳಲ್ಲಿ ವಿಪರೀತ ಮಳೆ ಸುರಿಯುತ್ತಿದ್ದು ತೀವ್ರ ನೆರೆ ಪರಿಸ್ಥಿತಿ ಉಂಟಾಗಿದೆ. ಅದರ ಮೊದಲು ಸರಿಯಾದ ಕಾಲಕ್ಕೆ ಮಳೆ ಬರದೆ ತೀವ್ರ ಬರ ಪರಿಸ್ಥಿತಿಯಿತ್ತು. ದೀರ್ಘಕಾಲೀನವಾಗಿ ನೋಡುವುದಾದರೆ ಹವಾಮಾನದಲ್ಲಿ ಏರು ಪೇರು ಸಾಮಾನ್ಯ. ಆದರೂ ಕಳೆದ ಕೆಲವು ವರ್ಷಗಳಲ್ಲಿ ನಮ್ಮ ದೇಶ ಸೇರಿದಂತೆ ಜಗತ್ತಿನಾದ್ಯಂತ ಕಂಡು ಬರುತ್ತಿರುವ ಹವಾಮಾನ ವೈಪರೀತ್ಯಗಳು ‘ಸಾಮಾನ್ಯ’ವಲ್ಲ. ಭೂ–ಪರಿಸರವನ್ನು ಜೀವ ಸಂಕುಲಗಳಿಗೆ ಪ್ರತಿಕೂಲವಾಗುವ ರೀತಿಯಲ್ಲಿ ತೀವ್ರವಾಗಿ ಬದಲಾಯಿಸುವ ಅಥವಾ ನಾಶ ಮಾಡುವ ಮಾನವ ಚಟುವಟಿಕೆಗಳ ಫಲ ಇದು ಎನ್ನಲಾಗುತ್ತಿದೆ. ಈ ಎಲ್ಲ ಬದಲಾವಣೆಗಳಿಂದ ಭೂ–ತಾಪಮಾನ ಸತತವಾಗಿ ಏರಿಕೆಯಾಗುತ್ತಿರುವುದು ಮತ್ತು ಹವಾಮಾನದಲ್ಲಿ ವೈಪರೀತ್ಯಗಳು ಅದರ ಒಂದು ಸೂಚನೆ. ಇದು ಹಲವು ರೀತಿಗಳಲ್ಲಿ ಅತ್ಯಂತ ತೀವ್ರ ದುಷ್ಪರಿಣಾಮಗಳನ್ನು ಬೀರುತ್ತಿದ್ದು ಇದನ್ನು ತಡೆಯದಿದ್ದರೆ ಭೂಮಿಯ ಮೇಲಿರುವ ಸಮಸ್ತ ಜೀವಸಂಕುಲ ‘ಸಾಮೂಹಿಕ ಆತ್ಮಹತ್ಯೆ’ ಮಾಡಿಕೊಂಡಂತೆ ಎಂದು ಹೇಳಲಾಗಿದೆ. ಇದು ದೀರ್ಘಕಾಲೀನ ಆಳವಾದ ಅಧ್ಯಯನಗಳಿಂದ ವೈಜ್ಞಾನಿಕವಾಗಿ ಸಿದ್ಧವಾಗಿದ್ದು, ಇದನ್ನು ‘ಹವಾಮಾನ ಬದಲಾವಣೆ’ ಎಂದು ಕರೆಯಲಾಗುತ್ತಿದೆ.

ಈ ‘ಹವಾಮಾನ ಬದಲಾವಣೆ’ಯನ್ನು ಸತತವಾಗಿ ವೈಜ್ಞಾನಿಕವಾಗಿ ಅಧ್ಯಯನ ಮಾಡಿ, ಮಾನವ ಜೀವನದ ವಿವಿಧ ಕ್ಷೇತ್ರಗಳ ಚಟುವಟಿಕೆಗಳ ಮೇಲೆ ಅದರ ಭವಿಷ್ಯದ ದುಷ್ಪರಿಣಾಮಗಳ ಸಾಧ್ಯತೆಗಳನ್ನು ಅಂದಾಜು ಮಾಡಿ, ಆ ದುಷ್ಪರಿಣಾಮಗಳನ್ನು ತಡೆಯುವ ಕ್ರಮಗಳನ್ನು ಯೋಜಿಸಲು ಜಗತ್ತಿನ ಎಲ್ಲಾ ದೇಶಗಳ ಸರಕಾರಗಳು ಸೇರಿ “ಹವಾಮಾನ ಬದಲಾವಣೆಯ ಕುರಿತು ಅಂತರ–ಸರಕಾರ ತಜ್ಞರ ತಂಡ”ವನ್ನು (ಐ.ಪಿ.ಸಿ.ಸಿ. – Inter-governmental Panel on Climate Change) ರಚಿಸಿವೆ. ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮವು (ಯು.ಎನ್.ಇ.ಪಿ.) 1988ರಲ್ಲಿ ಐ.ಪಿ.ಸಿ.ಸಿ.ಯನ್ನು ರಚಿಸಿದ್ದು, ಇದು ‘ವಿಶ್ವಸಂಸ್ಥೆಯ ಹವಾಮಾನ ಬದಲಾವಣೆಯ ಕುರಿತು ಚೌಕಟ್ಟು ಒಪ್ಪಂದ’ಕ್ಕೆ ವೈಜ್ಞಾನಿಕ ಮಾಹಿತಿಯನ್ನು ನೀಡುತ್ತಾ ಬಂದಿದೆ. 2015ರಲ್ಲಿ ಹವಾಮಾನ ಬದಲಾವಣೆಯ ಕುರಿತು ಪ್ಯಾರೀಸ್ ಒಪ್ಪಂದಕ್ಕೆ ಐ.ಪಿ.ಸಿ.ಸಿ. ತಯಾರಿಸಿದ 5 ನೇ ಅಂದಾಜು ವರದಿ ಆಧಾರವಾಗಿತ್ತು.

“ಹವಾಮಾನ ಬದಲಾವಣೆ ಮತ್ತು ಭೂಮಿ”ಯ ಕುರಿತು ರಚಿಸಲಾದ ತಜ್ಞರ ತಂಡದ ವರದಿಯನ್ನು ಇತ್ತೀಚೆಗೆ ಸ್ವಿಟ್ಜರ್‌ಲ್ಯಾಂಡಿನ ಜಿನೇವಾ ನಗರದಲ್ಲಿ ನಡೆದ ಐ.ಪಿ.ಸಿ.ಸಿ.ಯ 50ನೇ ಅಧಿವೇಶನದಲ್ಲಿ ಪ್ರಸ್ತುತ ಪಡಿಸಿ ಅಂಗೀಕರಿಸಲಾಯಿತು. ಈ ವರದಿ ಕೃಷಿ ಮತ್ತು ಅರಣ್ಯ ಭೂಮಿ ಸಂಬಂಧಿ ಮಾನವ ಚಟುವಟಿಕೆಗಳ ಕುರಿತಾಗಿದೆ. ಈ ವರದಿ ಕೊಟ್ಟಿರುವ ಎರಡು ಶಿಫಾರಸುಗಳು ವಿಶೇಷವಾಗಿ ಬಹುಚರ್ಚಿತವಾಗಿವೆ. ಒಂದು ಭೂ–ತಾಪಮಾನ ಏರಿಕೆಗೆ ಕಾರಣವಾಗುವ ‘ಹಸಿರುಮನೆ ಅನಿಲ’ಗಳ ಸೂಸುವಿಕೆಯನ್ನು ಕಡಿಮೆ ಮಾಡುವ ತಾಳಬಲ್ಲ ಕೃಷಿಯಲ್ಲಿನ ಬದಲಾವಣೆಗಳು. ಇನ್ನೊಂದು ಮಾಂಸಾಹಾರವನ್ನು ದೊಡ್ಡ ಪ್ರಮಾಣದಲ್ಲಿ ಕಡಿತ ಮಾಡಿ ಸಸ್ಯಾಹಾರಕ್ಕೆ ಉತ್ತೇಜನ ಕೊಡುವುದು.

ಈ ವರದಿಯಲ್ಲಿ ‘ಭೂಮಿ’ಯೆನ್ನುವುದನ್ನು ಬಹಳ ವಿಶಾಲವಾದ ಅರ್ಥದಲ್ಲಿ ಬಳಸಲಾಗಿದೆ. ಕೃಷಿ ಮತ್ತು ಅರಣ್ಯ ಭೂಮಿಯ ಬಳಕೆ; ಸ್ಥಿರ–ಹಿಮ (ಶಾಶ್ವತವಾಗಿ ಅಂದರೆ ಎರಡು ವರ್ಷಗಳಿಗಿಂತ ಹೆಚ್ಚು ಕಾಲ ಘನೀಕರಿಸಿದ ಭೂಮಿ) ಕರಗುವಿಕೆ, ಮರುಭೂಮೀಕರಣ ಮತ್ತು ಭೂಸವೆತ ಮುಂತಾದವುಗಳಿಂದ ಉಂಟಾದ ಭೂಮಿ ಬಳಕೆಯಲ್ಲಿನ ಬದಲಾವಣೆಗಳು, ಕೃಷಿ ಮತ್ತು ಅರಣ್ಯಕ್ಕೆ ಭೂಮಿಯಿಂದ ಸಿಗುವ ಎಲ್ಲಾ ‘ಪರಿಸರ ವ್ಯವಸ್ಥೆಯ ಸೇವೆ’ಗಳು – ಈ ವಿಶಾಲ ಅರ್ಥದಲ್ಲಿ ‘ಭೂಮಿ’ಯಲ್ಲಿ ಸೇರಿಕೊಳ್ಳುತ್ತವೆ. ಜಾಗತಿಕ ತಾಪಮಾನ ಏರಿಕೆಯಿಂದ ಉಂಟಾಗುವ ಹವಾಮಾನ ವೈಪರೀತ್ಯಗಳಿಂದ ಆಗುವ ನೆರೆ, ಭೂಸವೆತ ಮತ್ತು ಬರಗಳಿಂದ ಭೂಅವನತಿ ಆಗುತ್ತಾ ಹೋಗುತ್ತದೆ ಎಂಬುದು ವರದಿಯ ಪ್ರಮುಖ ತೀರ್ಮಾನಗಳಲ್ಲಿ ಒಂದು. ಇದು ವಿಶೇಷವಾಗಿ ಉಷ್ಣವಲಯ ಮತ್ತು ಉಪ–ಉಷ್ಣವಲಯಗಳಲ್ಲಿ ಕೃಷಿ ಬೆಳೆಗಳ ಇಳುವರಿಯ ಮತ್ತು ಪಶುಸಂಗೋಪನೆಯ ಉತ್ಪಾದಕತೆಗಳ ಮೇಲೆ ಅತ್ಯಂತ ತೀವ್ರ ದುಷ್ಪರಿಣಾಮಗಳನ್ನು ಬೀರುತ್ತದೆ. ಭಾರತ ಇಂತಹ ತೀವ್ರ ದುಷ್ಪರಿಣಾಮಗಳನ್ನು ಎದುರಿಸಲಿರುವ ಪ್ರಮುಖ ಪ್ರದೇಶ. ಹವಾಮಾನ ವೈಪರೀತ್ಯದ ಪರಿಣಾಮಗಳನ್ನು ಭಾರತ ಈಗಾಗಲೇ ಅನುಭವಿಸುತ್ತಿದೆ. ಹವಾಮಾನ ಬದಲಾವಣೆಯಿಂದ ಭಾರತ ಅನುಭವಿಸಲಿರುವ ಆರ್ಥಿಕ ನಷ್ಟ 2050ರ ಹೊತ್ತಿಗೆ ಜಿಡಿಪಿಯ ಶೇ. 1.8ರ ಮಟ್ಟ ಮುಟ್ಟಲಿದೆ ಎಂದು ವರದಿ ಅಂದಾಜಿಸಿದೆ. ಭೂಅನವನತಿ

ಪುಟ 15 ಕ್ಕೆ





JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**